ಪುರಂದರದಾಸರ ಪ್ರತಿಮಾಜಗತ್ತು

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಪ್ರವೀಣ. ಪಿ

ಮಾರ್ಗದರ್ಶಕರು
ಪ್ರೊ.ಎ.ವಿ. ನಾವಡ

೨೦೦೮

ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ ಬಲ್ಮಠ,
ಮಂಗಳೂರು-೫೭೫೦೦೧

ಪುರಂದರದಾಸರ ಕೃತಿಸಾಹಿತ್ಯ

[illegible]

ಪುರಂದರದಾಸರ ಪ್ರತಿಮಾಜಗತ್ತು

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು

ಪ್ರವೀಣ. ಪಿ

ಮಾರ್ಗದರ್ಶಕರು

ಪ್ರೊ.ಎ.ವಿ. ನಾವಡ

೨೦೦೯

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು-೫೭೫೦೦೧

ಯೋಗ್ಯತಾ ಪತ್ರ

ಪ್ರವೀಣ. ಪಿ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಪುರಂದರದಾಸರ ಪ್ರತಿಮಾಜಗತ್ತು"** ಎಂಬ ಶೀರ್ಷಿಕೆಯಲ್ಲಿ ಈ ಸಂಪ್ರಬಂಧವನ್ನು ಎಂ. ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಪ್ರೊ.ಎ.ವಿ. ನಾವಡ

ಸಂಶೋಧನಾ ಮಾರ್ಗದರ್ಶಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು-೫೭೫೦೦೧

ಪ್ರಮಾಣಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ **"ಪುರಂದರದಾಸರ ಪ್ರತಿಮಾಜಗತ್ತು"** ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ **ಪ್ರೊ.ಎ.ವಿ ನಾವಡ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಪ್ರವೀಣ. ಪಿ

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

ಅಧ್ಯಾಯ ೧

ಪ್ರಸ್ತಾವನೆ

೧.೦

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ೧೨ನೇ ಶತಮಾನದಲ್ಲಿ ವಚನ ಸಾಹಿತ್ಯವು ಎಂತೋ ಅಂತೆ ೧೬ನೇ ಶತಮಾನದಲ್ಲಿ ದಾಸ ಸಾಹಿತ್ಯವು ಹೊಸ ಅಲೆಯನ್ನೆಬ್ಬಿಸಿತು. ದಾಸ ಸಾಹಿತ್ಯದ ಪ್ರಮುಖ ಅಭಿವ್ಯಕ್ತಿ ಪ್ರಕಾರವೆಂದರೆ ಪುರಂದರದಾಸರ ಕೀರ್ತನೆಗಳು. ವಿಜಯನಗರ ಸಾಮ್ರಾಜ್ಯದ ಉನ್ನತಿಯ ಕಾಲದಲ್ಲಿ ಪುರಂದರದಾಸರು ವಚನಕಾರರಂತೆ ಭಕ್ತಿ ಚಳುವಳಿಯ ಹೊಸ ಹುರುಪನ್ನು ತಂದಿತ್ತರು. ವಚನಕಾರರು ಶೈವ ತತ್ವ ಪ್ರತಿಪಾದನೆಗೆ ವಚನಗಳನ್ನು ಬಳಸಿದರೆ ಪುರಂದರದಾಸರು ವೈಷ್ಣವ ತತ್ವವನ್ನು, ಭಕ್ತಿಯನ್ನು ಕೀರ್ತನೆಗಳ ಮೂಲಕ ಅಭಿವ್ಯಕ್ತಿಪಡಿಸಿದರು. ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನವೆಂಬ ನವವಿಧ ಭಕ್ತಿ ಮಾರ್ಗದಲ್ಲಿ ಪುರಂದರದಾಸರು ಕೀರ್ತನೆಗಳನ್ನೇ ಹೆಚ್ಚಾಗಿ ನೆಚ್ಚಿಕೊಂಡರು ಮತ್ತು ಕೀರ್ತನೆಗಳೇ ನವವಿಧ ಭಕ್ತಿಗಳಿಗೆ ತಳಹದಿಯಾಯಿತೆನ್ನಬಹುದು.

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

'ಪುರಂದರದಾಸರ ಪ್ರತಿಮಾಜಗತ್ತು' ವಿಷಯಕ್ಕೆ ಸಂಬಂಧಿಸಿದಂತೆ ಪುರಂದರದಾಸರ ಜೀವನ ಮತ್ತು ವಿಚಾರಧಾರೆಗಳ ಹಿನ್ನೆಲೆಯಲ್ಲಿ ಅವರ ಕೀರ್ತನೆಗಳಲ್ಲಿ ಕಂಡುಬರುವ ಪ್ರತಿಮೆಗಳು, ಅವುಗಳ ವಿಶಿಷ್ಟ ಅಂಶಗಳನ್ನು ಪರಿಶೀಲಿಸಿ ವಿಮರ್ಶಿಸುವ ದೃಷ್ಟಿಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಮಾರ್ಗ ಸಾಹಿತ್ಯಕ್ಕಿಂತ ಭಿನ್ನ ನೆಲೆಯಲ್ಲಿ ದೇಸೀ ಮಾದರಿಯಲ್ಲಿ ರಚಿತವಾದ ಸಾಹಿತ್ಯಗಳಲ್ಲಿ ಎದ್ದು ಕಾಣುವುದೆಂದರೆ ವಚನ ಸಾಹಿತ್ಯ ಮತ್ತು ದಾಸಸಾಹಿತ್ಯ. ಈ ಸಾಹಿತ್ಯಗಳಲ್ಲಿ ಲೋಕಾನುಭವಗಳು ಹೇರಳವಾಗಿ ಪ್ರತಿಮೆಗಳ ರೂಪದಲ್ಲಿ ವ್ಯಕ್ತಗೊಂಡಿವೆ. ಈ ಹಿನ್ನೆಲೆಯಲ್ಲಿ ದಾಸವರೇಣ್ಯರಾದ ಪುರಂದರದಾಸರ ಕೀರ್ತನೆಗಳಲ್ಲಿ ವ್ಯಕ್ತಗೊಂಡ ಲೋಕನೀತಿ, ವೈಚಾರಿಕತೆಗಳ ಹಿನ್ನೆಲೆಯಲ್ಲಿ ಪುರಂದರದಾಸರ ಪ್ರತಿಮಾನಿರ್ಮಿತಿಯ ವಿಶಿಷ್ಟತೆಯನ್ನು ಗುರುತಿಸಿ, ವಿಶ್ಲೇಷಿಸುವ ಉದ್ದೇಶವನ್ನು ಈ ಅಧ್ಯಯನವು ಇರಿಸಿಕೊಂಡಿದೆ.

ಇಲ್ಲಿ ಪುರಂದರದಾಸರ ಕೀರ್ತನೆಗಳ ವಿಶ್ಲೇಷಣೆಯ ಆಧಾರದಲ್ಲಿ ಅವರ ಪ್ರತಿಮಾಭಿವ್ಯಕ್ತಿಯ ಸ್ವರೂಪ ಮತ್ತು ವೈಶಿಷ್ಟ್ಯವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಪುರಂದರದಾಸರಲ್ಲಿನ ಪ್ರತಿಮೆಗಳನ್ನು ಗುರುತಿಸುವುದರೊಂದಿಗೆ ದಾಸಸಾಹಿತ್ಯದಲ್ಲಿ, ಆ ಮೂಲಕ ಕನ್ನಡ ಸಾಹಿತ್ಯದಲ್ಲಿ ಅವರ ಪ್ರತಿಮೆಗಳು ಎಷ್ಟು ಸಶಕ್ತವಾಗಿವೆ ಎಂಬುದನ್ನು ಗುರುತಿಸುವ ಪ್ರಯತ್ನ ಇಲ್ಲಿಯದು.

ಪುರಂದರದಾಸರ ಬಗ್ಗೆ ಈ ಹಿಂದೆ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ. ಇವುಗಳನ್ನು ಪುರಂದರದಾಸರ ಕುರಿತ ಸ್ವತಂತ್ರ ಅಧ್ಯಯನಗಳು, ಸಂಕಲನಾತ್ಮಕ ಸ್ವರೂಪದ ಅಧ್ಯಯನಗಳು ಮತ್ತು ಸಾಹಿತ್ಯ ಚರಿತ್ರೆಯ ಭಾಗವಾಗಿ ನಡೆದ ಅಧ್ಯಯನಗಳು ಎಂದು ಗುರುತಿಸಿದ್ದಾರೆ.[1] ಪುರಂದರದಾಸರ ಸ್ಥಾನವನ್ನು, ಅನನ್ಯತೆಯನ್ನು ಗುರುತಿಸುವುದರೊಂದಿಗೆ ಅವರ ಬಗೆಗಿನ ಹೊಸ ಆಲೋಚನೆಗಳನ್ನು ಮೂಡಿಸುವ ಅಧ್ಯಯನಗಳೂ ನಡೆದಿವೆ. ಅವರ ಅನೇಕ ಕೀರ್ತನೆಗಳಲ್ಲಿ ಪ್ರತಿಮೆಗಳು, ಉಪಮೆಗಳು, ಚಮತ್ಕಾರಗಳು ಸಹಜ ಸುಂದರವಾಗಿ ಆಕಾರ ಪಡೆದಿವೆ. ಆದರೆ ಪ್ರಸ್ತುತ ಅಧ್ಯಯನವು ಪುರಂದರದಾಸರ ಕೀರ್ತನೆಗಳಲ್ಲಿ ಪ್ರತಿಮೆಗಳು ಮೂಡಿದ ಬಗೆ, ಅವುಗಳಲ್ಲಿ ಲೋಕನೀತಿ, ಸಾಮಾಜಿಕ, ಧಾರ್ಮಿಕ ವಿಚಾರಗಳು ವ್ಯಕ್ತಗೊಂಡ ಬಗೆ, ಅವುಗಳ ಆಳ ಅಗಲಗಳನ್ನು ಗುರುತಿಸುವ ಪ್ರಯತ್ನದ ಹಿನ್ನೆಲೆಯಲ್ಲಿ ಸಾಗಿ ಬಂದಿದೆ.

ಪ್ರತಿಮೆ ಕಾವ್ಯದ ಒಂದು ಸ್ವತಂತ್ರ ಘಟಕ. ಅದು ಕಾವ್ಯದ ಜೀವಂತಿಕೆಗೆ ಪೋಷಕವಾಗುವ ಪ್ರಮುಖ ಅಂಗ. ಪುರಂದರದಾಸರ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಅವರ ಕೀರ್ತನೆಗಳಲ್ಲಿನ ಪ್ರತಿಮೆಗಳ ಬಗೆಗೆ ಅಧ್ಯಯನಗಳು ನಡೆದಿಲ್ಲವಾದ್ದರಿಂದ ಆ ಕೊರತೆಯನ್ನು ಮೀರಲು ಇಲ್ಲಿ ಪ್ರಯತ್ನಿಸಲಾಗಿದೆ.

ಪುರಂದರದಾಸರ ಪಾಂಡಿತ್ಯ, ಪ್ರತಿಭೆ, ಜೀವನಾನುಭವಗಳ ಶಕ್ತಿ ಅಗಾಧವಾಗಿದ್ದು ಅವುಗಳನ್ನು ನಾವು ಅವರ ಕೀರ್ತನೆಗಳಲ್ಲಿ ಕಾಣಬಹುದು. ಅವರ ಕೀರ್ತನೆಗಳಲ್ಲಿ ಪ್ರತಿಮೆಗಳು ಧಾರಾಳವಾಗಿ ಮೂಡಿಬಂದಿದ್ದು ಅವುಗಳು ನೀತಿಯ, ಲೋಕನುಭವದ ಕಣಜಗಳೇ ಆಗಿವೆ; ಜೊತೆಗೆ ಆತ್ಮಶೋಧದ ಪ್ರಯತ್ನವೂ ಹೌದು. ಪುರಂದರದಾಸರ ಈ ಪ್ರತಿಮಾಲೋಕ, ಅದರ ವಸ್ತು ವಿನ್ಯಾಸ, ಪ್ರತಿಮೆಗಳಲ್ಲಿ ಸಸ್ಯ, ಪ್ರಾಣಿ ಮುಂತಾದ ಜೀವವೈವಿಧ್ಯಗಳ ಬಳಕೆ ಮತ್ತು ಅವುಗಳ ಮೂಲಕ ಲೋಕನೀತಿಯನ್ನು ಸಾರಿದ ಬಗೆ, ಪ್ರತಿಮಾಜಗತ್ತಿನಲ್ಲಿ ಪುರಂದರದಾಸರ ಪ್ರತಿಮೆಗಳ ಸ್ಥಾನ ನಿರ್ದೇಶಿಸುವುದು ಈ ಅಧ್ಯಯನಕ್ಕೊಳಪಟ್ಟಿದೆ.

೧.೨ ಪುರಂದರದಾಸರ ಹಿನ್ನೆಲೆ

ನುಡಿದಂತೆ ನಡೆದ, ನಡೆದಂತೆ ನುಡಿದ ಕೆಲವೇ ಮಹಾನ್ ವ್ಯಕ್ತಿಗಳಲ್ಲಿ ಪುರಂದರದಾಸರು ಒಬ್ಬರು. ಜೀವನದ ಅನೇಕ ದ್ವಂದ್ವ, ಬದುಕಿನ ಸಂಘರ್ಷಗಳನ್ನೆದುರಿಸಿ ಸಮನ್ವಯವನ್ನು ಸಾಧಿಸಿದವರು ದಾಸರು. ಅವರು ಸಾಮಾನ್ಯ ಜನರ ಬಗೆಗೆ ಚಿಂತಿಸಿ, ಅವರಿಗೆ ಧಾರ್ಮಿಕ, ಸಾಮಾಜಿಕ ವಿಚಾರಗಳನ್ನು ಮನಮುಟ್ಟುವಂತೆ ಕೀರ್ತನೆಗಳ ಮೂಲಕ ತಿಳಿಸಿಕೊಟ್ಟು ಸಮಜಕ್ಕೆ ಅಂಟಿದ ಕಿಲುಬು ತೊಳೆವ ಪ್ರಯತ್ನ ಮಾಡಿದರು. ಕೀರ್ತನೆಗಳು ಅವರಿಗೆ ಸಂವಹನಕ್ಕೆ ಅತ್ಯುತ್ತಮ ಮಾಧ್ಯಮವಾಯಿತು. ಜನಸಾಮಾನ್ಯರ ನಡುವೆ ಬಾಳಿ ಬದುಕಿದ ಪುರಂದರದಾಸರು ಅವರಿಗಾಗಿಯೇ ಹಾಡಿದರು. ತಮ್ಮ ಕೀರ್ತನೆಗಳ ಮೂಲಕ ಜನಸಾಮಾನ್ಯರಿಗೆ ಆಧ್ಯಾತ್ಮಿಕದ ಹಾಗೂ ಪಾರಮಾರ್ಥಿಕದ ಬಗೆಗೆ ಸರಳವಾಗಿ ಪರಿಚಯಿಸಿ ಜನ ಬದುಕಬೇಕೆಂದು ಹಾಡಿದರು.

ದಾಸಶ್ರೇಷ್ಠ ಪುರಂದರದಾಸರ ಕಾಲ ಸು. ಕ್ರಿ.ಶ. ೧೪೮೦ ರಿಂದ ೧೫೬೪. ಇವರು ವರದಪ್ಪನಾಯಕ ಮತ್ತು ಲಕ್ಷ್ಮಕ್ಕ ಇವರ ಮಗನಾಗಿ ಪರಮಗಡ ಎಂಬ ಸ್ಥಳದಲ್ಲಿ ಜನಿಸಿದರು. ಇವರ ಮೊದಲ ಹೆಸರು ಶೀನಿವಾಸ ನಾಯಕ. ಬಾಲ್ಯದಲ್ಲಿಯೇ ಸಾಹಿತ್ಯ, ಸಂಗೀತ, ಸಂಸ್ಕೃತ, ವೇದಪುರಾಣ, ಉಪನಿಷತ್ತುಗಳಲ್ಲಿ ಹಾಗೂ ಅಲಂಕಾರ ಶಾಸ್ತ್ರಗಳಲ್ಲಿ ಅಧ್ಯಯನವನ್ನು ನಡೆಸಿ ಪಾರಂಗತರಾದರು. "ದಾಸರಾಗುವ ಮೊದಲು ರತ್ನಪಡಿ ವ್ಯಾಪಾರಿಗಳಾಗಿದ್ದರೆಂದೂ, ಜಿಪುಣರಾಗಿದ್ದರೆಂದೂ, ಭಗವಂತನ ಮಹಿಮಾ ಪ್ರದರ್ಶನದ ಕಾರಣದಿಂದ ಪರಿವರ್ತಿತರಾಗಿ ಸಂಪೂರ್ಣ ವೈರಾಗ್ಯಸಂಪನ್ನರಾಗಿ ದಾಸರಾದರೆಂದೂ ಐತಿಹ್ಯಗಳಿವೆ".[೨] ಪುರಂದರದಾಸರ ಕೀರ್ತನೆಗಳಲ್ಲಿ ಹರಿಭಕ್ತಿಯೇ ಪ್ರಧಾನವಾಗಿದ್ದರೂ ಸಮಾಜಿಕ ಕಾಳಜಿ, ನೈತಿಕ ಜೀವನದ ಪ್ರತಿಪಾದನೆ, ಆಧ್ಯಾತ್ಮಿಕ ಚಿಂತನೆ, ನೀತಿಬೋಧೆ, ಮಾನವ ಸ್ವಭಾವದ ಓರೆಕೋರೆಗಳ ಚಿತ್ರಣ, ತಿಳಿಹಾಸ್ಯ, ವಿಡಂಬನೆಗಳನ್ನು ಕಾಣಬಹುದು. ದಾಸರು ಎಲ್ಲರೊಂದಿಗೆ ಬೆರೆತು ಜನರ ನಡುವೆಯೇ ಹಾಡಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ತತ್ವ ಪ್ರತಿಪಾದಿಸಿದವರು. ಅವರ ಕೀರ್ತನೆಗಳಲ್ಲಿ ನೀತಿಯಿದೆ, ಆಧ್ಯಾತ್ಮಿಕ ವಿಚಾರಗಳೊಂದಿಗೆ ಮಾನವ ಸ್ವಭಾವದ ಚಿತ್ರಣವಿದೆ; ಬದುಕಿನ ವೈಚಿತ್ರ್ಯಗಳ ವಿಡಂಬನೆಯಿದೆ; ಮಾನವನ ನೀಚತನದ ಬಗೆಗೆ ಮರುಕವೂ ಇದೆ. ಈ ಕೀರ್ತನೆಗಳು ಸಂಗೀತದ, ಸಾಹಿತ್ಯದ ಗುಣಗಳನ್ನೊಳಗೊಂಡಿವೆ. ಇವಗಳಲ್ಲೆಲ್ಲ ಅವರ ಅಗಾಧ ಪ್ರತಿಭೆ ವ್ಯಕ್ತವಾಗಿದೆ.

'ಕರ್ನಾಟಕ ಸಂಗೀತ ಪಿತಾಮಹ'ರೆಂದೇ ಖ್ಯಾತರಾದ ಪುರಂದರದಾಸರು ಕೇವಲ ಕೀರ್ತನೆಗಳನ್ನು ಬರೆದವರಲ್ಲ; ಬರೆದುದಕ್ಕೆ

ರಾಗಸಂಯೋಜಿಸಿ ಹಾಡಿದವರು. ಕರ್ನಾಟಕ ಸಂಗೀತಕ್ಕೆ ಅನೇಕ ರಾಗಗಳನ್ನು ಸಂಶೋಧಿಸಿ ಬಳಕೆಗೆ ತಂದವರು. "ಸಂಗೀತ ಪ್ರಪಂಚದಲ್ಲಿ ಅವರು ಮಾಡಿದ ವ್ಯವಸಾಯ ಅಪೂರ್ವವಾದುದು, ಅದ್ಭುತವಾದುದು. ಆದರೆ ಉಳಿದ ವಾಗ್ಗೇಯಕಾರರಂತೆ ಸಂಗೀತಕ್ಕಾಗಿಯೇ ಸಾಹಿತ್ಯವನ್ನು ಸಿದ್ಧ ಮಾಡುವ ಬಯಕೆಯಾಗಲೀ, ಹವ್ಯಾಸವಾಗಲೀ ಪುರಂದರದಾಸರಿಗಿರಲಿಲ್ಲ. ಅವರ ಪಾಲಿಗೆ ಸಂಗೀತ ಒಂದು ಸಾಧನ ಮಾತ್ರ;

ಅದರ ಗುರಿ ಭಗವತ್ಪ್ರೀತಿ" ಎಂದು ಶ್ರೀ ಎಸ್.ಕೆ. ರಾಮಚಂದ್ರ ರಾವ್ ಹೇಳಿದ ಮಾತು ದಾಸರ ಸಂಗೀತ ಪ್ರೇಮ, ಸಾಧನೆಯ ಉದ್ದೇಶವನ್ನು ತಿಳಿಸುತ್ತದೆ. [೩] ಪುರಂದರದಾಸರು ಹರಿಭಕ್ತಿ ಸಾರವನ್ನು ಜನರಿಗೆ ಮನಮುಟ್ಟುವಂತೆ ತಮ್ಮ ಕೀರ್ತನೆಗಳಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಪುರಂದರದಾಸರ ಕೀರ್ತನೆಗಳಲ್ಲಿ ಧಾರ್ಮಿಕ ವಿಚಾರಗಳ ಜೊತೆ ಲೌಕಿಕ ಬದುಕಿನ ವಿಶ್ಲೇಷಣೆಯನ್ನೂ ಕಾಣಬಹುದು. ಪುರಂದರದಾಸರ "ಆಚಾರವಿಲ್ಲದ ನಾಲಗೆ ನಿನ್ನ ನೀಚಬುದ್ಧಿಯ ಬಿಡು ನಾಲಗೆ", 'ಈಸಬೇಕು ಇದ್ದು ಜೈಸಬೇಕು' ಮುಂತಾದ ಕೀರ್ತನೆಗಳಲ್ಲಿ ಅವರ ನೀತಿ ಬೋಧೆಯನ್ನು ಕಾಣಬಹುದು. ಹೀಗೆ ಪುರಂದರದಾಸರು ಕೇವಲ ಮಾಧ್ವ ತತ್ವ ಪ್ರತಿಪಾದನೆ ಮಾಡದೆ ಅವುಗಳನ್ನು ನಿತ್ಯ ಬದುಕಿನ ಅನುಭವದ ಚಿತ್ರಗಳ ಮೂಲಕ ವಿಚಾರಗಳನ್ನು ಭಾವಪ್ರದವಾಗಿ ಮಂಡಿಸಿರುವುದರಿಂದ ಅವರ ವಿಚಾರಗಳು – ನೀತಿಬೋಧೆ ನಮ್ಮ ಇಂದಿನ ಬದುಕಿಗೆ ಮತ್ತಷ್ಟು ಹತ್ತಿರವಾಗುತ್ತಿದೆ. ಆದ್ದರಿಂದ ಅವರ ಕೀರ್ತನೆಗಳು ಇಂದು ಇನ್ನಷ್ಟು ಮೌಲ್ಯವರ್ಧಿತವಾಗುತ್ತಿವೆ ಎಂದರೆ ತಪ್ಪಾಗಲಾರದು.

೧.೩ ಕೀರ್ತನೆಗಳ ಸ್ವರೂಪ

ಭಗವಂತನ ಗುಣಲೀಲೆಯನ್ನು ಕೀರ್ತಿಸುವ, ಸಾಮಾಜಿಕ ನೀತಿ ನಡಾವಳಿಯನ್ನು ನಿರೂಪಿಸುವ ಗೇಯ ಪ್ರಧಾನ ಪ್ರಕಾರವೇ ಕೀರ್ತನೆ. ಇದು ಒಂದು ಬಗೆಯ ಸ್ತೋತ್ರ ಪ್ರಕಾರವಾಗಿದೆ. ಕನ್ನಡದಲ್ಲಿ ಕೀರ್ತನ ಸಾಹಿತ್ಯದ ಬೆಳವಣಿಗೆಯನ್ನು ಚಾರಿತ್ರಿಕವಾಗಿ ಗಮನಿಸುವ ಸಂದರ್ಭದಲ್ಲಿ ಕೆಲವು ವಿದ್ವಾಂಸರು ಶ್ರೀ ಮಧ್ವಾಚಾರ್ಯರ 'ದ್ವಾದಶಸ್ತೋತ್ರ'ದ ಪ್ರೇರಣೆಯನ್ನು ಗುರುತಿಸಿದ್ದಾರೆ. ಮತೀಯವಾಗಿ ಹರಿದಾಸರು ಶ್ರೀ ಮಧ್ವಾಚಾರ್ಯ ಪರಂಪರೆಗೆ ಸೇರಿದ್ದರೂ ದಾಸಸಾಹಿತ್ಯವು ಅಭಿವ್ಯಕ್ತಿ ಪ್ರಕಾರವಾಗಿ ಪಡೆದುಕೊಂಡ ವಿಸ್ತಾರ ವೈವಿಧ್ಯಗಳೆಲ್ಲದರ ಮೂಲವನ್ನು ಸಂಸ್ಕೃತದ ದ್ವಾದಶಸ್ತೋತ್ರದಲ್ಲಿ ಗುರುತಿಸಲು ಸಾಧ್ಯವಾಗುವುದಿಲ್ಲ [೪] ಸ್ತೋತ್ರಕ್ಕೂ ಕೀರ್ತನ ಪ್ರಕಾರಕ್ಕೂ ಇರುವ ಮೂಲಭೂತ ವ್ಯತ್ಯಾಸವನ್ನು ಗಮನಿಸಿದರೆ ಈ ಅಂಶ ವ್ಯಕ್ತವಾಗುತ್ತದೆ.

ಸ್ತೋತ್ರ ಎನ್ನುವುದು ಒಂದು ಸ್ವತಂತ್ರ ಅಭಿವ್ಯಕ್ತಿಯಾಗಿರದೆ, ತಾತ್ವಿಕ ಸಿದ್ಧಾಂತದ ವಿಸ್ತರಣೆ ಮಾತ್ರವಾಗಿ ಕೆಲಸ ಮಾಡುತ್ತಿರುತ್ತದೆ. ಅದರ ರಚನೆಯ ದೃಷ್ಟಿಯಿಂದ ಸ್ತೋತ್ರವು ಸಂವೃತ ಸ್ವರೂಪದ್ದಾಗಿದ್ದು ಅಲ್ಲಿ ಯಾರು ಹೇಳುತ್ತಾರೆ ಎನ್ನುವುದಕ್ಕಿಂತಲೂ ಏನು ಹೇಳುತ್ತಿದ್ದಾರೆ ಎನ್ನುವುದು ಮುಖ್ಯವಾಗಿದೆ. ಇದು ಸ್ತೋತ್ರದ ಅನಿವಾರ್ಯತೆಯೂ ಹೌದು. ಆದರೆ ಕೀರ್ತನೆಗಳು ಅದರಾಚೆಗೂ ವಿಸ್ತರಿಸಿರುವುದು ಕಂಡುಬರುತ್ತದೆ. ಕೀರ್ತನೆಗಳಲ್ಲಿ ಜನರ ವೈಯಕ್ತಿಕ ಬೇಕುಬೇಡಗಳ ನಿರೂಪಣೆ, ಸಂವಾದದ ನೆಲೆಗಳು, ವಿಭಿನ್ನ ದನಿಗಳನ್ನು ಕಾಣಬಹುದು. ಈ ಮೂಲಕ ವಿವೃತತೆಯನ್ನೂ ಕೀರ್ತನೆಗಳು ಹೊಂದಿದ್ದು ಅದರಲ್ಲಿ ಪುರಂದರದಾಸರಂತಹ ದಾಸವರೇಣ್ಯರ ಪಾತ್ರ ಬಹಳಷ್ಟಿದೆ.

ಕೀರ್ತನೆಗಳಲ್ಲಿನ ಸ್ತೋತ್ರದ ನೆಲೆಯು ಮೇಲ್ನೋಟದ್ದಾಗಿದ್ದು ಅವುಗಳಿಗೆ ಆಚರಣೆಯ ನೆಲೆಯೂ ಇರುತ್ತವೆ. ಕೀರ್ತನೆಗಳಿಗೆ ಸಿದ್ಧ ಚಹರೆಯೊಂದಿದ್ದರೂ ಅವು ಹಾಡುವಿಕೆಯ ಮೂಲಕ ಮತ್ತೆ ಮತ್ತೆ ಅಭಿನೀತಗೊಳ್ಳುತ್ತವೆ. ಆದರೆ ಸ್ತೋತ್ರಗಳಿಗೆ ಈ ಬಗೆಯ ಆಚರಣೆಗಳಿರುವುದಿಲ್ಲ. ಕೀರ್ತನೆಗಳು ಹಾಡೇ ಆಗಿರುವುದು ಮಾತ್ರವಲ್ಲದೆ ಅಭಿವ್ಯಕ್ತಿಯೂ ಮುಖ್ಯವಾಗಿರುತ್ತದೆ. ಅಮೂರ್ತವಾದುದನ್ನು ಮೂರ್ತತೆಯ ನೆಲೆಗೆ ಇಳಿಸುವುದು, ಆರಾಧನೆಯ ವಾಹಕವನ್ನಾಗಿಸವುದು ಕೀರ್ತನೆಗಳ ಅಭಿವ್ಯಕ್ತಿಯ ಲಕ್ಷಣ.

೧.೪ ಪ್ರತಿಮೆ ಎಂದರೇನು ?

'ಪ್ರತಿಮೆ' ಇತ್ತೀಚೆಗೆ ಹೆಚ್ಚು ವ್ಯಾಪಕವಾಗಿ ಬಳಕೆಗೆ ಬಂದ ಪದ. ಇಂಗ್ಲಿಷ್‌ನ 'Image' ಗೆ ಸಂವಾದಿಯಾಗಿ ಈ ಪದ ಬಳಕೆಯಲ್ಲಿದೆ. "ಕನ್ನಡಕ್ಕೆ ಆಂಗ್ಲ ಸಾಹಿತ್ಯದ ಪ್ರಭಾವದಿಂದ ಪ್ರತಿಮಾ ವಿಧಾನವು ಬಳಕೆಗೆ ಬಂತು" [೫] ಎಂಬ ಅಭಿಪ್ರಾಯವಿದೆಯಾದರೂ ಈ ಮಾತು ಒಪ್ಪತಕ್ಕದ್ದಲ್ಲ. ಯಾಕೆಂದರೆ ನಮ್ಮ ಪ್ರಾಚೀನ ಕಾವ್ಯಗಳಲ್ಲಿ, ವೇದೋಪನಿಷತ್ತುಗಳಲ್ಲಿ ಸಾಕಷ್ಟು ಪ್ರತಿಮೆಗಳನ್ನು ಕಾಣಬಹುದು. ಉದಾಹರಣೆಗಾಗಿ ಅಥರ್ವವೇದದ ಉಪವೇದವಾದ ಆಯುರ್ವೇದ ವೈದ್ಯಕೀಯ ಶಾಸ್ತ್ರದ ಆಕರ ಗ್ರಂಥವಾದ ಸುಶ್ರುತ ಸಂಹಿತೆಯ ಈ ಶ್ಲೋಕವನ್ನು ಗಮನಿಸಬಹುದು.

ಯಥಾ ಖರಶ್ಚಂದನ ಭಾರವಾಹೀ ಭಾರಸ್ಯ ವೇತ್ತಾ ನ ತು ಚಂದನಸ್ಯ ।

ಏವಂ ಹಿ ಶಾಸ್ತ್ರಾಣಿ ಬಹೂನ್ಯ ಧೀತ್ಯ ಚಾರ್ಥೇಷು ಮೂಢಾಃ ಖರವದ್ವಹಂತಿ ॥

(ಸುಶ್ರುತ ಸಂಹಿತೆ, ನಾಲ್ಕನೇ ಅಧ್ಯಾಯ)

ಶ್ರೀಗಂಧದ ಹೊರೆಯನ್ನು ಹೊತ್ತಿರುವ ಕತ್ತೆಗೆ ಶ್ರೀಗಂಧವು ಕೇವಲ ಭಾರವಾದ ವಸ್ತುವೆಂಬುದು ಮಾತ್ರ ಗೊತ್ತೇ ಹೊರತು ಪರಿಮಳವುಳ್ಳದ್ದೆಂಬ ಜ್ಞಾನವೇ ಇರುವುದಿಲ್ಲ. ಹೀಗೆಯೇ ಕೆಲವರು ಅನೇಕ ಶಾಸ್ತ್ರಗಳನ್ನು ಬಹಳ ಶ್ರಮದಿಂದ ಅಭ್ಯಾಸ ಮಾಡಿ ಅರ್ಥಜ್ಞಾನವಿಲ್ಲದೆ ಕಷ್ಟಪಡುತ್ತಾರೆ.

ಇದಕ್ಕೆ ಪೂರಕವಾಗಿ ಮಂಡಕೋಪನಿಷತ್ತಿನ ಒಂದು ಸೂಕ್ತವನ್ನು ಉದಾಹರಣೆಯಾಗಿ ಗಮನಿಸಬಹುದು. ಡಾ ಜಿ.ಎಸ್. ಶಿವರುದ್ರಪ್ಪನವರು ಆ ಸೂಕ್ತವನ್ನು ಹೀಗೆ ಅನುವಾದಿಸಿದ್ದಾರೆ.[೬]

ಸುಂದರ ಗರಿಗಳ ಹಕ್ಕಿಗಳೆರಡಿವೆ
ಒಂದೇ ಮರದಲ್ಲಿ
ಒಂದು ತಿನ್ನುವುದು ಹಣ್ಣುಗಳ, ಮ
ತ್ತೊಂದಿದೆ ತಿನ್ನದೆ ಮೌನದಲಿ.

ಇದೊಂದು ಜೀವನವನ್ನು ಕುರಿತ ಚಿತ್ರ. ಮೇಲ್ನೋಟಕ್ಕೆ ಹಕ್ಕಿಗಳ ಚಿತ್ರ ಕಂಡರೂ ಇಲ್ಲಿರುವ ಮರ ಸಂಸಾರ ವೃಕ್ಷ. ಜೀವಾತ್ಮ ಮತ್ತು ಪರಮಾತ್ಮ ಇಲ್ಲಿರುವ ಹಕ್ಕಿಗಳು. ಹಣ್ಣನ್ನು ತಿನ್ನುವ ಹಕ್ಕಿಯು ಜೀವಾತ್ಮವಾದರೆ, ಹಣ್ಣನ್ನು ತಿನ್ನದೆ ಸಾಕ್ಷೀಭೂತವಾಗಿರುವುದು ಪರಮಾತ್ಮ ಎಂದು ವ್ಯಾಖ್ಯಾನಿಸಲಾಗಿದೆ. ಈ ಮೇಲಿನ ಉದಾಹರಣೆಯನ್ನು ನಾವು 'ಪ್ರತಿಮೆ'ಯಾಗಿ ಗುರುತಿಸಬಹುದು. "ವೇದೋಪನಿಷತ್ತುಗಳಲ್ಲಿ ಇಂಥ ಎಷ್ಟೋ ಉಕ್ತಿಗಳಿವೆ. ವಾಸ್ತವದ ನಿಸರ್ಗದ ವಿವಿಧ ವ್ಯಾಪಾರಗಳಿಗೆ ಹೀಗೆ ಪ್ರತೀಕಗಳನ್ನು ಕಲ್ಪಿಸಿ ಹಾಡಿದ ಎಷ್ಟೋ ಗೀತಗಳಿವೆ. ಇಂದ್ರನು ತನ್ನ ರಥದಲ್ಲಿ ಕುಳಿತು ವಜ್ರಾಯುಧದಿಂದ ಬೆಟ್ಟದ ರೆಕ್ಕೆಗಳನ್ನು ಕತ್ತರಿಸುತ್ತಾನೆ ಎಂಬ ವರ್ಣನೆ, ವಾಸ್ತವವಾಗಿ ಮಳೆಗಾಲದ ಆಕಾಶದಲ್ಲಿ ಬೆಟ್ಟದಂತೆ ತೇಲುವ ಮೋಡಗಳನ್ನೂ, ಗುಡುಗು ಸಿಡಿಲುಗಳ ಅಬ್ಬರದಿಂದ ಆ ಮೋಡಗಳೇ ಮಳೆಯಾಗಿ ಕೆಳಗೆ ಸುರಿಯುವ ಕ್ರಿಯೆಯನ್ನು ಹೇಳುವ ಒಂದು ಉಕ್ತಿ ವಿಧಾನವಾಗಿದೆ. ನೀರಿನ ಭಾರದಿಂದ ಜೋಲುತ್ತಾ ಗಗನದಲ್ಲಿ ತೇಲುವ ಮೇಘಗಳನ್ನು, ಕೊಡಗೆಚ್ಚಲ ಭಾರದಿಂದ, ಕೊಟ್ಟಿಗೆಗೆ ಧಾವಿಸುವ ಇಂದ್ರನ ಗೋವುಗಳೆಂದು ವರ್ಣಿಸಲಾಗಿದೆ.

ನಮ್ಮ ಭಾರತೀಯ ಕಾವ್ಯ ಪರಂಪರೆ ಇಂಥ ಅನೇಕ ಪ್ರತೀಕ ಹಾಗೂ ಪ್ರತಿಮೆಗಳನ್ನು ಸಮೃದ್ಧವಾಗಿ ಸೃಷ್ಟಿಸಿದೆ." [೭] ಆದ್ದರಿಂದ 'ಪ್ರತಿಮೆ' ಆಂಗ್ಲ ಸಾಹಿತ್ಯದಿಂದ ಬಂತೆನ್ನುವುದು ಅಷ್ಟು ಸಮಂಜಸವಾಗಲಾರದು. 'ಪ್ರತಿಮೆ' ಯ ಮೂಲಗಳನ್ನು ನಮ್ಮ ವೇದೋಪನಿಷತ್ತುಗಳಲ್ಲಿ ನಿಚ್ಚಳವಾಗಿ ಗುರುತಿಸಬಹುದು. ಆದರೆ 'ಪ್ರತಿಮೆ' ಎಂಬ ಪದ ಆಧುನಿಕ ಅರ್ಥದಲ್ಲಿ ಬಳಕೆಯಲ್ಲಿದ್ದಿರಲಿಲ್ಲ.

'ಪ್ರತಿಮೆ' ಎಂದರೆ ಒಂದು ಶಬ್ದಚಿತ್ರ. ಪ್ರಾಚೀನ ಜನಪದ ಸಾಹಿತ್ಯದಲ್ಲಿ ಒಗಟುಗಳು ಅಥವಾ ಜಾಣ್ಮೆಯ ಉಕ್ತಿಗಳನ್ನು ಗುರುತಿಸಬಹುದು. ನಮ್ಮ ಪ್ರಾಚೀನ 'ಪ್ರತಿಮೆ'ಯು ಕವಿಯ ಒಂದು ಚಮತ್ಕಾರ ಎಂದರೆ ತಪ್ಪಲ್ಲ. ಆದರೆ ಚಮತ್ಕಾರ, ಉಕ್ತಿವೈಚಿತ್ರ್ಯಗಳೆಲ್ಲ ಪ್ರತಿಮೆಗಳಾಗಲಾರವು. ಉದಾಹರಣೆಗೆ ಕುಮಾರವ್ಯಾಸನ ಗದುಗಿನ ಭಾರತದ ಈ ಪದ್ಯವನ್ನು ಗಮನಿಸಬಹುದು.

ವೇದಪುರುಷನ ಸುತನ ಸುತನ ಸ
ಹೋದರನ ಹೆಮ್ಮಗನ ಮಗನ ತ
ಳೋದರಿಯ ಮಾತುಳನ ಮಾವನ ಅತುಳ ಭುಜಬಲದಿ
ಕಾದಿಗೆಲಿದನ ಅಣ್ಣನ ಅವ್ವೆಯ
ನಾದಿನಿಯ ಜಠರದಲಿ ಜನಿಸಿದ
ನಾದಿ ಮೂರುತಿ ಸಲಹೋ ಗದುಗಿನ ವೀರನಾರಯಣ

ಈ ಪದ್ಯದಲ್ಲಿ ಪದಗಳನ್ನು ಸರಿಯಾಗಿ ಬಿಡಿಸಿ ಅರ್ಥವನ್ನು ಹೇಳಿದರೆ ವೀರನಾರಾಯಣನ ಪರವಾದ ವಿವರಗಳು ವರ್ಣನಾತ್ಮಕವಾಗಿದ್ದು, ಇಲ್ಲಿರುವುದು ಕೇವಲ ಚಮತ್ಕಾರವಾಗಿದೆ. ಇಲ್ಲಿ ರೂಪಕಾತ್ಮಕ ಅಭಿವ್ಯಕ್ತಿ, ಪ್ರತೀಕಗಳು ಇರುವುದಿಲ್ಲ. ಆದ್ದರಿಂದ ಇದು ಪ್ರತಿಮೆಯಾಗಲಾರದು.
ವಚನಗಳಲ್ಲಿನ ಪ್ರತೀಕಾತ್ಮಕ ಅಭಿವ್ಯಕ್ತಿಗಳನ್ನು ಡಾ ಜಿ.ಎಸ್. ಶಿವರುದ್ರಪ್ಪನವರು 'ಬೆಡಗು' ಎಂಬುದಾಗಿ ಗುರುತಿಸಿದ್ದಾರೆ. "ಬೆಡಗು ಎಂದರೆ ಸೌಂದರ್ಯ ಎಂದೇ ಅರ್ಥ. ಬೆಡಗು ಎಂದರೆ, ವಿಶೇಷವಾದದ್ದು, ವೈಖರಿಯಿಂದ ಕೂಡಿದ್ದು ಎಂಬ ಅರ್ಥಗಳ ಜತೆಗೆ ಬೆರಗು, ಆಶ್ಚರ್ಯ ಎಂದೂ ಅರ್ಥವಿದೆ. ಬೆಡಗು ಎಂಬ ಮಾತಿನ ಜತೆಗೆ ಬೆಗಡು ಎಂಬ ಪದವೂ ಇದೆ. ಹಾಗೆಂದರೆ ಚಕಿತಗೊಳಿಸು, ಹೆದರಿಸು ಎಂದು ಅರ್ಥವಾಗುತ್ತದೆ. ಒಟ್ಟಿನಲ್ಲಿ ಈ ಬೆಡಗಿನ ವಚನಗಳಲ್ಲಿ ಓದಿದೊಡನೆ ಆಶ್ಚರ್ಯಗೊಳಿಸುವ ಮತ್ತು ಅದರ ಅಸಂಬದ್ಧತೆಯಿಂದಾಗಿ ಸ್ವಲ್ಪಮಟ್ಟಿಗೆ ಹೆದರಿಸುವ ಅಂಶವೂ ಇದೆ.

ಈ ಬಗೆಯ ಬೆಡಗಿನ ರಚನೆಗಳನ್ನು ಬರೆದವರು ಕೇವಲ ವಚನಕಾರರಲ್ಲಿ ಕೆಲವರು ಮಾತ್ರ ಅಲ್ಲ; ವಚನಕಾರ ಅನಂತರದ ಕೀರ್ತನೆ ಪರಂಪರೆಯ ಹರಿದಾಸರಲ್ಲಿಯೂ ಬೆಡಗಿನ ಅಂಶ ಸಾಕಷ್ಟಿದೆ ".[೮]

ಪ್ರತಿಮೆಯು ಶಬ್ದಗಳ ಸಹಾಯದಿಂದ ಕಟ್ಟಿದ ಒಂದು ಚಿತ್ರ. ರೂಪಕ, ಉಪಮೆ ಮತ್ತು ಗುಣನಾಮ ಇವು ಪ್ರತಿಮೆಗಳನ್ನು ಸೃಷ್ಟಿಸಬಲ್ಲವು. ಆದರೆ ಇವೇ ಪ್ರತಿಮೆಗಳಲ್ಲಿ ನಮ್ಮ ಕಲ್ಪನೆಗೆ ಚಾಲನೆ ಕೊಡುವಂಥ ಧ್ವನಿಪೂರ್ಣವಾಗಿರುವ ಯಾವುದೇ ಪದಗುಚ್ಛ ಅಥವಾ ವಾಕ್ಯಸರಣಿಯು ಪ್ರತಿಮೆಯಾಗಬಹುದು. ಆದ್ದರಿಂದ ಪ್ರತಿಯೊಂದು ಕಾವ್ಯ ಪ್ರತಿಮೆಯೂ ಒಂದು ರೀತಿಯಲ್ಲಿ ರೂಪಕಾತ್ಮಕವಾಗಿರುತ್ತದೆ. "ಒಬ್ಬ ಕವಿಯ ಯೋಗ್ಯತೆಯನ್ನು ಅಳೆಯಬೇಕಾದರೆ, ನಾವು ಅವನ ರೂಪಕಗಳ ಶಕ್ತಿ ಮತ್ತು ಅಂತಃಸತ್ವ ಇವುಗಳನ್ನು ಪರಿಶೀಲಿಸಬೇಕು". ಎಂದು ಹರ್ಬರ್ಟ್ ರೀಡ್ ಎಂಬ ಆಂಗ್ಲ ಕವಿಯ ಅಭಿಪ್ರಾಯವನ್ನು ಗಮನಿಸಿದಾಗ ಪ್ರತಿಮೆಯ ಮಹತ್ವವನ್ನು ತಿಳಿಯಬಹುದು. "ರೂಪಕಗಳ ಮೇಲಿರುವ ಕವಿಯ ಪ್ರಭುತ್ವವೇ ಅವನ ಪ್ರತಿಭೆಯ ಸಂಕೇತ" ಎಂಬ ಅರಿಸ್ಟಾಟಲ್‌ನ ಮಾತು ಗಮನೀಯ.

ಹೊಸದರ ಹುಡುಕಾಟ ಮನುಷ್ಯನ ಸಹಜ ಪ್ರವೃತ್ತಿಗಳಲ್ಲಿ ಒಂದು. ಈ ಹುಡುಕಾಟದಲ್ಲಿ ಕಾವ್ಯವೂ ಹೊರತಾಗಿಲ್ಲ. ಮಾನವನ ಅನೇಕ ಆವಿಷ್ಕಾರಗಳಂತೆ ಪ್ರತಿಮಾನಿರ್ಮಿತಿಯೂ ಸಹ ಕವಿಪ್ರತಿಭೆಯ ಒಂದು ಆವಿಷ್ಕಾರವೆನಿಸಿದೆ. "ಪ್ರತಿಮೆ ಎಂಬುದು ಮೂಲತಃ ಕವಿ ಮನಸ್ಸಿನ ಸೃಜನೆ, ಒಂದು ಮತ್ತೊಂದಕ್ಕೆ ದೂರದಲ್ಲಿರುವ ಮತ್ತು ಯಾವುದೇ ಸಂಬಂಧವಿದೆಯೆಂಬಂತೆ ತೋರದ ಎರಡು ಅಥವಾ ಹೆಚ್ಚಿನ ವಸ್ತು ಸತ್ಯಗಳ ಹೋಲಿಕೆಯಿಂದ, ಸಂಭವಿಸುವುದಲ್ಲ ಅದು; ಅದರ ಬದಲು, ದೂರದೂರದ ಆ ಎರಡು ವಸ್ತುಗಳಿಗಿರುವ ಯಾವುದೇ ಸಾದೃಶ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಅವೆರಡಕ್ಕಿರುವ ಒಳಸಂಬಂಧವನ್ನು ಕವಿಯ ಪ್ರಜ್ಞೆ ಮಾತ್ರ ಗ್ರಹಿಸಿ, ಅವುಗಳನ್ನು ಸಂಘಟಿಸಿದ್ದರಿಂದ ಅದುವರೆಗೂ ಮನೋಗೋಚರವಾಗದಿದ್ದ ಹೊಸತೊಂದು ಹುಟ್ಟಿಕೊಳ್ಳುತ್ತದೆ. ಇದೇ ಪ್ರತಿಮೆ.

ಹೀಗೆ ಗೃಹೀತವಾಗುವ ಪ್ರತಿಮೆ, ಗೊತ್ತಿರುವ ಎರಡು ವಸ್ತುಗಳ ಸಾದೃಶ್ಯವನ್ನು ಮೂಲಮಾನವನ್ನಾಗಿ ಉಳ್ಳ ರೂಪಕದಿಂದ ಭಿನ್ನವಾದುದು. ಪ್ರತಿಮೆ ಒಂದರ ಮೂಲಕ ಮತ್ತೊಂದನ್ನು ತೆರೆಯುವಂಥದ್ದು ಮತ್ತು ಅವೆರಡರ ಸಾಮ್ಯ, ಅಜ್ಞಾತವಾದುದನ್ನು ಜ್ಞಾತವನ್ನಾಗಿ ಮಾಡುತ್ತದೆ. ಮೇಲ್ನೋಟಕ್ಕೆ ಯಾವುದೇ ಸಾದೃಶ್ಯವಿಲ್ಲದಿದ್ದರೂ ಕಾವ್ಯದ ಅಂತರಾಳದ ಸಾದೃಶ್ಯವಿದ್ದರೆ ಅಲ್ಲಿ ಭಾವ ಸಂಚಾರವಾಗಿ ಹೊಸ ಭಾವ ಜಾಗೃತವಾಗುತ್ತದೆ."[6] ಪುರಂದರದಾಸರ ಈ ಕೀರ್ತನೆಯಲ್ಲಿ ಎರಡು ವಸ್ತುಗಳ ಆಂತರಿಕ ಸಾಮ್ಯತೆಯನ್ನು ಗುರುತಿಸಬಹುದು.

ಅನುಭವದಡುಗೆಯ ಮಾಡಿ ಅದ
ಕ್ಕನುಭವಿಗಳು ಬಂದು ನೀವೆಲ್ಲ ಸೇರಿ

ಇಲ್ಲಿ 'ಅನುಭವ' ಪದದೊಂದಿಗೆ ಅನುಭವ ಪದಕ್ಕೆ ಸಂಬಂಧಿಸಿದ ಎಲ್ಲಾ ಬಗೆಯ ಸಂಕೀರ್ಣ ಭಾವನೆಗಳನ್ನು 'ಅಡುಗೆ' ಪ್ರತಿಮೆಯಲ್ಲಿ ಕಾಣಬಹುದು. 'ಅನುಭವದಡುಗೆ' ಎಂಬ .ಪದವು ಇಲ್ಲಿ ವಿಶೇಷ ಅರ್ಥವಂತಿಕೆಯನ್ನು ಪಡೆಯುತ್ತದೆ. ಕವಿಪ್ರಜ್ಞೆಯಲ್ಲಿ ಗೋಚರವಾಗುವ ಸತ್ಯಾಂಶ ಇಲ್ಲಿ ಓದುಗರಿಗೆ ನಿಜವೆನಿಸುವಂತೆ ಭಾವತೀವ್ರತೆಯನ್ನು ಪಡೆದಿದೆ. ಇಲ್ಲಿ 'ಅಡುಗೆ' ವಾಚ್ಯಾರ್ಥವನ್ನು ಬಿಟ್ಟು ಸೂಚಿತವಾಗುವ ವ್ಯಂಗ್ಯಾರ್ಥವೇ ಪ್ರಧಾನವಾಗಿರುವ ಉಕ್ತಿವಿಶೇಷ. ವಾಚ್ಯವಾದ ಅರ್ಥವನ್ನು ಬಿಟ್ಟು ಹೀಗೆ ಸೂಚಿತವಾಗುವ ಅರ್ಥಗಳಿಗೆ ವ್ಯಂಗ್ಯಾರ್ಥವೆಂದು ಆಲಂಕಾರಿಕರು ಕರೆದಿದ್ದಾರೆ. ವ್ಯಂಗ್ಯಾರ್ಥವೇ ಪ್ರಧಾನವಾಗಿರುವ ಉಕ್ತಿವಿಶೇಷವನ್ನು ಧ್ವನ್ಯೋಕ್ತಿ ಎಂದು ಕರೆಯಲಾಗಿದೆ. ಧ್ವನಿ ಶಕ್ತಿ ಪಡೆದ ಒಂದು ಪದ, ಒಂದು ರೂಪಕ, ಒಂದು ವಾಕ್ಯ, ವಾಕ್ಯಸಮುದಾಯ ಅಥವಾ ಇಡೀ ಕೃತಿಯೇ ಕೆಲವೊಮ್ಮೆ ಪ್ರತಿಮೆಯಾಗಬಹುದು. ಹೀಗೆ ಪ್ರತಿಮೆಯು ಕೃತಿಯ ಎಲ್ಲಾಅಂಶಗಳಿಗೂ ಅನ್ವಯವಾಗಬಹುದು.

ಸಾಹಿತ್ಯದಲ್ಲಿ ಪ್ರತೀಕಗಳು ಪ್ರತಿಮಾ ನಿರ್ಮಿತಿಯ ವಿಧಾನಕ್ಕೆ ಪ್ರೇರಕವಾದವು. ಸಂಕೇತಗಳು ಒಂದು ವಸ್ತುವಿನ ಅಸ್ತಿತ್ವದ ಸೂಚನೆಯನ್ನು ಮಾತ್ರ ಕೊಟ್ಟರೆ, ಪ್ರತೀಕವು ಆ ಘಟನೆ ಅಥವಾ ವಸ್ತುವಿನ ಸ್ವರೂಪವನ್ನು ಸಾಕ್ಷಾತ್ಕರಿಸುತ್ತದೆ. ಒಂದು ಪದವು ಧ್ವನಿಪೂರ್ಣವಾದಾಗ ಉಪಮೆ ಅಥವಾ ರೂಪಕವೂ ಪ್ರತಿಮೆಯಾಗಬಹುದು. ಉಪಮೆಯಲ್ಲಿ ಸಾದೃಶ್ಯ ಸಂಬಂಧಪಟ್ಟರೆ, ರೂಪಕದಲ್ಲಿ ಉಪಮಾನ ಉಪಮೇಯಗಳು ಅಭೇದವಾಗಿದ್ದು ಸಂಕ್ಷಿಪ್ತಗುಣ ಪ್ರಧಾನವಾಗಿರುತ್ತದೆ. "ಸಂಕ್ಷಿಪ್ತಗುಣ, ಸಾಧನೆಯಿಂದ ರೂಪಕ ಒಂದು ವಿಶಿಷ್ಟ ಅಭಿವ್ಯಕ್ತಿ ಪ್ರಕಾರವಾಗುತ್ತದೆ. ಸಾಂಕೇತಿಕತೆಯನ್ನು ಕಂಡುಕೊಳ್ಳದ ಭಾವನೆಗಳಲ್ಲಿ ಸಂಕ್ಷಿಪ್ತತೆ ಸಾಧನೆಯಾಗದೆ ಪರಿಣಾಮ ಅಸ್ತವ್ಯಸ್ತವಾಗುತ್ತದೆ". [೧೦]

೧.೫ ಪ್ರತಿಮಾ ನಿರ್ಮಿತಿಯ ಕಾರ್ಯ

'ಪ್ರತಿಮೆ' ಯು ಕೇವಲ ಪ್ರತಿಮೆಗಾಗಿ ಅಲ್ಲ. ಅದು ಕಾವ್ಯದಲ್ಲಿ ಕವಿಯ ಅರಿವಿಗೆ ಬಾರದ ರೀತಿಯಲ್ಲಿ ನಿರ್ಮಾಣಗೊಳ್ಳುವುದರ ಮೂಲಕ ಕವಿಯ ಅಂತರಂಗದ ಭಾವದ ಅಭಿವ್ಯಕ್ತಿಯ ಮಾಧ್ಯಮವಾಗುತ್ತದೆ. ಪುರಂದರದಾಸರಿಗೆ ಅಂತರಂಗದ

ಅಭಿವ್ಯಕ್ತಿಯ ಮಾಧ್ಯಮವಾಗಿ ಕೀರ್ತನೆಗಳು ನೆರವಾಗಿವೆ. ಈ ಕೀರ್ತನೆಗಳಲ್ಲಿ ಅವು ಹೊರಹೊಮ್ಮಲು ಪ್ರತಿಮೆಗಳು ನೆರವಾಗಿವೆ.

ಕೀರ್ತನೆಗಳ ಪ್ರಧಾನ ಉದ್ದೇಶ ಭಕ್ತಿಯ ಪ್ರತಿಪಾದನೆ ಆಗಿದ್ದರೂ ಕೇವಲ ಒಣ ನೀತಿಯನ್ನು ಹೇಳುವ ಮಾರ್ಗ ಕೀರ್ತನಕಾರರದಲ್ಲ. ಅವರು ಕೀರ್ತನೆಗಳ ಮೂಲಕ ಧಾರ್ಮಿಕ ವಿಚಾರಗಳನ್ನು ಪ್ರತಿಪಾದಿಸುವುದರೊಂದಿಗೆ ಸಮಾಜದ ಓರೆಕೋರೆಗಳನ್ನು ವಿಶ್ಲೇಷಿಸುತ್ತಿದ್ದರು. ಅವುಗಳನ್ನು 'ಆಚಾರವಿಲ್ಲದ ನಾಲಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ', 'ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ', 'ಈಸಬೇಕು ಇದ್ದು ಜೈಸಬೇಕು' ಮುಂತಾದ ಅನೇಕ ಕೀರ್ತನೆಗಳಲ್ಲಿ ಗುರುತಿಸಬಹುದು. ಪುರಂದರದಾಸರ ಕೀರ್ತನೆಗಳಲ್ಲಿ ಬರುವ ಇಂತಹ ಪ್ರತಿಮಾ ನಿರ್ಮಿತಿಗಳು ಅಂದಿನ ಧಾರ್ಮಿಕ, ಸಾಮಾಜಿಕ-ಸಾಂಸ್ಕೃತಿಕ ಚಿತ್ರಣಗಳನ್ನು ನೀಡುತ್ತವೆ. ಸಾಂದರ್ಭಿಕವಾದ ಕೀರ್ತನೆಗಳಲ್ಲಿ ಅನೇಕ ಘಟನೆಗಳ ಸಂಬಂಧಿತ ವಿಷಯಗಳು ವಸ್ತುರೂಪಗೊಳ್ಳುತ್ತವೆ. ಈ ವಸ್ತುಗಳಲ್ಲಿನ ಪುರಂದರದಾಸರ ಚಿಂತನೆ ವಿಶೇಷವಾದುದು. ಪುರಂದರದಾಸರ ಕೀರ್ತನೆಗಳಲ್ಲಿ ಬರುವ ಧಾರ್ಮಿಕತೆ, ಸಾಮಾಜಿಕತೆ, ಲೋಕನೀತಿ ಅನನ್ಯವಾದುದು. ಇಲ್ಲಿನ ಕೀರ್ತನೆಗಳಲ್ಲಿ ಅನಗತ್ಯ ವರ್ಣನೆಗೆ ಪ್ರಾಧಾನ್ಯ ನೀಡಿಲ್ಲ. ಹೇಳಬೇಕಾದ ವಿಚಾರಗಳನ್ನು ಸುಲಭಗ್ರಾಹ್ಯವಾಗುವಂತೆ, ಮನಮುಟ್ಟುವಂತೆ ಹೇಳುವಲ್ಲಿ ಪ್ರತಿಮಾ ನಿರ್ಮಿತಿ ಬಹಳಷ್ಟು ಪರಿಣಾಮಕಾರಿಯಾಗಿ ದುಡಿಯುತ್ತವೆ.

ಅಮೂರ್ತ ವಿಚಾರಗಳನ್ನು ಜನಸಾಮಾನ್ಯರಿಗೆ ಅರ್ಥಮಾಡಿಕೊಳ್ಳುವುದು ಕಷ್ಟ. ಉದಾಹರಣೆಗೆ ದೇವರು. 'ದೇವರು' ಎಂದರೆ ಯಾರು? ದೇವರ ಗುಣಲಕ್ಷಣಗಳೇನು? ಆಕಾರವೇನು? ಇತ್ಯಾದಿ ವಿಚಾರಗಳ ಬಗ್ಗೆ ನಮಗೆ ಅನೇಕ ಸಂದೇಹಗಳು ಏರ್ಪಡುತ್ತವೆ. ದೇವರನ್ನು ಬೇರೆ ಬೇರೆ ಧರ್ಮದವರು ಬೇರೆ ಬೇರೆ ರೀತಿಯಲ್ಲಿ ನೋಡುತ್ತಾರೆ, ಪೂಜಿಸುತ್ತಾರೆ. ಜನರು ತಮ್ಮ ತಮ್ಮ ಧರ್ಮದ ನೀತಿಗನುಸಾರವಾಗಿ, ಭಾವನೆಗಳಿಗನುಸಾರವಾಗಿ ದೇವರಿಗೊಂದು ಆಕಾರ ಕೊಟ್ಟು ಪೂಜಿಸುತ್ತಾರೆ, ಆಗ ಆ ಶಕ್ತಿ ಒಂದು ಮೂರ್ತರೂಪವನ್ನು ಪಡೆಯುತ್ತದೆ. ದೇವರ ಚಿತ್ರ, ಮೂರ್ತಿಗಳಲ್ಲಿ ನಾವು ದೇವರನ್ನು ಕಾಣುವ ಪ್ರಯತ್ನವನ್ನು ಮಾಡುತ್ತೇವೆ. ಇಲ್ಲಿ ಅಮೂರ್ತ ವಿಚಾರಗಳಿಗೆ ಮೂರ್ತ ರೂಪಕೊಡಲು ಈ ನಂಬಿಕೆ ಅತ್ಯಗತ್ಯ.

ಕಾವ್ಯದಲ್ಲಿ ಪ್ರತಿಮೆಯ ಅಗತ್ಯವೂ ಇದೇ ಆಗಿರುತ್ತದೆ. ಕಾವ್ಯದ ಅಂತರಾಳದ ಅರ್ಥ ನಮಗಾಗಲು ಪ್ರತಿಮಾ ನಿರ್ಮಿತಿ ಸಹಾಯಕವಾಗುತ್ತದೆ.

ಪುರಂದರದಾಸರ ಕೀರ್ತನೆಗಳಲ್ಲಿ ಪ್ರಾಣಿ ರೂಪಕಗಳನ್ನು ಧಾರಾಳವಾಗಿ ಕಾಣಬಹುದು. ಮನುಷ್ಯರ ವಿವಿಧ ಗುಣಗಳನ್ನು ಹೇಳುವ ಸಂದರ್ಭದಲ್ಲಿ ಪ್ರಾಣಿರೂಪಕಗಳು ಧಾರಾಳವಾಗಿ ಬಂದಿವೆ. 'ನಾಯಿ ಕುನ್ನಿಗಳ ಕೊಂಡೊಳಗಿಟ್ಟುಕೊಂಡರೆ ಕಾಶಿಯಲಿ ಮಿಂದ ಫಲವೇನಯ್ಯ' 'ಕಚ್ಚದಿರು, ಎಲ್ಲರಲಿ ಕಚ್ಚದಿರು ಬಲ್ಲರಲಿ ಕಚ್ಚದಿರು ಶ್ವಾನದಂತೆ ಆತ್ಮ', 'ಏಡಿ ಕಡಗಪಿಟ್ಟು ಫಲವೇನಿಲ್ಲ ಬೇಡ ತಾ ಮುತ್ತಿನ ಬೆಲೆ ಏನು ಬಲ್ಲ', ಕತ್ತೆಗೆ ಹೂರಣದ ರುಚಿ ತಿಳಿಯಲಿಲ್ಲ', 'ಮುತ್ತಿನ ಹಾರ ಕಪಿಗೆ ಸಲ್ಲ' ಎಂಬುದು ಅಪಾತ್ರರಾದವರಿಗೆ ಉತ್ತಮ ವಸ್ತುವು ಯೋಗ್ಯವಲ್ಲ ಎಂಬುದನ್ನು ತಿಳಿಸುತ್ತದೆ.

'ಕುರುಡು ನಾಯಿ ಸಂತೆಗೆ ಬಂತಂತೆ' ಅದು ಏತಕೆ ಬಂತೋ ಎಂಬಲ್ಲಿ ಮನುಷ್ಯ ಪ್ರಾಪಂಚಿಕ ಸುಖದಲ್ಲಿ ಮುಳುಗಿರುವುದರ ಚಿತ್ರಣವಿದ್ದು ಕೊನೆಗೆ 'ಕೊಂಡೋಗುವಾಗ ಯಾರಿಲ್ಲವಂತೆ' ಎಂಬಲ್ಲಿ ಮಾನವ ಎಷ್ಟೇ ಸುಖಭೋಗಗಳಲ್ಲಿ ಮೆರೆತರೂ ಕೊನೆಗೆ ಆತನ ಸಾವು ನಿಶ್ಚಿತ, ಆತ ಹೋಗುವಾಗ ಏನನ್ನೂ ಕೊಂಡೋಗಲು ಸಾಧ್ಯವಿಲ್ಲ ಎಂಬುದನ್ನು ಧ್ವನಿಸುತ್ತದೆ. 'ಮಾಂಸದಾಸೆಗೆ ಮತ್ಸ್ಯ ಸಿಲುಕಿ ಹಿಂಸೆ ಪಟ್ಟ ಪರಿಯಂತೆ' ಎಂಬುದು ಮಾನವನು ಅತಿ ಆಸೆ ಪಟ್ಟು ಕಷ್ಟಕ್ಕೀಡಾಗುವುದನ್ನು ಧ್ವನಿಸುತ್ತದೆ.

ಪುರಂದರದಾಸರ ಕೀರ್ತನೆಗಳಲ್ಲಿ ಆಧ್ಯಾತ್ಮಿಕ ಮೌಲ್ಯಗಳು ಹೆಚ್ಚು ಹೃದ್ಯವಾಗಿ ಮೂಡಿ ಬಂದಿವೆ. 'ಒಡಲೆಂಬ ಮನೆಯಲ್ಲಿ ನೀನು ಇರುತಿರ್ದಿ' ಎಂಬುದು ಪ್ರತಿಯೊಬ್ಬರಲ್ಲೂ ದೇವರಿದ್ದಾನೆ ಎಂದು ಅರ್ಥ. ಜನರು ಲೌಕಿಕ ಸುಖದಲ್ಲೇ ಮುಳುಗಿದಾಗ 'ಉದರ ವೈರಾಗ್ಯವಿದು ನಮ್ಮ ಪದುಮನಾಭನಲ್ಲಿ ಲೇಶ ಭಕುತಿಯಿಲ್ಲ' ಎಂದು ದಾಸರು ಹಾಡಿದ್ದಾರೆ. 'ಇದಕೊಳ್ಳಿ ಭವರೋಗಕೌಷಧವನು ಇಂದ್ರಿಯವ ಜಯಿಸುವುದೆ ಇದಕೆ ಇಚ್ಛಾಪಥ್ಯ' ಎಂಬಲ್ಲಿ ಹುಟ್ಟು ಎಂಬ ರೋಗಕ್ಕೆ ಹರಿನಾಮವೇ ಔಷಧ. ಇಂದ್ರಿಯವನ್ನು ಜಯಿಸುವುದೇ ಪಥ್ಯ ಎಂದು ಸೂಚಿಸಿದ್ದಾರೆ. 'ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರೂ ಕಲ್ಲುಸಕ್ಕರೆ ಕೊಳ್ಳಿರೋ ಕಲ್ಲುಸಕ್ಕರೆ ಸವಿ ಬಲ್ಲವರೇ ಬಲ್ಲರು' ಕಲ್ಲುಸಕ್ಕರೆ ಎಂದರೆ ಎಲ್ಲರಿಗೂ ಇಷ್ಟ. ಸಿಹಿಯಾದ ಕಲ್ಲುಸಕ್ಕರೆಯ ರುಚಿಸವಿದವರಿಗೆ ಗೊತ್ತು. ಪುಲ್ಲಲೋಚನ ಶ್ರೀಕೃಷ್ಣನೆಂಬ ಕಲ್ಲುಸಕ್ಕರೆ

ಕೊಳ್ಳಿರೊ ಎಂಬುದಾಗಿ ದಾಸರು ಹೇಳುವಲ್ಲಿ ಶ್ರೀ ಕೃಷ್ಣ ಎಂಬ ಕಲ್ಲು ಸಕ್ಕರೆಯ ಸವಿ ತಿಳಿಯಬಹುದು.

ಅಂತರಂಗ-ಬಹಿರಂಗ ಎರಡೂ ಶುದ್ಧವಾಗಿದ್ದಾರೆ ಮಾತ್ರ ನಿಜವಾದ ಶುದ್ಧ ಇರುತ್ತದೆ. 'ತನುವ ನೀರೊಳಗದ್ದಿ ಫಲವೇನು ಮನದಲ್ಲಿ ದೃಢಭಕ್ತಿ ಇಲ್ಲದ ಮನುಜರು' 'ದಾನಧರ್ಮಗಳನ್ನು ಮಾಡುವುದೇ ಸ್ನಾನ' ಎಂಬಲ್ಲಿ ಸ್ನಾನ ಅಂದರೆ ಶುಚಿತ್ವದ ಸಂಕೇತ. ಇದು ಅಂತರಂಗದ ಶುಚಿತ್ವವನ್ನು ಸೂಚಿಸುತ್ತದೆ. ನಾವು ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು, ಧರ್ಮದಿಂದ ನಡೆಯಬೇಕು. ಅದೇ ಸ್ನಾನ. ಇದರಿಂದ ಅಂತರಂಗದ ಶುದ್ಧಿ ಸಾಧ್ಯ.

'ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ ಪೆರ್ಮೆಯಿಂ ದೇಹವ ನಂಬಬೇಡಿ ಕಾಣಿರೊ' ಅಂದರೆ ನಾವು ಧರ್ಮ ಮಾರ್ಗದಿಂದ ನಡೆಯಬೇಕು, ಧರ್ಮ ಎಂಬ ಸಂಬಳವನ್ನು ಗಳಿಸುವ ದುಡಿಮೆ ನಮ್ಮದಾಗಬೇಕು. ಎಂಬ ಆಶಯವನ್ನು ಹೊಂದಿದೆ. 'ಬುತ್ತಿಯ ಕಟ್ಟೋ ಮನುಜ ಬುತ್ತಿಯ ಕಟ್ಟೋ ಬುತ್ತಿಯನ್ನು ಕಟ್ಟಿದರೆ, ಎತ್ತಲಾದರೂ ಉಣಬಹುದು' ಎಂಬಲ್ಲಿ ಜ್ಞಾನದ ಹಸಿವನ್ನು ನೀಗಿಸಲು ಶ್ರೀ ಪುರಂದರ ವಿಠಲತತ್ವವೆಂಬ ಬುತ್ತಿಯನ್ನು ಕಟ್ಟಿಕೊಳ್ಳಬೇಕೆಂದಿದ್ದಾರೆ. ನಾವು ಜ್ಞಾನದ ಬುತ್ತಿಯನ್ನು ಕಟ್ಟಿದರೆ ಯಾವತ್ತಾದರೂ ಎಲ್ಲಾದರೂ ಅದು ನಮ್ಮ ಹೊಟ್ಟೆಯನ್ನು ತುಂಬಿಸಲು ಸಾಧ್ಯ.

ಪುರಂದರದಾಸರ ಕೀರ್ತನೆಗಳಲ್ಲಿರುವ ಭಾವತೀವ್ರತೆಯ ಗುಣಗಳು, ಅವರ ಚಿಂತನೆಗಳು ಸರಳ ರೂಪದಲ್ಲಿದ್ದು ಸುಲಭಗ್ರಾಹ್ಯವಾಗಿದೆ. ಆದ್ದರಿಂದಲೇ ಕೀರ್ತನೆಗಳು ಜನರ ಅಂತರಂಗದ ತುಡಿತವನ್ನು ತಿಳಿಸುವ ಒಂದು ವಿಧಾನವಾಗಿ ಕನ್ನಡ ಸಾಹಿತ್ಯದಲ್ಲಿ ಇಂದಿಗೂ ಬಳಕೆಯಲ್ಲಿದೆ. ಇಲ್ಲಿನ ಪ್ರತಿಮಾನಿರ್ಮಿತಿಯಿಂದಾಗಿ ಕೀರ್ತನೆಗಳನ್ನು ಹಾಡುವವರಲ್ಲಿ ಮೂಲಾನುಭವಗಳನ್ನು ಉದ್ದೀಪಿಸುವಲ್ಲಿ ಅವು ನಮಗೆ ಹೆಚ್ಚು ಆತ್ಮೀಯವಾಗಿ ಕಾಣುತ್ತವೆ. ಬದುಕಿನ ಅನುಭವ ತೀವ್ರತೆಗಳನ್ನು ಹೇಳುವಲ್ಲಿ ಪುರಂದರದಾಸರಿಗೆ ಪ್ರತಿಮಾನಿರ್ಮಿತಿ ಸಹಕಾರಿಯಾಗಿದೆ. ಲೌಕಿಕದ ಬದುಕಿನ ತಾಕಲಾಟಗಳು, ಅದನ್ನು ಮೀರಿದ ಆತ್ಮಾವಲೋಕನಗಳು ಕೀರ್ತನೆಗಳಲ್ಲಿ ಮುಖ್ಯವಾಗಿವೆ.

ಪುರಂದರದಾಸರ ಬದುಕಿನಲ್ಲಿ ಅವರ ವ್ಯಕ್ತಿತ್ವ ನಿರ್ಮಾಣಕ್ಕೆ ಕಾರಣವಾದ ಅಂಶಗಳು, ಲೋಕನೀತಿ, ಆತ್ಮಾನುಸಂಧಾನ ಅವರ ಕೀರ್ತನೆಗಳಲ್ಲಿ ಮೂಡಿದ ಬಗೆ ಹಾಗೂ ಆಧ್ಯಾತ್ಮಿಕ ನಿಲುವಿನ ಆತ್ಮಾವಲೋಕನದ ಹಿನ್ನೆಲೆಯಲ್ಲಿ

ಅವರ ಬದುಕನ್ನರಿಯುವ ಪ್ರಯತ್ನ ಮೊದಲ ಹಂತದ ಅಧ್ಯಯನವಾಗಿದೆ. ಎರಡನೆಯದಾಗಿ ಪ್ರತಿಮಾನಿರ್ಮಿತಿಯ ವ್ಯಾಪ್ತಿ, ಸ್ವರೂಪ, ಮಾದರಿಗಳು ಮೊದಲಾದ ಅಂಶಗಳು ಹಾಗೂ ಮೂರನೇ ಹಂತದಲ್ಲಿ ಪುರಂದರದಾಸರ ಕೀರ್ತನೆಗಳಲ್ಲಿ ಕಂಡುಬರುವ ಪ್ರತಿಮಾ ನಿರ್ಮಿತಿಯ ವೈಶಿಷ್ಟ್ಯ, ಅಂದಿನ ಸಾಮಾಜಿಕ, ಆಧ್ಯಾತ್ಮಿಕ ವಿಚಾರಗಳು ಕೀರ್ತನೆಗಳಲ್ಲಿ ಪ್ರತಿಮೆಗಳಾಗಿ ಮೂಡಿದ ಬಗೆಯನ್ನು ಪರಿಶೀಲಿಸಲಾಗಿದೆ.

ಪ್ರಸ್ತುತ ಸಂಪ್ರಬಂಧದಲ್ಲಿ ಪುರಂದರದಾಸರ ಕೀರ್ತನೆಗಳಿಗೆ ಆಧಾರವಾಗಿ ದಿ। ಪಾವಂಜೆ ಗುರುರಾಯರು ಸಂಪಾದಿಸಿ, ಡಾ. ಪಾದೆಕಲ್ಲು ವಿಷ್ಣುಭಟ್ ಪರಿಶೋಧಿಸಿದ 'ಪುರಂದರದಾಸರ ಕೀರ್ತನೆಗಳು' ಕೃತಿಯನ್ನು ಬಳಸಿ ಪ್ರತಿಮೆಗಳ ಬಗೆಗೆ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಟಿಪ್ಪಣಿಗಳು

೧. ಡಾ ಎಚ್. ಎನ್.ಮುರಳೀಧರ: ತಂಬೂರಿ ಮೀಟಿದವ, ಪುಟ ೧೩
೨. ಡಾ ಪಾದೆಕಲ್ಲು ವಿಷ್ಣುಭಟ್: ಪುರಂದರ ದಾಸರ ಕೀರ್ತನೆಗಳು, ಪುಟ ೭
೩. ಮಧುಕರ ಯಕ್ಕುಂಡಿ: ಪುರಂದರದಾಸ– ಕೀರ್ತನ; ಪ್ರಸ್ತಾವನೆ, ಪುಟ ೧೪
೪. ಡಾ ಎಚ್. ಎನ್.ಮುರಳೀಧರ: ತಂಬೂರಿ ಮೀಟಿದವ, ಪುಟ ೧೭
೫. 'ಜೀವಿ' ಕುಲಕರ್ಣಿ: ಕಾವ್ಯದಲ್ಲಿ ಪ್ರತಿಮಾ ಸಂವಿಧಾನ, ಪುಟ ೯
೬. ಡಾ ಜಿ.ಎಸ್. ಶಿವರುದ್ರಪ್ಪ : ಕನ್ನಡದಲ್ಲಿ ಬೆಡಗು, ಪುಟ ೧೧೦
೭. ಡಾ ಜಿ.ಎಸ್. ಶಿವರುದ್ರಪ್ಪ : ಕನ್ನಡದಲ್ಲಿ ಬೆಡಗು, ಪುಟ ೧೧೦
೮. ಡಾ ಜಿ.ಎಸ್. ಶಿವರುದ್ರಪ್ಪ : ಕನ್ನಡದಲ್ಲಿ ಬೆಡಗು, ಪುಟ ೧೧೦
೯. ಡಾ ಜಿ.ಎಸ್.ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ ೮೯
೧೦. ಉಷಾಕಿರಣ್: ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ ೨೮

ಅಧ್ಯಾಯ ೨

ಪ್ರತಿಮಾನಿರ್ಮಿತಿಯ ಹಿನ್ನೆಲೆ ಮತ್ತು ವ್ಯಾಪ್ತಿ

ಅಧ್ಯಾಯ – ೨
ಪ್ರತಿಮಾನಿರ್ಮಿತಿಯ ಹಿನ್ನೆಲೆ ಮತ್ತು ವ್ಯಾಪ್ತಿ

೨.೦

ಸಾಹಿತ್ಯವು ನಿತ್ಯ ಪರಿವರ್ತನಶೀಲವಾದುದು. ಅದು ಸದಾ ಹೊಸತನ್ನು ಹುಡುಕುವ ಯತ್ನದಲ್ಲಿರುತ್ತದೆ. ೨೦ನೇ ಶತಮಾನದಲ್ಲಿ ಕಂಡುಕೊಂಡ ಸಾಹಿತ್ಯದ ಹೊಸ ಅಭಿವ್ಯಕ್ತಿ ವಿಧಾನವೇ ಪ್ರತಿಮಾನಿರ್ಮಿತಿ. ಹಿಂದಿನ ಕಾಲದಲ್ಲಿದ್ದ ಸಾಂಕೇತಿಕತೆ ನಿರ್ಜೀವ ಅನುಕರಣೆ ಎನಿಸಬಹುದಾದ ಸಂದರ್ಭದಲ್ಲಿ ಪ್ರತಿಮೆ ಕಾವ್ಯದಲ್ಲಿ ಜೀವಕಳೆ ಮೂಡಿಸಿತು. ಭಾಷೆಯಲ್ಲಿ ಪದ, ವಾಕ್ಯ, ನುಡಿಗಟ್ಟುಗಳು, ಅಲಂಕಾರಗಳು ಹೀಗೆ ಪ್ರತಿಯೊಂದರಲ್ಲಿ ಒಂದು ಅನನ್ಯತೆಯ ಅಗತ್ಯವಾಯಿತು. ಪಾಶ್ಚಾತ್ಯ ಸಾಹಿತ್ಯದಲ್ಲಿ ಇಂತಹ ಅನೇಕ ಹೊಸತನಗಳನ್ನು ನಾವು ಗುರುತಿಸಬಹುದು. ಶಬ್ದಕಲೆಯಲ್ಲಿ ಆಳವಾದ, ಪೂರ್ಣವಾದ ಉತ್ಕೃಷ್ಟತೆ ಅಗತ್ಯವಾಯಿತು. "ಅಸಾಮಾನ್ಯವಾದ ಮಾನಸಿಕ ಸ್ಥಿತಿಗತಿಗಳನ್ನು ಅಭಿವ್ಯಕ್ತಿಗೊಳಿಸುವ ಬಯಕೆಯೇ ಪ್ರತಿಮಾನಿರ್ಮಿತಿಯ ಬಳಕೆಗೆ ಹೆಚ್ಚಿನ ಒತ್ತನ್ನು ಪ್ರಾಮುಖ್ಯತೆಯನ್ನು ತಂದುಕೊಟ್ಟಿತು. ಎಲ್ಲಾ ಕಾವ್ಯದಲ್ಲಿಯೂ ಕವಿಯ ಅನುಭವದ ಸ್ಪಷ್ಟ ಸೂಚನೆಯನ್ನು, ಉಪಮೆಯಂತಹವುಗಳ ಮೂಲಕ ಕೊಡಲಾಗದಂತಹವನ್ನು ಮತ್ತು ನೇರವಾಗಿ ತಿಳಿಸಲಾಗದ ಅಸ್ಪಷ್ಟ ಸ್ಥಿತಿಗಳನ್ನು ವ್ಯಕ್ತಗೊಳಿಸುವುದಕ್ಕಾಗಿ ಪ್ರತಿಮಾನಿರ್ಮಿತಿಯು ಬಳಕೆಯಾಗುತ್ತದೆ. ಆದರೆ ಕವಿಯ ಅಭಿವ್ಯಕ್ತಿಸುವ ಸಾಮರ್ಥ್ಯ ಮುಖ್ಯವಾಗುತ್ತದೆಯೇ ಹೊರತು ಪ್ರತಿಮೆಯೇ ಮುಖ್ಯವಾಗುವುದು ಸಾಧ್ಯವಿಲ್ಲ. ಒಟ್ಟಿನ ಕಟ್ಟಡದಲ್ಲಿ ಅದು ಒಂದು ಅಂಶವೇ ಹೊರತು ಅದಕ್ಕಿಂತ ಹೆಚ್ಚಿನದಾಗಿರುವುದಿಲ್ಲ. ಆದರೆ ಆಧುನಿಕ ಕಾವ್ಯದಲ್ಲಿ ಈ ಸ್ಥಿತಿ ಬದಲಾಗಿದೆ. ಕವಿಗಳು ತಮ್ಮ ಮಾನಸಿಕ ಸ್ಥಿತಿಯ ಸಂಪೂರ್ಣ ಸಂಕೀರ್ಣತೆಯನ್ನು ಅಭಿವ್ಯಕ್ತಿಸಲು ಪ್ರತಿಮೆಗಳನ್ನೇ ಅಪೇಕ್ಷಿಸುತ್ತಾರೆ ಮತ್ತು ಅವುಗಳನ್ನು ತಮ್ಮ ಮುಖ್ಯ ಕಾರ್ಯವಾದ ವಿಶೇಷ ಕಂಪನ ಸ್ಥಿತಿಯನ್ನು ತಿಳಿಸುವುದಕ್ಕಾಗಿ ಹೆಚ್ಚು ಮುಕ್ತವಾಗಿ ಬಳಸುತ್ತಾರೆ. ಆದಷ್ಟು ಸತ್ಯವನ್ನು ಶಬ್ದಗಳಲ್ಲಿ ಹೇಳುವುದೇ ಪ್ರತಿಮೆಯ ಕೆಲಸ. ಈ ಮೂಲಕ ಪ್ರತಿಮೆಯು ಆಧುನಿಕ ಕಾವ್ಯದಲ್ಲಿ ಅತ್ಯಮೂಲ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ ಮತ್ತು ಇಂದಿನ ಸಂದರ್ಭದಲ್ಲಿ ಇದು ಕಾವ್ಯದ ಸ್ವರೂಪದಲ್ಲಿ ಹೆಚ್ಚು ಆತ್ಮೀಯವಾಗಿ ಸೇರಿಹೋಗಿದೆ" [1].

ಕಾವ್ಯದಲ್ಲಿ ವಿಷಯಗಳನ್ನು ವರ್ಣಿಸುವಾಗ ಪ್ರತಿಮೆಗಳ ಬಳಕೆ ಹೆಚ್ಚು ಅಗತ್ಯವಾಗಿರುತ್ತದೆ. ಇದು ಕವಿಯ ಕವಿತ್ವಶಕ್ತಿಗೆ ಮಾನಸಿಕ ಸ್ಥಿತಿಗೆ ಒಂದು ನಿರ್ದಿಷ್ಟ ರೂಪುರೇಷೆಯನ್ನು ನೀಡುತ್ತದೆ. "ಆಧುನಿಕ ಕವಿತ್ವ ಕೇವಲ ಚಿಂತನೆಗಳ ಸಂವಹನಕ್ಕಷ್ಟೇ ಸೀಮಿತವಾಗದೆ ಓದುಗರ ಮೇಲೆ ಒಂದು ಪ್ರಭಾವವನ್ನು ಉಂಟುಮಾಡುವುದರ ಕಡೆಗೆ ಉದ್ದೇಶಿಸಿರುವುದರಿಂದ ಕವಿಗಳು ಶಬ್ದಗಳನ್ನು ಒಂದು ವಿಶೇಷವಾದ ರೀತಿಯಲ್ಲಿ ಅವುಗಳ ಭಾವನಾತ್ಮಕತೆ ಮತ್ತು ಸಹಮೌಲ್ಯಗಳಿಗೆ ಹೆಚ್ಚು ಒತ್ತನ್ನು ಕೊಟ್ಟು ಬಳಸುತ್ತಾರೆ"[೨]. ಎನ್ನುವ ಮಾತು ಪ್ರತಿಮಾನಿರ್ಮಿತಿಯ ಕಾರ್ಯ ಮತ್ತು ಪ್ರಯೋಜನದ ಮೇಲೆ ಬೆಳಕು ಚೆಲ್ಲುತ್ತದೆ.

ಪ್ರತಿಮೆಯು ಕವಿಯ ಬುದ್ಧಿಮತ್ತೆಗೆ ಸಾಕ್ಷಿಯಾಗಿದ್ದು ಕವಿಯ ಮನದಾಳದಿಂದ ಮೂಡಿಬರುತ್ತವೆ. ಇದು ಕಾವ್ಯದ ಕ್ರಿಯೆ ಮತ್ತು ಆಶಯವನ್ನು ಉದ್ದೀಪಿಸುವಲ್ಲಿ ಯಶಸ್ವಿಯಾಗುತ್ತದೆ.

೨.೧ ಸಾಂಕೇತಿಕತೆಯ ಪ್ರವೃತ್ತಿ ಮತ್ತು ಪ್ರತಿಮಾವಾದ

ಫ್ರಾನ್ಸ್ ದೇಶದಲ್ಲಿ ೧೯ನೇ ಶತಮಾನದಲ್ಲಿ ಸಾಂಕೇತಿಕತೆಯ ಮೂಲಕ ಕಾವ್ಯದ ಪುನರುಜ್ಜೀವನವಾಗತೊಡಗಿತು. ಈ ಸಂದರ್ಭದಲ್ಲಿ ಕಾವ್ಯದಲ್ಲಿ ಪ್ರತಿಮಾ ನಿರ್ಮಿತಿಯೂ ಸೇರಿದಾಗ ಅದು ಕವಿಯ ಕವಿತಾಶಕ್ತಿಗೆ ಒರೆಗಲ್ಲಾಗಿದ್ದು ಬೇರಾವುದೇ ಬೌದ್ಧಿಕ ವಿಧಾನಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಬಲ್ಲದು. ಎಡ್ಮಂಡ್ ವಿಲ್ಸನ್ ಈ ಬಗ್ಗೆ ತನ್ನ ಅಭಿಪ್ರಾಯಗಳನ್ನು ಕುರಿತು ಹೀಗೆ ಹೇಳಿದ್ದಾನೆ. 'ನಮ್ಮ ಪ್ರತಿಯೊಂದು ಭಾವನೆ, ಅಥವಾ ಸಂವೇದನೆ ಹಾಗೂ ಪ್ರತಿಯೊಂದು ಪ್ರಜ್ಞಾಪೂರ್ಣವಾದ ಅನುಭವದ ಕ್ಷಣವೂ ಕೂಡ ಒಂದರಿಂದ ಒಂದು ಭಿನ್ನವಾಗಿರುತ್ತದೆ'. ವಾಸ್ತವದಲ್ಲಿ ಅಂತಹ ಅನುಭವಗಳನ್ನು ಸಾಮಾನ್ಯ ಶಬ್ದಗಳಲ್ಲಿ ಹೇಳುವುದಕ್ಕಿಂತ ತೀವ್ರಾನುಭವವನ್ನು ಪರಿಣಾಮಕಾರಿಯಾಗಿ ಹೇಳಬಲ್ಲ ವಿಶಿಷ್ಟ ಭಾಷೆ, ಶೈಲಿಯೊಂದನ್ನು ಕವಿ ಕಂಡುಕೊಳ್ಳಬೇಕಾಗುತ್ತದೆ. ಅಂತಹ ಭಾಷೆ ಕವಿಯ ವ್ಯಕ್ತಿತ್ವವನ್ನು ಅವನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಸಮರ್ಥವಾಗಿರುತ್ತದೆ. ಇಲ್ಲಿ ಕವಿ ಬಳಸುವ ಶಬ್ದ, ಸಂಕೇತಗಳು ಕವಿ ನೇರವಾಗಿ ಹೇಳಿದ ಕವಿಯ ಆಂತರಿಕ ಭಾವನೆಗಳನ್ನು ಹೇಳುತ್ತವೆ. ಈ ವಿಶಿಷ್ಟ ಶಬ್ದಗಳು ಮತ್ತು ಪ್ರತಿಮೆಗಳು ಓದುಗರಿಗೆ ಕವಿಯ ಭಾವನೆಯನ್ನು ಧ್ವನಿಸುತ್ತದೆ.

ಆಧ್ಯಾತ್ಮಿಕ ಅನುಭೂತಿಯು ಸಾಂಕೇತಿಕತೆಯ ಪ್ರವೃತ್ತಿಗೆ ಕಾರಣವಾಗಿದ್ದು ಈ ತಂತ್ರಕ್ಕೆ ಧಾರ್ಮಿಕತೆಯ ಪ್ರಭಾವವೇ ಕಾರಣವಾಗಿದೆ. ಷೆಲ್ಲಿ ಹೇಳುವಂತೆ ಕವಿಯು ಪ್ರತಿಮೆಗಳ ಮೂಲಕ ವಸ್ತುಗಳ ಅಂತರಾಳದಲ್ಲಿ ಅಡಕವಾಗಿರುವ ಸಾರ್ವಕಾಲಿಕ ಸತ್ಯವನ್ನು ಪ್ರಕಾಶಗೊಳಿಸುತ್ತಾನೆ. ಅದರಲ್ಲಿರುವ ಭಾವನಾತ್ಮಕ ಅಂಶವು ನಮ್ಮ ಅಸ್ತಿತ್ವದಲ್ಲಿ ಅಡಕವಾಗಿರುವ ಆಧ್ಯಾತ್ಮಿಕತೆಯನ್ನು ಎಚ್ಚರಿಸುತ್ತದೆ. 'ನಾನೃಷಿಃ ಕುರುತೇ ಕಾವ್ಯಂ' ಎಂಬ ಮಾತಿನಂತೆ ಋಷಿಯಲ್ಲದವನು ಕಾವ್ಯವನ್ನು ರಚಿಸಲಾರ. ಆದ್ದರಿಂದ ಕವಿಯಾದವನು ಒಬ್ಬ ಋಷಿ ಅಥವಾ ಅವಧೂತನಂತೆ ವಸ್ತುಗಳಲ್ಲಿ ನಿಗೂಢವಾಗಿರುವ ಸಾದೃಶ್ಯತೆಗಳ ಮೂಲಕವೇ ಶ್ರೇಷ್ಠ ಸತ್ಯವನ್ನು, ಬೇರೆ ರೀತಿಯಲ್ಲಿ ಗ್ರಹಿಸಲಾಗದಂತಹವುಗಳನ್ನು ಗೃಹೀತವಾಗುವ ರೀತಿಯಲ್ಲಿ ಒಂದು ಆಕಾರವನ್ನು ಕೊಡಲು ಸಾಧ್ಯವಾಗುತ್ತದೆ. ಕವಿಗೆ ಇಂದ್ರಿಯಗ್ರಾಹಿ ಶಕ್ತಿ ಮತ್ತು ಅಂತಃಸ್ಫೂರ್ತಿ ಎರಡೂ ಅಗತ್ಯವಾಗಿದ್ದು ಇದರಿಂದ ಆಧ್ಯಾತ್ಮಿಕ ಅಂತಃಸ್ಫೂರ್ತಿಯೂ ಸಿದ್ಧಿಸುತ್ತದೆ.

೨.೨ ಭಾರತೀಯ ಕಾವ್ಯಮೀಮಾಂಸೆ ಮತ್ತು ಪ್ರತಿಮಾ ನಿರ್ಮಿತಿ

ಕಾವ್ಯದಲ್ಲಿ ಹೊಸತನವನ್ನು ಮೂಡಿಸುವ ಪ್ರತಿಮಾನಿರ್ಮಿತಿ ಆಂಗ್ಲ ಸಾಹಿತ್ಯದಲ್ಲಿ ಮೊದಲಿಗೆ ವಿವರಣೆಗೆ ಗ್ರಾಸವಾದರೂ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಪ್ರತಿಮಾನಿರ್ಮಿತಿಯ ಅಂಶಗಳನ್ನು ಗುರುತಿಸಬಹುದು. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಪ್ರತಿಮಾನಿರ್ಮಿತಿಯು ಅಲಂಕಾರಗಳಿಗೂ ಮೀರಿದ ಧ್ವನಿಶಕ್ತಿಯನ್ನು ನಿರೂಪಿಸುವ ವಿಶಿಷ್ಟ ವಿಧಾನವಾಗಿದೆ. ಇದು ಕಾವ್ಯ ಸೌಂದರ್ಯವನ್ನು ಹೆಚ್ಚಿಸುವುದು ಮಾತ್ರವಲ್ಲ ಬದುಕಿನ ವಾಸ್ತವ ಚಿತ್ರಣಗಳನ್ನು ಕವಿ ಮನೋಭಾವವನ್ನು ಗುರುತಿಸುವಲ್ಲಿ ಸಹಕಾರಿಯಾಗಿದೆ. ಕವಿಗೆ ನೇರವಾಗಿ ಹೇಳಲಾಗದ ಅಮೂರ್ತ ವಿಚಾರಗಳನ್ನು ಹೇಳುವಲ್ಲಿ ಪ್ರತಿಮಾ ವಿಧಾನವು ನೆರವಾಗುತ್ತದೆ.

ಪ್ರತಿಮೆಗಳು ಕವಿಪ್ರತಿಭೆಯ ನವನವೋನ್ಮೇಷಶಾಲಿ ಗುಣದ ಮೂಲಶಕ್ತಿಯ ಕುರುಹಾಗಿರುತ್ತವೆಯೇ ಹೊರತು ಕಾವ್ಯದ ನಿಯಮ ಶಾಸ್ತ್ರಗಳಿಗೆ ಒಳಪಡುವುದಿಲ್ಲ. "ಉಪಮಾ, ರೂಪಕ, ಸಂಕೇತ, ಪ್ರತೀಕ, ಪ್ರತಿಮೆ ಇತ್ಯಾದಿಗಳು ಒಂದು ಭಾಷೆಯನ್ನು ಸೃಜನಾತ್ಮಕವಾಗಿ ಬಳಸಿದಾಗ ಮಾತ್ರ ಮೂಡುವ ಉಕ್ತಿ

ವಿಧಾನಗಳು. ಭಾಷೆಯನ್ನು ಸೃಜನಾತ್ಮಕವಾಗಿ ಬಳಸುವುದು ಎಂದರೆ ರಸಪರವಾದ ಮನಸ್ಸೊಂದು ಭಾಷೆಯ ರೂಢಿಜಡವಾದ ವ್ಯಾವಹಾರಿಕ ಸ್ವರೂಪವನ್ನು ಮುರಿದು ತನ್ನ ಸಮೃದ್ಧವೂ ತೀವ್ರವೂ ಆದ ಅನುಭವಗಳಿಗೆ ಅದನ್ನು ತಕ್ಕ ಮಾಧ್ಯಮವನ್ನಾಗಿ ಕಟ್ಟುವ ಕ್ರಿಯೆಯಲ್ಲಿ ತೊಡಗಿರುವುದು ಎಂದರ್ಥ"[೩]. ಇದು ಪ್ರತಿಮೆಯ ಸೃಜನಶೀಲ ಗುಣವನ್ನು ಹೇಳುತ್ತದೆ. ನಿರಂತರವಾಗಿ ಹೊಸತನ್ನು ಹುಡುಕುವುದು ಮನುಷ್ಯಸಹಜ ಧರ್ಮವಾಗಿರುವಂತೆ ಸಾಹಿತ್ಯದಲ್ಲಿಯೂ ಹೊಸತನ್ನು ಹುಡುಕುತ್ತಾರೆ. ಇಂತಹ ಹೊಸ ಆವಿಷ್ಕಾರವೇ ಪ್ರತಿಮೆ. "ಪ್ರತಿಮೆ ಎಂಬುದು ಮೂಲತಃ ಕವಿಮನಸ್ಸಿನ ಸ್ಲಜನೆ. ಒಂದು ಮತ್ತೊಂದಕ್ಕೆ ದೂರದಲ್ಲಿರುವ ಮತ್ತು ಯಾವುದೇ ಸಂಬಂಧವಾಗಿದೆಯೆಂಬಂತೆ ತೋರದ, ಎರಡು ಅಥವಾ ಹೆಚ್ಚಿನ ಮತ್ತು ಸತ್ಯಗಳ ಹೋಲಿಕೆಯಿಂದ ಸಂಭವಿಸುವುದಲ್ಲ ಅದು; ಅದರ ಬದಲು ದೂರ ದೂರದ ಆ ಎರಡು ವಸ್ತುಗಳಿಗಿರುವ ಯಾವುದೇ ಸಾದೃಶ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅವೆರಡಕ್ಕಿರುವ ಒಳಸಂಬಂಧವನ್ನು ಕವಿಯ ಪ್ರಜ್ಞೆ ಮಾತ್ರ ಗ್ರಹಿಸಿ, ಅವುಗಳನ್ನು ಸಂಘಟಿಸಿದ್ದರಿಂದ, ಅದುವರೆಗೂ ಮನೋಗೋಚರವಾಗದಿದ್ದ ಹೊಸತೊಂದು ಹುಟ್ಟಿಕೊಳ್ಳುತ್ತದೆ, ಇದೇ ಪ್ರತಿಮೆ. ಹೀಗೆ ಗೃಹೀತವಾಗುವ ಪ್ರತಿಮೆ, ಗೊತ್ತಿರುವ ಎರಡು ವಸ್ತುಗಳ ಸಾದೃಶ್ಯವನ್ನು ಮೂಲಮಾನವನ್ನಾಗಿ ಉಳ್ಳ ರೂಪಕದಿಂದ ಭಿನ್ನವಾದುದು. ಪ್ರತಿಮೆ ಒಂದರ ಮೂಲಕ ಮತ್ತೊಂದನ್ನು ತೆರೆಯುವಂಥದ್ದು, ಮತ್ತು ಅವೆರಡರ ಸಾಮ್ಯ, ಅಜ್ಞಾತವಾದುದನ್ನು ಜ್ಞಾತವಾನ್ನಾಗಿ ಮಾಡುತ್ತದೆ."[೪] ಮೇಲ್ನೋಟಕ್ಕೆ ಯಾವುದೇ ಸಾದೃಶ್ಯವಿಲ್ಲದಿದ್ದರೂ ಕಾವ್ಯದ ಅಂತರಾಳದ ಸಾದೃಶ್ಯವಿದ್ದರೆ ಅಲ್ಲಿ ಭಾವ ಸಂಚಾರವಾಗಿ ಹೊಸ ಭಾವ ಜಾಗೃತವಾಗುತ್ತದೆ.

ಪ್ರತಿಮೆಗಳು ಅನುಭವವೇದ್ಯವಾಗಿದ್ದು ಇವುಗಳನ್ನು ನಿರ್ದಿಷ್ಟವಾದ ಲಕ್ಷಣಗಳ ಒಂದು ಚೌಕಟ್ಟಿಗೆ ಒಳಪಡಿಸುವುದು ಕಷ್ಟ. ಒಂದು ಶಬ್ದಚಿತ್ರದ ರೂಪದಲ್ಲಿ ಪ್ರಕಟವಾಗುವ ಪ್ರತಿಮೆ ಕವಿಯ ಜೀವನ ಸಂವೇದನೆಗಳ ಒಂದು ಸಂಕೀರ್ಣರೂಪವಾಗಿರುತ್ತದೆ. ಕವಿಯ ಅನುಭವಗಳ ಅಭಿವ್ಯಕ್ತಿಗೆ ಚಿಹ್ನೆ, ಸಂಕೇತ, ಪ್ರತೀಕಗಳನ್ನು ಕಾವ್ಯದಲ್ಲಿ ಬಳಸುತ್ತಾನೆ.

ಸಾಹಿತ್ಯದಲ್ಲಿ ಕವಿ ಬಳಸುವ ಪ್ರತೀಕಗಳು ಪ್ರತಿಮಾನಿರ್ಮಿತಿಗೆ ಪ್ರೇರಕವಾದವು. ಧ್ವನಿಪೂರ್ಣವಾದ ಉಪಮೆ ಅಥವಾ ರೂಪಕಗಳೂ ಪ್ರತಿಮೆಯಾಗಬಲ್ಲದು. "ಉಪಮೆಯಲ್ಲಿ ಸಾದೃಶ್ಯ ಸಂಬಂಧ ವಾಚಕವಾಗಿದ್ದರೆ, ರೂಪಕದಲ್ಲಿ ಉಪಮಾನ ಉಪಮೇಯಗಳು ಅಭೇದವಾಗಿದ್ದು ಸಂಕ್ಷಿಪ್ತಗುಣ

ಪ್ರಧಾನವಾಗಿರುತ್ತದೆ. ಸಂಕ್ಷಿಪ್ತ ಗುಣ ಸಾಧನೆಯಿಂದ ರೂಪಕ ಒಂದು ವಿಶಿಷ್ಟ ಅಭಿವ್ಯಕ್ತಿ ಪ್ರಕಾರವಾಗುತ್ತದೆ. ಸಾಂಕೇತಿಕತೆಯನ್ನು ಕಂಡುಕೊಳ್ಳದ ಭಾವನೆಗಳಲ್ಲಿ ಸಂಕ್ಷಿಪ್ತತೆ ಸಾಧನೆಯಾಗದೆ ಪರಿಣಾಮ ಅಸ್ತವ್ಯಸ್ತವಾಗುತ್ತದೆ".[೬]

ಒಂದು ಉಪಮೆ ಅಥವಾ ರೂಪಕಕ್ಕಿಂತ ಪ್ರತಿಮೆ ಹೇಳಬೇಕಾದುದನ್ನು ಇನ್ನೂ ಪರಿಣಾಮಕಾರಿಯಾಗಿ ಹೆಚ್ಚಿನ ವಿವರಗಳನ್ನು ಪ್ರಚುರಪಡಿಸುತ್ತದೆ. ಉದಾಹರಣೆಗೆ 'ಅನುಭವದಡುಗೆಯ ಮಾಡಿ ಅದಕ್ಕನುಭವಿಗಳು ಬಂದು ನೀವೆಲ್ಲ ಸೇರಿ', 'ಆಚಾರವಿಲ್ಲದ ನಾಲಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ', 'ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರಿ', 'ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ', 'ಮುಸುರೆ ತೊಳೆಯಬೇಕು ಈ ಮನಸಿನ ಮುಸುರೆ ತೊಳೆಯಬೇಕು', 'ಬೇವು ಬೆಲ್ಲದೊಳಿಡಲೇನು ಫಲ, ಹಾವಿಗೆ ಹಾಲೆರೆದೇನು ಫಲ', ಮುಂತಾಗಿ ಧ್ವನಿಶಕ್ತಿಗೆ ಕಾರಣವಾದ ಅನೇಕ ಪ್ರತಿಮೆಗಳನ್ನು ನಾವು ಪುರಂದರದಾಸರ ಕೀರ್ತನೆಗಳಲ್ಲಿ ಕಾಣಬಹುದು. ಸಂಕ್ಷಿಪ್ತತೆ, ನವೀನತೆ, ಅಂತರ್‌ದರ್ಶನ, ತೀವ್ರತೆ ಮತ್ತು ಜಾಗೃತಿಯ ಗುಣವುಳ್ಳ ಪ್ರತಿಮೆಗಳೇ ಕಾವ್ಯದ ಶಕ್ತಿಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗುತ್ತವೆ. ಕಾವ್ಯದಲ್ಲಿ ಪ್ರತಿಮೆಯನ್ನು ತುರುಕುವ, ಕೆಡಹುವ ಯತ್ನ ಮಾಡಬಾರದು. ಅದು ಅಪ್ರಯತ್ನಪೂರ್ವಕವಾಗಿ ಸಹಜವಾಗಿ ಹೊರಹೊಮ್ಮಿ ಕಾವ್ಯಸೌಂದರ್ಯವನ್ನು, ಅರ್ಥವಂತಿಕೆಯನ್ನು ಹೆಚ್ಚಿಸುವಂತಿರಬೇಕು. ಹಾಗಿದ್ದಾಗ ಮಾತ್ರ ಅದು ಕವಿತೆಯಲ್ಲಿ ಲೀನವಾಗಿರುತ್ತದೆ. 'ಕರಿತುರಗವಿರಲು ಬಿಟ್ಟು ಕೆಡಹುವ ಕತ್ತೆಯೇರಲು ಬೇಡವೊ' ಯುದ್ಧರಂಗಕ್ಕೆ ಹೋಗುವಾಗ ಆನೆ ಕುದುರೆಯನ್ನೇರಿ ಹೋಗಬೇಕೇ ಹೊರತು ಬೀಳಿಸುವ ಕತ್ತೆಯನ್ನೇರಬಾರದು. ಈ ದೃಷ್ಟಿ ಪ್ರತಿಮೆಯಲ್ಲಿ ಅಮೂರ್ತವಾದ ಭಾವನೆಯನ್ನು ಮೂರ್ತಗೊಳಿಸುವಲ್ಲಿ ಕಾಣಬಹುದು. ಕೆಲಸ ಮಾಡಲು ನಿಜವಾದ ಶಕ್ತಿ ಸಾಮರ್ಥ್ಯಗಳೆಲ್ಲವೂ ಇದ್ದು ಅವುಗಳನ್ನು ಬಳಸಲು ಹಿಂದೇಟು ಹಾಕುವ ಜನರ ಉದಾಸೀನತೆಯನ್ನು ಈ ಪ್ರತಿಮೆಯಲ್ಲಿ ಚಿತ್ರಿಸಲಾಗಿದೆ. ಇಂತಹ ಧ್ವನಿಪೂರ್ಣ ಪ್ರತಿಮೆಗಳಲ್ಲಿ ಶಬ್ದವು ಚಿಕ್ಕದಾಗಿದ್ದರೂ ಅದು ವಿಶಾಲವಾದ ಅರ್ಥವಂತಿಕೆಯನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತದೆ.

ಸಂಕೇತಗಳು, ಪ್ರತೀಕಗಳು ಕವಿಯ ಭಾವನೆಗಳನ್ನು, ಕಾವ್ಯದ ಅಂತರಾರ್ಥವನ್ನು ಸೂಚಿಸುತ್ತವೆ. ಸಂಕೇತದ ಮುಂದುವರಿದ ರೂಪವಾಗಿ ಪ್ರತೀಕವು ಭಾವನಾ ಪ್ರಧಾನವಾಗಿರುತ್ತದೆ. ಸಂಕೇತಗಳಲ್ಲಿನ ಅರ್ಥವಂತಿಕೆ ಹೆಚ್ಚುತ್ತಾ ಹೋದಂತೆ ಅವು

ಪ್ರತೀಕವಾಗಿ ಪರಿವರ್ತನೆಗೊಳ್ಳುತ್ತವೆ. "ಸಂಕೇತ ಮತ್ತು ಪ್ರತೀಕಗಳಂತೆಯೇ ಮೂಲಭೂತವಾಗಿ ಭಾವಸೂಚಕವಾಗಿ ನಿರೂಪಿತವಾದರೂ ಅವುಗಳಿಗಿಂತ ಅತ್ಯಂತ ಮತ್ತು ಮಹತ್ವದ ರೀತಿಯಲ್ಲಿ ಕಾವ್ಯದ ಆಶಯವನ್ನು ಉದ್ದೀಪಿಸುವ ಮತ್ತೊಂದು ವಿಧಾನವೇ ಪ್ರತಿಮಾ ನಿರ್ಮಿತಿ". ಇದು ಕಾವ್ಯಕ್ಕೆ ಪೋಷಕವಾಗಿ ಕವಿಯ ಪ್ರತಿಭಾಶಕ್ತಿಯನ್ನು ಬಿಂಬಿಸುವುದರೊಂದಿಗೆ ಮೂಡಿಬರುತ್ತದೆ. ಇದನ್ನು ಪ್ರತೀಕದ ಮುಂದುವರಿದ ರೂಪವೆಂದೂ, ಪ್ರತೀಕದ ಒಂದು ಲೋಕೋತ್ತರ ಆವಿರ್ಭೂತಿ ಎಂದೂ ಪರಿಗಣಿಸಲಾಗಿದೆ.

ಪ್ರತಿಮೆಯು ಕೆಲವೊಮ್ಮೆ ರೂಪಕ ಅಥವಾ ರೂಪಕಗಳ ಸಮುಚ್ಚಯದ ರೂಪದಲ್ಲಿಯೂ ಪ್ರಕಟಗೊಳ್ಳುತ್ತದೆ. ರೂಪಕವು ಕಾವ್ಯದಲ್ಲಿ ರಸಾನುಭವವನ್ನು ಉದ್ದೀಪಿಸುತ್ತದೆ. ರೂಪಕದಲ್ಲಿ ಬಳಕೆಯಾಗುವ ಶಬ್ದಗಳು ಅಥವಾ ಅದರ ಅರ್ಥ ಮಾತ್ರ ಮುಖ್ಯವಾಗಿರದೆ ಅದರ ಮೂಲಕ ಅಭಿವ್ಯಕ್ತಗೊಳ್ಳುವ ಕವಿಯ ಅನುಭವಗಳು ಕವಿಯ ಬುದ್ಧಿಶಕ್ತಿಯ ಮಾಪಕಗಳಿಗೆ ರೂಪಕ ಅಥವಾ ಪ್ರತಿಮೆಯು ಕಾವ್ಯಗುಣದ ಸೌಂದರ್ಯವನ್ನು ಹೆಚ್ಚಿಸುವ ಸೌಂದರ್ಯದ ಅಂಶಕ್ಕಿಂತ ಓದುಗನ ಮನಸ್ಸಿನಲ್ಲಿ ಕವಿಯ ಮೂಲಾನುಭವವನ್ನು ಜಾಗೃತಗೊಳಿಸುವ ಕಾವ್ಯ ಶಕ್ತಿಯನ್ನು ಹೊಂದಿರುತ್ತದೆ. ಇದು ಕವಿಯ ಚಿಂತನೆಗಳಿಗೊಂದು ಸ್ಪಷ್ಟ ರೂಪವನ್ನು ಕೊಡುವುದರ ಮೂಲಕ ವಸ್ತುವಿನ ಸತ್ಯದರ್ಶನವನ್ನು ಮಾಡುತ್ತದೆ. ಆದ್ದರಿಂದ ಸತ್ಯದರ್ಶನದ ಮಾಧ್ಯಮವಾಗಿಯೂ ಪ್ರತಿಮೆಯನ್ನು ಗುರುತಿಸುತ್ತಾರೆ. "ಅಲೌಕಿಕ ಭಾವದೀಪ್ತಿಯ ಅನುಭವವಾಗದೆ ಪ್ರತಿಮೆ ನಿರ್ಮಾಣವಾಗುವುದಿಲ್ಲ. ಭಾವದೀಪ್ತಿಗೊಳ್ಳದ ಪ್ರತೀಕಗಳು ಕೇವಲ ಪ್ರತೀಕಗಳಾಗಿಯೇ ಉಳಿಯುತ್ತವೆ. ಸಾಮಾನ್ಯ ಕಾವ್ಯವಾಗಿಬಿಡಬಹುದಾಗಿದ್ದ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳೂ ಸಹ ಸತ್ಯದ ದರ್ಶನದ ಭಾವದೀಪ್ತಿಯಿಂದ ಮಹತೋಮಹೀಯತೆಯ ಪ್ರತಿಮಾಧ್ವನಿಯನ್ನು ಪಡೆಯುತ್ತವೆ. ಶ್ರೀ ರಾಮನ ಪಾತ್ರ ಧರ್ಮದ ಪ್ರತೀಕವಾದರೆ, ಆಂಜನೇಯನ ಜೀವಮಾನದ ಸಮಗ್ರ ಚಿತ್ರವು ಸ್ವಾಮಿಭಕ್ತಿಯ ಪರಾಕಾಷ್ಠತೆಗೆ ಪ್ರತೀಕವಾಗುತ್ತದೆ. ಸೀತೆ ಕೇವಲ ಸೀತೆಯಾಗದೆ ಇಡೀ ಹೆಣ್ಣುಕುಲದ ಶೋಷಿತ ಭಾವಕ್ಕೆ ವಿಧಿಯ ವೈಚಿತ್ರ್ಯಕ್ಕೆ ಪ್ರತೀಕವಾಗುತ್ತಾಳೆ. ಈ ಎಲ್ಲಾ ಪಾತ್ರಗಳೂ ಮುಖ್ಯ ಕಾವ್ಯಪ್ರತಿಮೆಯ ಒಂದೊಂದು ಅಂಗಗಳಾಗುತ್ತವೆ".[೬]

ಕವಿ ಬಳಸುವ ಒಂದು ಪ್ರತಿಮೆ ಇನ್ನೊಂದು ಪ್ರತಿಮೆಗೆ ಕಾರಣವಾಗಬಹುದು. ಕೆಲವೊಮ್ಮೆ ಅನೇಕ ಪ್ರತಿಮೆಗಳು ಸಹಯೋಗಗೊಂಡು

ಒಂದು ಪ್ರತಿಮೆಯಾಗಬಹುದು. ಈ ಕೆಳಗಿನ ಕೀರ್ತನೆಯಲ್ಲಿ ಬೇರೆ ಬೇರೆ ಪ್ರತಿಮೆಗಳು ಒಂದಾಗಿರುವುದನ್ನು ಕಾಣಬಹುದು.

ಕೆಂಡಕೆ ಒರಳೆ ಮುತ್ತುವುದುಂಟೇ
ಪಾಂಡುರಂಗನ ದಾಸರಿಗೆ ಭಯವುಂಟೆ
ಆನೆ ಸಿಂಹವ ಕೂಡೆ ಸ್ನೇಹ ಬೆಳೆಸುವುದುಂಟೆ|
ಶ್ವಾನ ಹೆಬ್ಬುಲಿ ಕೂಡೆ ಸರಸವುಂಟೆ

ಸ್ವಾಮಿ ಶ್ರೀ ಪುರಂದರವಿಠಲರಾಯನ
ನಾಮಧಾರಿಗಳಿಗೆ ನರಕವುಂಟೆ. (೩೧೫)

ಇಲ್ಲಿ ಅಮೂರ್ತ ವಿಚಾರಗಳನ್ನು ಮೂರ್ತಗೊಳಿಸುವ ಕಾವ್ಯಾಭಿವ್ಯಕ್ತಿಯಲ್ಲಿ ಪ್ರತಿಮಾ ವಿಧಾನ ಯಶಸ್ವಿಯಾಗಿದೆ. ಜಗತ್ತಿನ ಅನೇಕ ಕವಿಗಳು ತಮ್ಮ ತತ್ವದರ್ಶನವನ್ನು ಪ್ರತಿಪಾದಿಸುವಲ್ಲಿ ಪ್ರತಿಮಾ ವಿಧಾನವು ಯಶಸ್ವಿಯಾಗಿದೆ.

ಕಾವ್ಯರಚನೆಯ ಮೂಲೋದ್ದೇಶ ರಸಾನುಭವವೆಂದು ಪರಿಗಣಿಸಿದರೆ ಕಾವ್ಯದಲ್ಲಿ ವಾಸ್ತವತೆಯ ಔಚಿತ್ಯದ ಮಿತಿಯಲ್ಲಿ ಕಂಡುಬರುವ ಭಾವಸೌಂದರ್ಯದ ಒಂದೊಂದು ಎಳೆಯೂ ಮಹತ್ವಪೂರ್ಣವಾಗದೆ ಪ್ರತಿಯೊಬ್ಬ ಕವಿಗೂ ಒಂದು ಅನನ್ಯತೆ, ವಿಶಿಷ್ಟತೆ ಇರುತ್ತದೆ. ಕವಿ ತನ್ನ ಕಾವ್ಯದಲ್ಲಿ ಬಳಸುವ ಪ್ರತಿಮೆಗಳು ಈ ವಿಶಿಷ್ಟತೆಗೆ ಕಾರಣವಾಗುತ್ತದೆ. ಪ್ರತಿಮೆ ಒಂದು ಸುಂದರವಾದ ಶಬ್ದಚಿತ್ರವಾಗಿ ಮೂಡಿ ಬರುವುದರ ಮೂಲಕ ಇಡೀ ಕಾವ್ಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಅದು ಕಾವ್ಯದಲ್ಲಿ ಅರ್ಥವಂತಿಕೆಯನ್ನು ಹೆಚ್ಚಿಸಿ ಕಾವ್ಯದ ಮೌಲ್ಯವನ್ನು ವರ್ಧಿಸುತ್ತದೆ. ಪ್ರತಿಮೆಯು ಕಾವ್ಯದ ಸಂವಹನಕ್ಕೆ, ಅರ್ಥಸ್ಪಷ್ಟತೆಗೆ ನೆರವಾಗಬೇಕು. ಆದ್ದರಿಂದ ಪ್ರತಿಮೆ ಕಾವ್ಯದಲ್ಲಿ ಲೀನವಾಗಿರಬೇಕು. ಪ್ರತಿಮೆಯಲ್ಲಿ ಬೌದ್ಧಿಕತೆ ಮತ್ತು ಭಾವನಾತ್ಮಕ ವಿಚಾರಗಳನ್ನು ಬದಿಗಿರಿಸಿ ಕೇವಲ ವಸ್ತುವನ್ನು ಗಮನಿಸಿದರೂ ಅದು ಕೇವಲ ಇಂದ್ರಿಯ ಸಂವೇದನೆಗಿಂತ ಮಿಗಿಲಾಗಿ ಇಂದ್ರಿಯಾತೀತ ಅನುಭವಗಳನ್ನು ಹೇಳುವಲ್ಲಿ ಹೆಚ್ಚು ಯಶಸ್ವಿಯಾಗಿರುತ್ತದೆ. ಆದ್ದರಿಂದ ಆಧ್ಯಾತ್ಮಿಕ ವಿಚಾರಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಪರಿಣಾಮಕಾರಿಯಾಗಿ ಹೇಳುವಲ್ಲಿ ಪ್ರತಿಮಾ ವಿಧಾನ ಹೆಚ್ಚು ಬಳಕೆಗೆ ಬರುತ್ತದೆ.

ಕಾವ್ಯ ಪ್ರತಿಮೆಗಳಲ್ಲಿ ಸೌಂದರ್ಯದ ಅಂಶಗಳು ಬಹಳಷ್ಟಿದ್ದರೂ ಸೌಂದರ್ಯವೇ ಅದರ ಮುಖ್ಯ ಉದ್ದೇಶವಲ್ಲ. ಅದು ಕಾವ್ಯ ವಸ್ತುವಿಗೆ ಪೋಷಕವಾಗಿ ಮಾತ್ರ ಬರುತ್ತದೆ. ಕವಿ ತನ್ನ ಭಾವನೆಗಳನ್ನು ಅಮೂರ್ತ

ವಿಚಾರಗಳನ್ನು ಪ್ರಚುರಪಡಿಸಲು ಹಿಂದೆಲ್ಲೋ ನೋಡಿದ, ಕೇಳಿದ ಹಾಗೆ ಮೂರ್ತ ಚಿತ್ರಗಳ ರೂಪದಲ್ಲಿ ಹೇಳಬೇಕಾಗುತ್ತದೆ. “ಕವಿ ತನ್ನ ಮನಸ್ಸಿನಲ್ಲಿ ಇಂತಹ ಅಸಂಖ್ಯಾತ ಸ್ಮೃತಿ ಚಿತ್ರಗಳ ಒಂದು ಕೋಶವನ್ನೇ ರೂಪಿಸಿಕೊಂಡಿರುತ್ತಾನೆ. ಈ ಚಿತ್ರಗಳು ಮೂರು ವಿಧವಾಗಿರಬಹುದು: ಸಾದೃಶ್ಯಮೂಲ, ವಿರೋಧಮೂಲ ಮತ್ತು ಅಭೇದಮೂಲ. ಆದರೆ ಇವೆಲ್ಲವುಗಳ ಮೂಲಕ ಕವಿಯ ಅನುಭವಕ್ಕೆ ಹೆಚ್ಚಿನ ಅರ್ಥ, ಹೆಚ್ಚಿನ ಭಾವಸೌಂದರ್ಯ ಉಂಟಾಗುವುದೇ ಕಾವ್ಯರಚನೆಯ ಉದ್ದೇಶ. ಭಾರತೀಯ ಕಾವ್ಯಮಿಮಾಂಸೆಯಲ್ಲಿ ಇಂತಹ ಅಲಂಕಾರಗಳ ಬಗ್ಗೆ ಮೊದಲ ಉಲ್ಲೇಖ ಕಾಣುವುದು ಭರತನ ‘ನಾಟ್ಯಶಾಸ್ತ್ರ’ ಗ್ರಂಥದಲ್ಲಿ. ಅವನು ಹೆಸರಿಸಿರುವ ನಾಲ್ಕು ಅಲಂಕಾರಗಳೆಂದರೆ ಉಪಮೆ, ರೂಪಕ, ದೀಪಕ ಮತ್ತು ಯಮಕ”.[೭] ಉಪಮೆಗಿಂತಲೂ ರೂಪಕವು ಹೆಚ್ಚಿನ ಭಾವತೀವ್ರತೆಯನ್ನು ಹೊಂದಿದೆ. ಉಪಮೇಯಗಳ ನಡುವೆ ಇರುವ ಭೇದವು ಮರೆಯಾಗುವಂತೆ ವರ್ಣಿತವಾಗುವ ಉಪಮೆಯೇ ರೂಪಕವೆನ್ನಿಸುತ್ತದೆ ಎಂದು ದಂಡಿ ಹೇಳಿದ್ದಾನೆ. ‘ಸಾಮ್ಯವಿದ್ದಾಗ ಉಪಮೆ, ಅತಿಸಾಮ್ಯವಿದ್ದಾಗ ರೂಪಕ” ಎಂಬ ಮಾಣಿಕ್ಯ ಚಂದ್ರನ ಮಾತು ಹೆಚ್ಚು ಸಮಂಜಸವಾಗಿ ಕಾಣುತ್ತದೆ. “ಉಪಮಾನ ಉಪಮೇಯಗಳು ಭೇದಗಳು ಜ್ಞಾತವಾಗುತ್ತಿದ್ದರೂ ಅಭೇದ ಪ್ರತೀತಿ ಬರುವುದೇ ಈ ಅಲಂಕಾರದ ಲಕ್ಷಣ”.[೮] ಉಪಮಾನ ಉಪಮೇಯಗಳಿಗಿಂತ ಅವುಗಳ ಅಭೇದದ ಪ್ರತೀತಿ ಮುಖ್ಯ. ಕಮಲದಂತೆ ಮುಖವುಳ್ಳವಳು ಎಂಬ ಉಪಮೆಯಲ್ಲಿ ಉಪಮಾನ ಉಪಮೇಯಗಳು ಪ್ರತ್ಯೇಕವಾಗಿ ಕಾಣುತ್ತಿದ್ದರೆ ಕಮಲಮುಖಿ ಎಂಬ ರೂಪಕದಲ್ಲಿ ಅವುಗಳ ನಡುವೆ ಅಭೇದವಿರುವುದನ್ನು ಕಾಣಬಹುದು. “ರೂಪಕವು ಒಂದರ್ಥದಲ್ಲಿ ಉಪಮೆಯೇ ; ಆದರೆ ಇದರಲ್ಲಿನ ಅಭಿವ್ಯಕ್ತಿ ಗಣನೀಯವಾಗಿ ತೀವ್ರವಾದದ್ದು, ವಸ್ತುಗಳು ಹಾಗೂ ಅವುಗಳನ್ನು ಗ್ರಹಿಸುವ ಅಭಿನ್ನತೆಯನ್ನು ಸೂಚಿಸುವಂತಹದ್ದು. ವಸ್ತುಗಳ ನಡುವಿನ ಅಭಿನ್ನತೆಯ ಗ್ರಹಿಕೆಯ ತೀವ್ರರೂಪದ ಅಭಿವ್ಯಕ್ತಿಗೆ ರೂಪಕವು ಒಂದು ಉತ್ಕೃಷ್ಟ ವಿಧಾನವೆಂಬುದನ್ನು ಆಧುನಿಕ ವಿಮರ್ಶಕರು ಗುರುತಿಸಿದ್ದಾರೆ. “ಹಿಂದಿನ ಆಲಂಕಾರಿಕರ ಪ್ರಕಾರ ಉಪಮಾಲಂಕಾರದಿಂದ ಸಾದೃಶ್ಯಸೂಚಕ ಶಬ್ದವನ್ನು ಕಿತ್ತು ಹಾಕಿದರೆ ಬರುವ ಅಲಂಕಾರವೇ ರೂಪಕಾಲಂಕಾರ”.[೯] ಎಂಬ ಅಭಿಪ್ರಾಯವಿರುವುದನ್ನು ಗಮನಿಸಬಹುದು. ಕಾವ್ಯದಲ್ಲಿ ಇತರ ಅಲಂಕಾರಗಳಿಗಿಂತ ಹೆಚ್ಚಿನ ಸ್ಥಾನವನ್ನು ರೂಪಕಾಲಂಕಾರವು ಪಡೆದಿದ್ದು, ಕವಿಯ ಜೀವನಾನುಭವಗಳನ್ನು ಭಾವತೀವ್ರತೆಗಳನ್ನು ಹೇಳುವಲ್ಲಿ ಯಶಸ್ವಿಯಾಗಿದೆ. ‘ರೂಪಕ

ಸಾಮ್ರಾಜ್ಯ ಚಕ್ರವರ್ತಿಯೆನಿಸಿದ ಕುಮಾರವ್ಯಾಸ, ಪಂಪ, ರನ್ನ, ಪೊನ್ನ ಮೊದಲಾದ ಅನೇಕ ಕವಿಗಳು ಬಳಸಿದ ರೂಪಕಗಳಿಂದ ಕಾವ್ಯದ ಸೊಗಸು ಹೆಚ್ಚಿದೆ. 'ರೂಪಕ ಪ್ರತಿಮೆಯ ಸರ್ವಲಕ್ಷಣಗಳಿಂದಲೂ ಸಂಪನ್ನವಾಗಿರುತ್ತದೆ. ಅದೊಂದು ಸೌಂದರ್ಯವಿಶೇಷ ಮಾತ್ರವಲ್ಲ, ಶಕ್ತಿ ವಿಶೇಷವೂ ಹೌದು. ಅದೊಂದು ಶಬ್ದಪ್ರಕಾರ ಮಾತ್ರವಲ್ಲ, ಅರ್ಥಪ್ರಕಾರ ಮಾತ್ರವಲ್ಲ, ಅನುಭವ ಪ್ರಕಾರವೂ ಆಗಿದೆ".[೧೦]

"ಉಪಮೆಯಲ್ಲಿ ವಾಚ್ಯವಾಗಿರುವ ವಸ್ತುಗಳ ಸದೃಶ್ಯ ರೂಪಕದಲ್ಲಿ ಅಭೇದ ರೂಪುಗೊಳ್ಳುತ್ತದೆ. ಪ್ರತಿಮೆಯಲ್ಲಿ ಈ ಸಾದೃಶ್ಯತೆ ದೂರವಾಗಿದ್ದು ವಸ್ತುಗಳ ನಡುವಣ ಭಾವಸಂಕೀರ್ಣತೆ ಕವಿಯ ತೀವ್ರಾನುಭವದ ಮೂಲಕ ಸಂವೇದ್ಯವಾಗುತ್ತದೆ. ಪ್ರತಿಮೆ ಮುಖ್ಯವಾಗಿ ಒಂದು ಶಬ್ದಚಿತ್ರದ ರೂಪದಲ್ಲಿ ಬದುಕಿನ ಭಾವತೀವ್ರತೆಯ ಸಂಕೀರ್ಣ ರೂಪದಲ್ಲಿ ಹೊಸ ಅರ್ಥಗಳನ್ನು ಮೂಡಿಸುತ್ತಾ ಭಾವದೀಪ್ತಿಯನ್ನುಂಟುಮಾಡುತ್ತದೆ. ಕಾವ್ಯಪ್ರತಿಮೆ ಎಂದರೆ ಶಬ್ದಚಿತ್ರ ಎನ್ನುವಂತೆಯೇ ಅಂತಹ ಶಬ್ದಚಿತ್ರಗಳನ್ನು ಮೂಡಿಸುವ ಒಂದು ವಿಧಾನ ಎಂಬ ಅರ್ಥವೂ ಮೂಡುತ್ತದೆ". [೧೧]

ಇಂತಹ ಅಲಂಕಾರಗಳಿಗಿಂತ ಭಿನ್ನವಾಗಿದ್ದು ಇಂದು ಕಾವ್ಯದ ಪ್ರಧಾನ ಅಂಶವಾಗಿದೆ. ಇದು ಕಾವ್ಯದ ಜೀವಾಳವಾಗಿದ್ದು, ಕಾವ್ಯದ ಉದ್ದೇಶವನ್ನು ಈಡೇರಿಸುವಲ್ಲಿ ಬಹಳಷ್ಟು ಕೆಲಸ ಮಾಡುತ್ತದೆ. ಇಂದಿನ ಕಾವ್ಯಗಳಲ್ಲಿ ಬಳಕೆಯಾಗುವ ಪ್ರತಿಮಾ ವಿಧಾನವು ಕಾವ್ಯದುದ್ದಕ್ಕೂ ಧ್ವನಿಸುವಂತಹ ಪ್ರಚೋದನ ಗುಣವನ್ನು ಪಡೆದಿದೆ. ಪ್ರತಿಮೆಯು ಯಥಾಸ್ಥಿತಿಯ ವರದಿಯಾಗಿದೆ. ಕವಿಯ ದೃಷ್ಟಿಕೋನಕ್ಕನುಸಾರವಾಗಿ ನಿರೂಪಿತವಾಗುವ ಒಂದು ಕಾವ್ಯಚಿತ್ರವಾಗಿರುತ್ತದೆ. ಇಲ್ಲಿ ಕವಿಯ ಅಂತರಂಗದ ಜಾಗೃತ ಭಾವ ಕೆಲಸ ಮಾಡುತ್ತದೆ. "ಕವಿಯ ಅನುಭವ, ಭಾವ ಭಾವನೆಗಳು ಪ್ರತಿಮೆಗಳ ಮೂಲಕವೇ ಅಥವಾ ಪ್ರತಿಮಾ ರೂಪದಲ್ಲಿಯೇ ಅಭಿವ್ಯಕ್ತವಾಗುತ್ತವೆ. ಕವಿಯ ಈ ಪ್ರತಿಮಾ ವಿಧಾನ ಶಬ್ದಚಿತ್ರಗಳನ್ನು ನಿರ್ಮಾಣಮಾಡುವ ಹಂತದಿಂದ ಮೊದಲುಗೊಂಡು ಇಡೀ ಅಭಿವ್ಯಕ್ತಿಯ ಯಾವೊಂದು ಅಂಗೋಪಾಂಗಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬಹುದು. ಪದಗಳ ಮೂಲಕ ಉಪಮೆ, ರೂಪಕಾದಿ ಅಲಂಕಾರಗಳ ಮೂಲಕ, ಕೃತಿಯ ಯಾವುದೇ ಪ್ರಸಂಗ ಅಥವಾ ಪ್ರಸಂಗಗಳ ಮೂಲಕ, ಅಭಿವ್ಯಕ್ತವಾಗುತ್ತಾ ತಾನು ನಿರ್ಮಿಸುವ ಪ್ರತಿಮೆಗಳನ್ನು ಭಾವದೀಪ್ತವೂ ಧ್ವನಿಪ್ರಚುರವೂ ಆಗಿ ಮಾಡುವ ಒಂದು ಕಾವ್ಯತತ್ವ ಅದು".[೧೨] ಇಂದು ಪ್ರತಿಮಾ ವಿಧಾನವು ಹೆಚ್ಚು ಬಳಕೆಯಲ್ಲಿದೆ. ಇದು

ಕಾವ್ಯದುದ್ದಕ್ಕೂ ಅನುರಣಿಸುವ ಗುಣವನ್ನು ಹೊಂದಿದೆ. 'ಕೂಸುಗಳಿಗೆ ಹಾಲು ಇಲ್ಲ ಪಶುಬಲಿಯೇ ನಡೆದಿದೆ, ಕಾಳು ಇದೆ ಕೂಳು ಇಲ್ಲ ಹಣದ ಹುಚ್ಚು ಹಿಡಿದಿದೆ' ಬೇಂದ್ರೆಯವರ ಈ ಪದ್ಯದಲ್ಲಿನ ಈ ಪ್ರತಿಮೆ ನಮ್ಮ ಸಮಾಜದ ಜನರ ಸ್ವಾರ್ಥದ ಮೇಲೆ ಈ ಪ್ರತಿಮೆ ಬೆಳಕು ಚೆಲ್ಲುತ್ತದೆ. "ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು" ಎಂಬ ವಚನದಲ್ಲಿ ಕುರಿಯ ಅಜ್ಞಾನದ ಮೂಲಕ ಜೀವಾತ್ಮನು ಅಜ್ಞಾನ ಧ್ವನಿಸುವುದರೊಂದಿಗೆ 'ಕೊಂದವರುಳಿದರೆ' ಇದು ಬದುಕಿನಾಚೆ ಏನಿದೆ ಎಂಬುದನ್ನು ಹುಟ್ಟು ಹಾಕುತ್ತದೆ. ಇದೇ ರೀತಿಯ ಪ್ರತಿಮೆಗೆ ಪೂರಕವಾಗಿ ಇನ್ನೊಂದು ಬಗೆಯ ತ್ರಿಪದಿಯನ್ನು ಗಮನಿಸಬಹುದು.

ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ
ಜಾಲಿಯ ಮರವು ನೆರಳಲ್ಲ।ಹೆಣ್ಣಿಗೆ
ತಾಯಿಯ ಮನೆಯು ಸ್ಥಿರವಲ್ಲ.

ತಾಯಿ ಮತ್ತು ತವರು ಸ್ವರ್ಗಕ್ಕಿಂತಲೂ ಮಿಗಿಲಾದುದು ಎಂಬುದು ಭಾರತೀಯರ ನಿಲುವು. ಆದರೂ ಹೆಣ್ಣಾದವಳು ಮದುವೆಯಾದ ಬಳಿಕ ಗಂಡನ ಮನೆಯನ್ನು ಬೆಳಗುತ್ತಾಳೆ. ಆಲದ ಮರಕ್ಕೆ ಹೂವಿಲ್ಲ ಹಾಗೆಯೇ ಭಾರತೀಯರ ಸಾಲಕ್ಕೆ ಕೊನೆಯಿಲ್ಲ. ಜಾಲಿಯ ಮರವು ನೆರಳನ್ನು ನೀಡಲಾರದು. ಹಾಗೆಯೇ ಹೆಣ್ಣಾದವಳಿಗೆ ಮದುವೆಯಾದ ಬಳಿಕ ತಾಯಿಯ ಮನೆಯಲ್ಲಿ ಎಷ್ಟೇ ಸಂಪತ್ತಿದ್ದರೂ, ಎಷ್ಟೇ ಒದಗಿಸಿಕೊಟ್ಟರೂ ಅದನ್ನೇ ಶಾಶ್ವತವಾಗಿ ಬಯಸುವುದು ಸಾಧುವಲ್ಲ. "ಗಂಜಿಯ ಕುಡಿದರೂ ಗಂಡನ ಮನೆ ಲೇಸ" ಎಂಬ ಆಶಯ ಆಕೆಯದು. ಇಲ್ಲಿ ಕವಿಯ ಪ್ರತಿಭಾಶಕ್ತಿ ಹೆಣ್ಣಾದವಳ ತವರು ಮನೆ ಮತ್ತು ಗಂಡನ ಮನೆಯ ಸಂಬಂಧಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಸಾಮಾಜಿಕ ಜೀವನದ ರೀತಿ ನೀತಿಗಳನ್ನು ಅರ್ಥಪೂರ್ಣವಾಗಿ ಈ ಪ್ರತಿಮೆ ಧ್ವನಿಸುತ್ತದೆ. ಇಂತಹ ಪ್ರತಿಮೆಗಳು ನಿರಲಂಕಾರ ಸೌಂದರ್ಯವನ್ನು ಹೊಂದಿರುತ್ತದೆ. ಈ ದೃಷ್ಟಿಯಲ್ಲಿ ನೋಡಿದರೆ ಪ್ರತಿಮೆಗಳಲ್ಲಿ ಕವಿಯು ತನಗರಿವಿಲ್ಲದಂತೆಯೇ ಸಹಜ ಭಾವನೆಗಳನ್ನು ಹೊರಸೂಸಿದ್ದಾನೆ.

೨.೩ ಪಾಶ್ಚಾತ್ಯರ ದೃಷ್ಟಿಯಲ್ಲಿ ಪ್ರತಿಮಾ ನಿರ್ಮಿತಿ

೧೯-೨೦ ನೇ ಶತಮಾನದಲ್ಲಿ ಪಾಶ್ಚಾತ್ಯ ವಿಮರ್ಶಕರು ಇಮೇಜ್ (ಪ್ರತಿಮೆ) ಪದವನ್ನು ಮೊಟ್ಟಮೊದಲಿಗೆ ಬಳಸಿದರು. ಆಗ ಅದನ್ನು ಉಪಮೆ, ರೂಪಕಗಳಂತೆ

ಒಂದು ಅಲಂಕಾರವೆಂದು ತಿಳಿಯಲಾಗಿತ್ತು. ಅಭಿವ್ಯಕ್ತಿ ವಿಧಾನದಲ್ಲಿ ಹೊಸ ಅಗತ್ಯತೆ ಕಂಡುಬಂದಾಗ ಸಂಕೇತ, ಪ್ರತೀಕ ಪ್ರತಿಮೆಗಳು ತೀವ್ರ ಅಭಿವ್ಯಕ್ತಿಯ ಮಾಧ್ಯಮಗಳಾದವು; ಅದೇ ಕೃತಿಯ ನೆಲೆಗಟ್ಟು ಆಯಿತು. ೧೭ನೇ ಶತಮಾನದ ಆಂಗ್ಲ ಸಾಹಿತ್ಯದಲ್ಲಿ ಸಾಂಕೇತಿಕತೆ ಒಂದು ಚಳುವಳಿಯ ರೂಪ ತಾಳಿತು. ಅಂದಿನ ಯುವಜನಾಂಗ ಬಯಸಿದ ಬದಲಾವಣೆಗಳಿಂದ ಸಾಂಕೇತಿಕತೆ, ಪ್ರತಿಮಾ ವಿಧಾನ ಹೆಚ್ಚು ಬಳಕೆಗೆ ಬಂತು. ಕಾವ್ಯದಲ್ಲಿ ವಸ್ತುವನ್ನು ಚಿತ್ರಿಸುವುದು ಇದ್ದಕ್ಕಿದ್ದ ಹಾಗಲ್ಲ, ಪದಗಳ ಮೂಲಕ ವಿವರಿಸುವುದು ಅಲ್ಲ. ಕಾವ್ಯದಲ್ಲಿ ಸೂಚ್ಯವಾಗಿ ಮಿತ್ರ ಸಂಹಿತೆಯಂತೆ ಆತ್ಮೀಯವಾಗಿ ಅಪೂರ್ವ ಗುಣಗಳು ಅನುಭವವನ್ನು ಹೇಳಬೇಕು ಎಂಬ ಅಭಿಪ್ರಾಯ ಪಾಶ್ಚಾತ್ಯ ವಿದ್ವಾಂಸರದು.

ಫ್ರೆಂಚ್ ಕಾವ್ಯದಲ್ಲಿ ಸಾಂಕೇತಿಕತೆಯಲ್ಲಿ ಸೌಂದರ್ಯ ತತ್ವವನ್ನು ಮೂಡಿಸಿ ಹೊಸ ಛಂದೋವೃತ್ತವನ್ನು ಕವಿ ಮಲ್ಲಾರ್ಮೆಯು ನಿರೂಪಿಸಿದನು. ೧೯೧೨ ರಲ್ಲಿ ಎಜ್ರಾಪೌಂಡ್ ಮತ್ತು ಸಂಗಡಿಗರು ಕಾವ್ಯದಲ್ಲಿ ಪ್ರತಿಮಾ ನಿರ್ಮಿತಿಯನ್ನು ಸೂತ್ರೀಕರಿಸಿದರು. ಇವನು ಪ್ರತಿಮಾವಾದಿಗಳು ಎಂಬ ಒಂದು ಚಿಂತನಶೀಲರ ಗುಂಪನ್ನು ಪ್ರೇರೇಪಿಸಿದನು. ಉಪಮೆ ಮತ್ತು ರೂಪಕಗಳಂತೆಯೇ ಪ್ರತಿಮೆಯನ್ನು ಸಹ ಒಂದು ಅಲಂಕಾರವೆಂದು ಗುರುತಿಸಲಾಗಿದ್ದರೂ ಅನಂತರದಲ್ಲಿ ಈ ಪದವು ವ್ಯಾಪಕವಾದ ಅರ್ಥವನ್ನು ಪಡೆಯಿತು.

“ಇಮೇಜ್ ಅಥವಾ ಪ್ರತಿಮೆ ಎನ್ನುವುದು ಕಾವ್ಯಾಭಿವ್ಯಕ್ತಿಯ ಮೂಲತತ್ವ, ಕಾವ್ಯಾಭಿವ್ಯಕ್ತಿಯ ಒಂದು ವಿಶಿಷ್ಟ ವಿಧಾನ. ಕವಿ ಇಮೇಜ್‌ಗಳ ಮೂಲಕ ತನ್ನನ್ನು ತಾನು ಅಭಿವ್ಯಕ್ತಪಡಿಸಿಕೊಳ್ಳುತ್ತಾನೆ. ಅನೇಕ ಇಮೇಜ್‌ಗಳು ಸೇರಿ ಒಂದು ಕವಿತೆಯಾಗುತ್ತದೆ. ಒಂದು ಇಡೀ ಕಾವ್ಯವೇ ಇಮೇಜ್ ಆಗಬಹುದು ಇತ್ಯಾದಿ ಮಾತುಗಳೆಲ್ಲ ಹೊಸವು”.[೧೩] ಎಂದು ಡಾ. ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ.

ಪ್ರತಿಮೆ, ರೂಪಕಗಳು ಕವಿಯ ಮನಸ್ಸಿನ ಅಪ್ರಜ್ಞಾ ವಲಯದಿಂದ ಮೂಡಿ ಬಂದಿವೆಯೇ ಹೊರತು ಪ್ರಜ್ಞಾ ಪೂರ್ವಕ ರಚನೆಯಲ್ಲ ಎಂಬ ಸಿದ್ಧಾಂತ ಮೂಡಿ ಬಂತು. ಸಂಕೇತಗಳ ಬಳಕೆ ಮನುಷ್ಯರ ಮೊತ್ತಮೊದಲ ಬುದ್ಧಿಪೂರ್ವಕ ಕ್ರಿಯೆಯಾಗಿದ್ದು ಯಾವುದೇ ಭಾಷೆಯಲ್ಲಿನ ಪದಗಳೂ ಸಹ ಸಂಕೇತಗಳೇ ಆಗಿವೆ. ಒಂದು ಪದ ಮತ್ತು ಅದರ ಅರ್ಥಕ್ಕೆ ಯಾವುದೇ ನೇರವಾದ ಸಂಬಂಧವಿಲ್ಲ. ಉದಾಹರಣೆಗೆ ಮರ ಎನ್ನುವ ಪದಕ್ಕೂ ಮರಕ್ಕೂ ಯಾವುದೇ ಸಂಬಂಧವಿಲ್ಲ. ಇದನ್ನೇ ಭಾಷೆಯ ದ್ವಿವಿಧತೆ ಎನ್ನುತ್ತಾರೆ. ಕಾವ್ಯದಲ್ಲಿ ಭಾಷೆ ಪ್ರತೀಕಾತ್ಮಕವಾಗಿದ್ದು

ಬಳಸುವ ಶಬ್ದಗಳ ಅರ್ಥ ಹಿಗ್ಗುತ್ತದೆ. ಆದರೆ ಕಾಲಾಂತರದಲ್ಲಿ ಪ್ರತೀಕಗಳ ಅರ್ಥಸಂಕೋಚ, ಅರ್ಥವಿಕಾಸ, ಅರ್ಥ ವ್ಯತ್ಯಾಸ ಆಗಬಹುದು. ಆದರೆ ಪ್ರತಿಮೆಯು ಖಚಿತವಾದ ವಿಶೇಷಾಭಿವ್ಯಕ್ತಿಯಾಗಿದೆ. "ಲೆವಿಸ್ ಹೇಳುವಂತೆ ಕಾವ್ಯ ಪ್ರತಿಮೆಯೆಂದರೆ ಶಬ್ದಚಿತ್ರ ಎನ್ನುವುದು ಅತಿ ಸರಳ ನಿರೂಪಣೆ. ಉಪಮೆ, ರೂಪಕಗಳಿಗೂ ಪ್ರತಿಮೆಗೂ ಇರುವ ವ್ಯತ್ಯಾಸವನ್ನು ಗಮನಿಸುತ್ತಾ ಹೋದಂತೆ ಪ್ರತಿಮೆಯ ಸಂದರ್ಭದಲ್ಲಿ ಮೂಡುವ ಚಿತ್ರ ಕೇವಲ ಶಬ್ದಚಿತ್ರವಾಗಿರದೆ ಅದು ಮೂಡಿಬರುವ ಇಡೀ ಸಂದರ್ಭವನ್ನು ಭಾವದೀಪ್ತಗೊಳಿಸುವ ಹಾಗೂ ಆ ಸಂದರ್ಭದ ತೀವ್ರತೆಯನ್ನು ರೂಪಕಾತ್ಮಕವಾಗಿ ಕಟ್ಟಿಕೊಡುವಂತಹದ್ದು ಎಂದು ವಿವರಣೆಗಳು ಮೂಡುತ್ತವೆ".[೧೪] ಎಜ್ರಾಪೌಂಡ್ ಹೇಳುವಂತೆ "ಸಂದರ್ಭವೊಂದರ ಬೌದ್ಧಿಕ ಹಾಗೂ ಭಾವೈಕ ಚಿತ್ರವೊಂದನ್ನು ಕಟ್ಟಿಕೊಟ್ಟು, ಬದುಕಿನ ಕ್ಷಣವೊಂದರ ಭಾವ ಸಂಕೀರ್ಣತೆಯನ್ನು ಅನುಭವಕ್ಕೆ ತಂದುಕೊಡುವುದು ಪ್ರತಿಮೆ ಮಾಡುವ ಕೆಲಸ".[೧೫] ಒಟ್ಟಿನಲ್ಲಿ ಪ್ರತಿಮೆಯು ಉಪಮೆ, ರೂಪಕಗಳಿಗಿಂತ ವಿಶಿಷ್ಟವಾಗಿ ಬೇರೆಯೇ ಆಗಿರುವಂತೆ ತೋರಿ ಬಂದರೂ ಅವುಗಳ ಎಲ್ಲಾ ಅಂಶಗಳನ್ನು ಒಳಗೊಂಡಿದೆ. ಕಾವ್ಯದಲ್ಲಿ ಪ್ರತಿಮಾ ನಿರ್ಮಿತಿಯ ಬಗ್ಗೆ ಅನೇಕ ಚರ್ಚೆಗಳಾಗಿದ್ದರೂ ಅದು ಕವಿಗೆ ಅನುಭವವೇದ್ಯವೇ ಹೊರತು ಅದರ ನಿರ್ದಿಷ್ಟ ಲಕ್ಷಣಗಳನ್ನು ವ್ಯಾಖ್ಯಾನಿಸುವುದು ಕಷ್ಟ. ಆದರೆ ಅದರ ಸ್ವರೂಪ ಲಕ್ಷಣಗಳ ಬಗ್ಗೆ ಸಾಕಷ್ಟು ಅಭಿಪ್ರಾಯಗಳು ಮೂಡಿಬಂದಿವೆ. "ಪ್ರತಿಮೆ ಅಪೂರ್ವವಾದ ಇಂದ್ರಿಯ ಸಂಬಂಧ ಹೊಂದಿದ ಒಂದು ಮಾನಸಿಕ ಘಟನೆ" ಎಂದು ಐ.ಎ. ರಿಚರ್ಡ್ ಹೇಳಿದ್ದಾನೆ. ಅಂದರೆ ಕವಿ ಕಂಡ ಅಥವಾ ಕೇಳಿದ ಅಥವಾ ಅನುಭವಿಸಿದ ಘಟನೆಯೊಂದು ಮನಸ್ಸಿನಲ್ಲಿ ಉಂಟುಮಾಡಿದ ಅಪೂರ್ವ ಪರಿಣಾಮ ಚಿತ್ರಣ ಪ್ರತಿಮೆಯಾಗಿ ಮೂಡಿಬರುತ್ತದೆ. ಕೋಲರಿಜ್ ಪ್ರಕಾರ "ಪ್ರತಿಮೆ ಕವಿಯ ಪ್ರಜ್ಞೆಯ ತಳಾತಳದಿಂದ ಬಂದುದೇ ಹೊರತು ಬುದ್ಧಿಪೂರ್ವಕವಾಗಿ ನಡೆದುದಲ್ಲ" ಅಂದರೆ ಇದು ಅಪ್ರಜ್ಞಾಪೂರ್ವಕವಾಗಿ ಮೂಡಿಬಂದದ್ದು ಕವಿಯ ಸುಪ್ತಪ್ರಜ್ಞೆ ಜಾಗೃತವಾಗಿ ಹಳೆಯ ಘಟನೆಗಳು ಕಾವ್ಯಸಂದರ್ಭದಲ್ಲಿ ಆವಿರ್ಭವಿಸಿತು ಎನ್ನಬಹುದು. ಇದು ಕಾವ್ಯಕ್ಕೆ ಬೇಕೆಂದು ಹೊರಗಿನಿಂದ ತಂದದ್ದಲ್ಲ ಸಂದರ್ಭದಲ್ಲಿ ಸಹಜವಾಗಿ ಮೂಡಿಬಂದದ್ದು;

"ಕಾವ್ಯ ರಚಿಸುವಾಗ ಕವಿಗೆ ಒಂದು ಕಡೆ ಎದ್ದು ಬರುವ ಪ್ರತಿಮೆಗಳ ಪ್ರವಾಹದ ಪ್ರಜ್ಞೆ ಹಾಗೂ ಇನ್ನೊಂದು ಕಡೆ ಹೀಗೆ ಬರುವ ಪ್ರತಿಮೆಗಳನ್ನು ಒಂದು ತಂತ್ರದಲ್ಲಿ

ಜೋಡಿಸುವ ಪ್ರಜ್ಞೆ ಎರಡೂ ಇರಬೇಕಾಗುತ್ತದೆ ಅಲ್ಲದೆ ವಿವಿಧ ಕೋನಗಳಲ್ಲಿರಿಸಿದ ಕನ್ನಡಿಗಳ ಸಾಲಿನಂತೆ ಪ್ರತಿಮೆಗೆ ಅನೇಕಾರ್ಥ ಸ್ಪಂದನ ಸಾಮರ್ಥ್ಯವಿರಬೇಕು. ಜೊತೆಗೆ ಸಂಕ್ಷಿಪ್ತತೆ ಕೂಡ ಇದರ ಒಂದು ವಿಶಿಷ್ಟ ಲಕ್ಷಣ. ನೇರವಾಗಿ ಅನೇಕ ಶಬ್ದಗಳಲ್ಲಿ ಹೇಳಲಾಗದಂತಹ ವಿಷಯವನ್ನು ಸಂಕ್ಷಿಪ್ತವಾದ ಒಂದು ಉಪಮೆ ರೂಪಕಗಳ ಮೂಲಕ ಪ್ರತೀಕಾತ್ಮಕಗೊಳಿಸಬಹುದು. ಉಪಮೆ ಅಥವಾ ರೂಪಕಕ್ಕಿಂತ ಪ್ರತಿಮೆ ಹಲವು ಸಂಗತಿಗಳನ್ನು ಅಭಿವ್ಯಕ್ತಗೊಳಿಸುತ್ತದೆ. ಸಾಂದ್ರವಾದ ಭಾವನೆಗಳ ಅಭಿವ್ಯಕ್ತಿಗಾಗಿ ಕವಿಗೆ ಪ್ರತಿಮಾ ವಿಧಾನ ಅಥವಾ ರೂಪಕತೆ ಅಗತ್ಯವಾಗುತ್ತದೆ".[೧೬]

"ರೂಪಕವು ಕವಿಯ ಬುದ್ಧಿಶಕ್ತಿಯ ಮಾಪಕ" ಎಂಬುದಾಗಿ ಅರಿಸ್ಟಾಟಲ್ ಹೇಳಿದ್ದಾನೆ. ಅನುಭವಗಳ ಘನೀಭವಿಸುವಿಕೆ ಅಥವಾ ಹರಳಾಗುವಿಕೆಯ ಪ್ರವೃತ್ತಿ ರೂಪಕಗಳಲ್ಲಿ ನಿರ್ದಿಷ್ಟವಾಗಿ ಕಾಣುತ್ತದೆ.

ಘನೀಭವಿಸಿದ ಅನುಭವಗಳ ಅಭಿವ್ಯಕ್ತಿಯಾಗಿ ರೂಪಕ ನಿರ್ಮಾಣವಾಗುತ್ತದೆ. ಘನೀಭವಿಸುವಿಕೆಯ ಈ ಪ್ರವೃತ್ತಿಯು ಕವಿಯ ಜೀವನಾನುಭವಗಳು ಬದುಕಿನ ಬಗ್ಗೆ ಕವಿಯು ತೋರ್ಪಡಿಸುವ ಎಲ್ಲಾ ಸೂಕ್ಷ್ಮ ಸಂವೇದನೆಗಳನ್ನು ಒಳಗೊಂಡಿರುತ್ತವೆ. ಉಪಮೆ ಹೆಚ್ಚು ವಿವರಣಾತ್ಮಕವಾದರೆ, ರೂಪಕವು ಹೆಚ್ಚು ಸಾಂದ್ರವಾಗಿರುತ್ತದೆ. ಹೀಗಾಗಿ ಉಪಮೆಗಿಂತ ರೂಪಕವೇ ಹೆಚ್ಚು ಉತ್ತಮ ಅಭಿವ್ಯಕ್ತಿ ವಿಧಾನ ಎಂಬ ಧೋರಣೆ ಬೆಳೆದು ಬಂತು.

ಭಾರತೀಯ ಕಾವ್ಯಮೀಮಾಂಸೆಯಲ್ಲಿ ಉಪಮೆಯ ಮುಂದುವರಿದ ರೂಪವೇ ರೂಪಕ. ಇಲ್ಲಿ ಉಪಮೆಗಿಂತ ಹೆಚ್ಚಿನ ನಿಕಟತೆ ಇದೆ ಎಂಬ ಅಭಿಪ್ರಾಯಗಳಿದ್ದರೆ, ಪಾಶ್ಚಾತ್ಯರಲ್ಲಿ ರೂಪಕದ ಗುರಿ ಸಾಮ್ಯತೆಗಿಂತ ಏಕತೆಯನ್ನು ಸಾಧಿಸುವುದು. 'ರೂಪಕದ ಕಲೆಗಾರಿಕೆ ಎಂದರೆ ಎರಡು ವಸ್ತುಗಳ ನಡುವಣ ಸಾಮ್ಯವನ್ನು ಕನಿಷ್ಠ ಮಿತಿಗೆ ಇಳಿಸುವುದು' ಎಂಬ ಅಭಿಪ್ರಾಯಗಳಿವೆ. ಮಿಡಲ್‌ಟನ್ ಮರ್ರಿ ಪ್ರಕಾರ "ಲೇಖಕನ ವಿಶಿಷ್ಟ ಕಾಣ್ಕೆಯನ್ನು ಕಟ್ಟಿಕೊಡುವ ಅನನ್ಯ ಅಭಿವ್ಯಕ್ತಿ ರೂಪಕ". "ಉಪಮೆಯಲ್ಲಿ ಕಾಣಬಾರದ ಸಂಗ್ರಹಗುಣ, ಪರಿಣಾಮ ತೀವ್ರತೆ, ಇವುಗಳೇ ರೂಪಕವನ್ನು ಅಭಿವ್ಯಕ್ತಿಯ ಅತ್ಯುತ್ತಮ ಪ್ರಕಾರ ಎನಿಸಿವೆ. ರೂಪಕದ ವಿಶಿಷ್ಟ ಲಕ್ಷಣವೇ ಸಂಗ್ರಾಹಕತ್ವ, ನಿಜವಾದ ಬರವಣಿಗೆ ಎಂದರೆ ಅತ್ಯಂತ ಅಡಕವಾದ ಭಾವನೆಗಳನ್ನು ಅಭಿವ್ಯಕ್ತಪಡಿಸಬಲ್ಲ ಉಕ್ತಿಯ ಅನ್ವೇಷಣೆ. ಈ ಅನ್ವೇಷಣೆಯ ಪರಿಣಾಮವಾಗಿ ಭಾಷೆ ಹರಳುಗೊಳ್ಳುತ್ತದೆ. ಭಾಷೆಯನ್ನು ಹರಳುಗೊಳ್ಳಿಸುವುದೇ ರೂಪಕ ನಿರ್ಮಾಣದ ವಿಧಾನವಾಗಿದೆ".[೧೭]

"ಕಾವ್ಯ ಕ್ರಿಯೆಯಲ್ಲಿ ಅತ್ಯಂತ ಪ್ರಮುಖವಾದುದೆಂದರೆ ರೂಪಕ ಪ್ರಯೋಗ ಸಾಮರ್ಥ್ಯ" ಎಂಬುದು ಅರಿಸ್ಟಾಟಲ್‌ನ ನಿಲುವು. ಕಾವ್ಯದಲ್ಲಿ ಬೇರೆ ಎಲ್ಲಾ ಅಂಶಗಳು ಬದಲಾದರೂ ರೂಪಕವು ಕಾವ್ಯದ ಜೀವಾಳವಾಗಿದ್ದು ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಭಾರತೀಯರು ರೂಪಕವನ್ನು ಒಂದು ಅಲಂಕಾರವೆಂದು ಗುರುತಿಸಿದರೆ ಪಾಶ್ಚಾತ್ಯರು ಅದು ಕಾವ್ಯದ ಸತ್ವ ಎಂಬಂಶವನ್ನು ಹೇಳಿದ್ದಾರೆ. ಮೊದಲಿಗೆ ರೂಪಕವೇ ಅತ್ಯುತ್ತಮ ವಿಧಾನ ವೆಂದಿದ್ದರೂ ಪ್ರತಿಮೆ ನಂತರ ಆ ಸ್ಥಾನವನ್ನು ಪಡೆಯಿತು. ಧ್ವನಿಶಕ್ತಿಯನ್ನು ಪಡೆದ ರೂಪಕ ಪ್ರತಿಮೆಯಾಗುವಂತೆ ಒಂದು ಪದ, ಒಂದು ಉಪಮೆ ಕೂಡ ಧ್ವನಿ ಶಕ್ತಿ ಪಡೆದಾಗ ಪ್ರತಿಮೆಯಾಗುತ್ತದೆ.

"ವಸ್ತು ಸತ್ಯವೊಂದರ ಯಥಾವತ್ತಾದ ಪ್ರತಿಫಲನಕ್ಕಿಂತ ಬೇರೆಯಾದ ಏನೋ ಒಂದನ್ನು ನಮ್ಮ ಕಲ್ಪನೆಗೆ ಮುಟ್ಟಿಸುವ ಒಂದು ವಾಕ್ಯ ಅಥವಾ ವಾಕ್ಯ ಸಮುದಾಯವು ಪ್ರತಿಮೆಯೊಂದನ್ನು ಮೂಡಿಸಬಹುದು".[೯] ಇದು ಪ್ರತಿಮೆಯ ಅರ್ಥ ವ್ಯಾಪ್ತಿಯನ್ನು ಸೂಚಿಸುತ್ತದೆ. ಪ್ರತಿಮೆಯು ಕಾವ್ಯದಲ್ಲಿ ಒಂದು ಪದ, ಒಂದು ವಾಕ್ಯ, ಶಬ್ದಚಿತ್ರ, ಅಲಂಕಾರ ಅಥವಾ ಯಾವುದೇ ಕಾವ್ಯ ಭಾಗ ಅಥವಾ ಇಡೀ ಕಾವ್ಯದ ಮೂಲಕವು ಧ್ವನಿತವಾಗಬಹುದು. ಒಟ್ಟಿನಲ್ಲಿ ಕಾವ್ಯದಲ್ಲಿ ಅರ್ಥಪುಷ್ಟಿಯಿರಬೇಕು. ಅದನ್ನು ಈಡೇರಿಸುವಲ್ಲಿ ಪ್ರತಿಮೆ ಒಂದು ಸಾಧನವಾಗಬೇಕು.

ಟಿಪ್ಪಣಿಗಳು

೧ ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ, ೨೧

೨. ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ, ೨೧

೩. ಡಾ. ಜಿ. ಎಸ್. ಶಿವರುದ್ರಪ್ಪ : (ವಚನಗಳಲ್ಲಿ ಪ್ರತಿಮೆಗಳು, ಮುನ್ನುಡಿ)

೪. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ, ೮೯

೫. ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾನಿರ್ಮಿತಿ, ಪುಟ, ೨೮

೬. ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ , ಪುಟ, ೩೨

೭. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ, ೭೦

8. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ. ೭೯

೯. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ, ೮೧

೧೦. ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ, ೩೭

೧೧. ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ. ಪುಟ, ೩೭

೧೨. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ, ೮೮

೧೩. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ, ೮೨

೧೪. ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ, ೪೨

೧೫. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ, ೮೭

೧೫. ಡಾ. ಉಷಾಕಿರಣ್ : ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ, ೪೩

೧೬. ಡಾ. ಜಿ. ಎಸ್. ಶಿವರುದ್ರಪ್ಪ : ಅನುರಣನ, ಪುಟ, ೮೦

೧೭. ಡಾ. ಜಿ. ಎಸ್. ಶಿವರುದ್ರಪ್ಪ : ಕಾವ್ಯಾರ್ಥ ಚಿಂತನ, ಪುಟ, ೮೭

ಅಧ್ಯಾಯ ೩

ಪ್ರತಿಮೆಗಳ ಸ್ವರೂಪ, ಲಕ್ಷಣಗಳು ಮತ್ತು ಮಾದರಿ

ಅಧ್ಯಾಯ ೩
ಪ್ರತಿಮೆಗಳ ಸ್ವರೂಪ, ಲಕ್ಷಣಗಳು ಮತ್ತು ಮಾದರಿ

೩.೦

ಮಾನವ ಬೇರೆ ಬೇರೆ ಕ್ಷೇತ್ರಗಳಲ್ಲಿ ಹೊಸತರ ಶೋಧನೆಯನ್ನು ನಿರಂತರವಾಗಿ ಮಾಡುತ್ತಿದ್ದಾನೆ. ಅದೇ ರೀತಿ ಕಾವ್ಯಕ್ಕೆ ಪ್ರತಿಮಾನಿರ್ಮಿತಿ ಹೊಸತನ ತಂದಿದೆ. ಪ್ರತಿಮೆಯ ವಸ್ತು, ಭಾಷೆ, ವಿಚಾರ ಎಲ್ಲವೂ ಹಿಂದಿನ ಸಾಹಿತ್ಯಕ್ಕಿಂತ ಬೇರೆಯಾಗಿದೆ. ಕವಿಯ ಅನನ್ಯತೆ, ಪ್ರೌಢಿಮೆ ವ್ಯಕ್ತವಾಗುವಲ್ಲಿ ಪ್ರತಿಮಾ ವಿಧಾನ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕವಿಯ ಪ್ರತಿಭಾ ಶಕ್ತಿಯಲ್ಲಿ ನಿರಂತರವಾಗಿ ಅಡಗಿರುವ ಜೀವಸೆಲೆಯ ಸ್ಫೂರ್ತಿಯ ಜೀವಂತವಾದ ವಸ್ತು ವಿಷಯಗಳು ಮತ್ತು ಅವುಗಳ ಭಾವನಾತ್ಮಕ ಪ್ರತೀಕತೆಯನ್ನು ಹುಡುಕುತ್ತಲೇ ಇರುತ್ತದೆ. ಇಂದ್ರಿಯಾತೀತ ಜಗತ್ತಿನ ಅಲೌಕಿಕ ವಸ್ತುಗಳನ್ನು ಅರಸುವ ಮನಸ್ಸುಗಳಿಗೆ ಹೊಸ ಅನುಭಾವದ ಅನುಭವವಾಗುತ್ತದೆ. ಈ ಅನುಭವಗಳಿಗೆ ಉಪಮೆ, ರೂಪಕ, ಪ್ರತಿಮೆಗಳ ಮೂಲಕ ಕವಿ ತನ್ನ ಕವಿತಾ ಶಕ್ತಿಯಿಂದ ಆಕಾರವನ್ನು ಕೊಡುತ್ತಾನೆ. ಕವಿಯ ಅಂತಃಪ್ರಜ್ಞೆ, ಸ್ಮೃತಿ, ಬುದ್ಧಿಶಕ್ತಿ, ಭಾವಮಯತೆ, ಎಲ್ಲವೂ ಪರಿಪಾಕಗೊಂಡು, ಪರಿಪಕ್ವಗೊಂಡು ಪ್ರತಿಮಾನಿರ್ಮಿತಿಯಾಗುತ್ತದೆ.

೩.೧ ಪ್ರತಿಮಾ ಸ್ವರೂಪ

ಕಾವ್ಯದಲ್ಲಿ ಭಾಷೆಯ ಶೈಲಿಯಂತೆ, ಪ್ರತೀಕವೂ ಬದಲಾಗಬಹುದು. ಆದರೆ ರೂಪಕ, ಪ್ರತಿಮೆಗಳಲ್ಲಿ ಅರ್ಥವ್ಯತ್ಯಾಸವಾಗಲಾರದು; ಬದಲಾಗಿ ಅವುಗಳ ಅರ್ಥ ವಿಸ್ತಾರವಾಗುತ್ತದೆ. ಕಾವ್ಯದಲ್ಲಿ ಪ್ರತಿಮಾನಿರ್ಮಿತಿ ತಾನಾಗಿ ಮೂಡಿಬರುತ್ತದೆ. ರೂಪಕ ಅಥವಾ ಪ್ರತಿಮೆ ಕಾವ್ಯದ ಜೀವಂತ ಅಂಶವಾಗಿ, ಕವಿಯ ಮುಖ್ಯ ಗುಣವಾಗಿ ಕಾವ್ಯದ ಯಶಸ್ಸಾಗಿ ಉಳಿದುಕೊಳ್ಳುತ್ತದೆ.

ಇಲ್ಲಿ ಅಪೂರ್ವ ರಸಸಂಚಾರವಾಗಿ ಹೊಸತನ ಸೃಷ್ಟಿಯಾಗುತ್ತದೆ. ಕವಿ ಕಾವ್ಯವನ್ನು ರಸಾನುಭವದೊಂದಿಗೆ ಅಭಿವ್ಯಕ್ತಿಸಿ . ಅಲೌಕಿಕತೆಯೆಡೆಗೆ ಕೊಂಡೊಯ್ಯುತ್ತಾನೆ. ಹೊಸತನ, ಸಾಂದ್ರತೆ, ಧ್ವನಿಶಕ್ತಿ ಪ್ರತಿಮಾನಿರ್ಮಿತಿಯಲ್ಲಿ ಮುಖ್ಯಅಂಶವಾಗುತ್ತದೆ. "ಕಿರಿದರೊಳ್ ಪಿರಿದರ್ಥ" ಎಂಬಂತೆ ಶಬ್ದಗಳು ಕೆಲವೇ ಆಗಿದ್ದರೂ ಅದು ವಿಶಾಲವಾದ ಅರ್ಥವನ್ನು ಕಟ್ಟಿಕೊಡುತ್ತದೆ. ಆ ಮೂಲಕ

ಸಹೃದಯಿಯನ್ನು ಹೆಚ್ಚು ಚಿಂತನೆಗೀಡುಮಾಡುತ್ತದೆ. "ಪ್ರತಿಮೆ ಎಂದರೆ ಸರಳವಾದ ಅರ್ಥದಲ್ಲಿ ಒಂದು ಶಬ್ದಚಿತ್ರ ಎನ್ನುವುದರಿಂದ ಒಂದು ವಿಶೇಷ, ಒಂದು ರೂಪಕ, ಒಂದು ಉಪಮೆಯೂ ಕೂಡ ಧ್ವನಿಶಕ್ತಿ ಪಡೆದಾಗ ಪ್ರತಿಮೆಯಾಗಬಹುದು ಅಥವಾ ಒಂದು ನುಡಿಗಟ್ಟು ಅಥವಾ ಒಂದು ಸಾಧಾರಣ ವಾಕ್ಯ ಕೂಡ ಪೂರ್ಣ ಪ್ರತಿಮೆ ರೂಪದಲ್ಲಿ ತೋರಬಹುದು".[1] ಶಬ್ದಚಿತ್ರದ ರೂಪದಲ್ಲಿ ಒಂದು ಪ್ರತಿಮೆಯಲ್ಲಿ ದೃಷ್ಟಿಗಿಂತಲೂ ಸ್ಪರ್ಶ, ಶ್ರವಣ ಮತ್ತು ಭಾವತೀವ್ರತೆಗಳು ಕಾವ್ಯದ ಒಳನೋಟವನ್ನು ತೆರೆದಿಡುತ್ತದೆ. ಪ್ರತಿಮೆಗಳಲ್ಲಿ ಭಾವನಾತ್ಮಕತೆ, ಬೌದ್ಧಿಕತೆಗಳೊಂದಿಗೆ ಕಾವ್ಯ ಸೌಂದರ್ಯವೂ ಇರುತ್ತದೆ.

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ
ವಿಟ್ಠಲನಾಮ ತುಪ್ಪವ ಕಲಸಿ ಬಾಯಿ ಚಪ್ಪರಿಸಿರೊ
ಒಮ್ಮಾನ ಗೋಧಿಯ ತಂದು ವೈರಾಗ್ಯ ಕಲ್ಲಿಲಿ ಬೀಸಿ
ಸುಮ್ಮನೆ ಸಜ್ಜಿಗೆಯ ತೆಗೆದು ಸಣ್ಣ ಶಾವಿಗೆಯ ಹೊಸೆದು

(೮೦೫)

ಇಲ್ಲಿ ಅಲೌಕಿಕ ವಿಚಾರಗಳನ್ನು ಹೇಳಲು ಲೌಕಿಕ ವಸ್ತುಗಳನ್ನು ಬಳಸಿರುವುದು ಕಾವ್ಯ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ಇಲ್ಲಿ ಸೌಂದರ್ಯವೇ ಪ್ರಧಾನವಾಗಿರುವುದಿಲ್ಲ ಆದರೆ ಕಾವ್ಯ ಬಂಧದಲ್ಲಿ ಕಲಾತ್ಮಕತೆಯನ್ನು ತರುವಲ್ಲಿ ಸೌಂದರ್ಯದ ಪಾತ್ರವಿದೆ. ಪ್ರತಿಮೆಯು ಕಾವ್ಯದಲ್ಲಿ ಸೌಂದರ್ಯವನ್ನು, ಕಲಾತ್ಮಕತೆಯನ್ನು ಮೂಡಿಸುತ್ತಿದೆಯಾದರೂ ಅದೇ ಅಲ್ಲಿ ಮುಖ್ಯವಲ್ಲ. ಕಾವ್ಯಾರ್ಥದ ಪ್ರತಿಮಾಧ್ವನಿಯೇ ಮುಖ್ಯವಾಗುತ್ತದೆ.

ಪ್ರತಿಮೆಗಳನ್ನು ಶಬ್ದಚಿತ್ರಗಳೆಂದು ಕರೆಯಲಾಗಿದೆ. ಆದರೆ ಶಬ್ದಚಿತ್ರಗಳೆಲ್ಲವೂ ಪ್ರತಿಮೆಗಳಲ್ಲ. "ಶಬ್ದಚಿತ್ರಗಳು ಒಂದು ಅಮೂರ್ತ ಭಾವಗ್ರಹಣೆಗೆ ಸಹಾಯವಾಗಬೇಕು, ಅವು ಕವಿಯ ಭಾಷೆಗೆ ವ್ಯಂಜಕ ಶಕ್ತಿಯನ್ನು ನೀಡಬೇಕು ಅಮೂರ್ತ ಭಾವಗಳಿಗೆ ದೃಢತೆಯನ್ನು ಒದಗಿಸಿಕೊಡಬೇಕು. ಅವುಗಳಿಂದ ಕವಿಯ ಮೂಲ ಭಾವನೆಗಳನ್ನು ಅರಿತುಕೊಳ್ಳಲು ಓದುಗನ ಭಾವನೆಗಳಿಗೆ ಸಹಾಯವಾಗಬೇಕು ಅಂತಹ ಶಬ್ದಚಿತ್ರಗಳು ಪ್ರತಿಮೆಗಳಾಗುತ್ತವೆಯೇ ವಿನಾ ಕೇವಲ ಸುಂದರಚಿತ್ರಗಳಲ್ಲ. ಕವಿ ಶಬ್ದಗಳನ್ನು ಅಭಿವ್ಯಕ್ತಿಸುವ ಮೂಲಕ ವಿಚಾರವನ್ನು ಓದುಗರಿಗೆ ಇಂದ್ರಿಯಗ್ರಾಹಿಯಾಗಿ ಮಾಡುವುದು ಪ್ರತಿಮೆಯ ಪ್ರಮುಖವಾದ ಕಾರ್ಯ. ಹಾಗಾಗದೆ ಆ ಪರಿಣಾಮವನ್ನು ಓದುಗರಿಗೆ ಉಂಟು ಮಾಡಲು ಅಸಾಧ್ಯವಾದ ಶಬ್ದಚಿತ್ರಗಳು ಕೇವಲ ನೀರಸ, ಸತ್ವಹೀನ ಬಿಡಿ ಬಿಡಿ ಚಿತ್ರಗಳಾಗುತ್ತವೆ. ಓದುಗರ ಭಾವಕೋಶವನ್ನು ವಿಸ್ತರಿಸದೆ, ತಟ್ಟದೆ ಸಂವಹನ ದೃಷ್ಟಿಯಿಂದ ಸೋಲುತ್ತವೆ".

"ಪ್ರತಿಮೆಗಳು ಎಷ್ಟೇ ಸುಂದರವಾಗಿದ್ದರೂ ಅವು ಕವಿಯ ನಿಜವಾದ ವ್ಯಕ್ತಿತ್ವವನ್ನು ನಿರೂಪಿಸುವುದಿಲ್ಲ. ಅವು ಕವಿಯ ಕಲ್ಪಕತೆಯನ್ನು ತೋರಿಸುತ್ತವೆ. ಒಂದು ಸ್ಥಿರವಾದ ಉತ್ಕಟಭಾವ, ಪ್ರತಿಮೆಯನ್ನು ರೂಪಾಂತರಿಸುತ್ತದೆ".[3] ಎಂದು ಕೋಲ್ರಿಜ್ ಹೇಳಿದ್ದಾನೆ. ಪ್ರತಿಮೆಗಳು ಕವಿಯ ಕಲ್ಪಕತೆಯನ್ನು ತೋರಿಸುವ ಸಾಧನಗಳಾಗದ್ದು ಕವಿಯ ಭಾವನೆಗಳನ್ನು ನಮ್ಮ ಹೃದಯಕ್ಕೆ ಮುಟ್ಟಿಸುವ ವಾಹಕಗಳಾಗಿವೆ.

ಕಾಗದ ಬಂದಿದೆ । ನಮ್ಮ । ಕಮಲಾನಾಭನದು ಈ ।
ಕಾಗದವನ್ನು ಓದಿಕೊಂಡು । ಕಾಲವ ಕಳೆಯಿರೊ
ಕಾಮ ಕ್ರೋಧವ ಬಿಡಿರೆಂಬೊ ಕಾಗದ ಬಂದಿದೆ
ನೇಮನಿಷ್ಠೆಯೊಳಿರಿರೆಂಬೊ ಕಾಗದ ಬಂದಿದೆ
ತಾಮಸ ಜನರ ಕೂಡದಿರೆಂಬೊ ಕಾಗದ ಬಂದಿದೆ ನಮ್ಮ

(೨೮೨)

ಕಾಮಕ್ರೋಧವನ್ನು ಬಿಟ್ಟು ನಿಷ್ಠೆಯಿಂದಿರಬೇಕೆಂಬ ತತ್ವವನ್ನು ಬಿಂಬಿಸಲು ಈ ಕಾಗದದ ಪ್ರತಿಮೆ ಯಶಸ್ವಿಯಾಗಿದೆ. ಹೊಸ ಹೊಸ ಸುದ್ದಿಗಳನ್ನು ತಿಳಿಸಲು ಕಾಗದವು ಒಂದು ಮಾಧ್ಯಮ. ಇಲ್ಲಿ ಮಾನವನು ಉತ್ತಮ ವ್ಯಕ್ತಿತ್ವವನ್ನು ರೂಪಿಸಲು ಇರಬೇಕಾದ ಗುಣಗಳನ್ನು ತೋರಿಸುವುದರೊಂದಿಗೆ ಅವಗುಣಗಳನ್ನು ತ್ಯಜಿಸುವ ಬಗ್ಗೆಸೂಚನೆಯಿದೆ .

ಪ್ರತಿಮೆಗಳಲ್ಲಿ ಕವಿಯ ಅನುಭವದೊಡನೆಯೇ ನಮಗೆ ರಸಾನುಭವವೂ ಆಗುತ್ತದೆ. ನಮಗೆ ಪ್ರಮುಖವಾಗಿ ರಸಾನುಭವವಾದರೆ ಅದಕ್ಕೆ ಪೂರಕವಾಗಿ ಕವಿಯ ಅನುಭವವು ಪ್ರತಿಮೆಗಳ ಮೂಲಕ ದೊರೆಯುತ್ತದೆ. ಒಂದು ಉತ್ತಮ ಪ್ರತಿಮೆಯಲ್ಲಿ ಕವಿಗೆ ಆಗುವ ಅನುಭವಕ್ಕಿಂತಲೂ ಮಿಗಿಲಾದ ರಸಾನುಭವವು ಸಹೃದಯಿಗೆ ಆಗುವುದು ಸಾಧ್ಯ. "ಭಿನ್ನ ಭಿನ್ನ ವಿಷಯಗಳ ಬಗ್ಗೆ ಇದ್ದ ಕವಿತೆಗಳಲ್ಲಿ ವೈವಿಧ್ಯಪೂರ್ಣವಾದ ಹೇಳಿಕೆಯಿಂದ ಓದುಗರ ಮನಸ್ಸಿನ ಮೇಲೆ ಬೇರೆ ಬೇರೆ ಪ್ರತಿಕ್ರಿಯೆಗಳು ಉಂಟಾಗುತ್ತವೆ. ಆದರೂ ಕೂಡ ಈ ಎಲ್ಲಾ ಪ್ರತಿಕ್ರಿಯೆಗಳಲ್ಲಿಯೂ ಒಂದು ಸಾಮಾನ್ಯವಾದ ಗುಣವಿದೆ. ಅದನ್ನು ಒಂದು ಶಬ್ದದಲ್ಲಿ ಹೇಳಬೇಕಾದರೆ 'ಆನಂದ' ಎನ್ನಬಹುದು. ಈ ಆನಂದವು ಸೌಂದರ್ಯಾನುಭವದಿಂದ ಹುಟ್ಟುವಭಾವನೆ. ಈ ಭಾವನೆಯು ಮಾನವೀಯ ಭಾವನೆಗಿಂತಲೂ ಭಿನ್ನವಾಗಿರುತ್ತದೆ. ಕವಿಯ ಅನುಭವ ಎಂತಹ ದು:ಖ ಪೂರ್ಣವಾಗಿದ್ದರೂ ಕೂಡ ಕಾವ್ಯದಲ್ಲಿ ನಮಗೆ ಅದರಿಂದ ರಸಾನುಭವವಾಗಿ ಆನಂದವೇ ಆಗುತ್ತದೆ".[೪] ಈ ಮೇಲಿನ ವಿಚಾರಗಳಿಗೆ ಪೂರಕವಾಗಿ ನಾವು ರಾಮಾಯಣ ಕಾವ್ಯವನ್ನು ಗಮನಿಸಬಹುದು. ಕರುಣರಸ ಪ್ರಧಾನವಾಗಿರುವ ಈ ಕಾವ್ಯವು "ಕಾವ್ಯಮಾನಂದಾಯ" ಎಂಬ ತತ್ವಕ್ಕೆ ಬದ್ಧವಾಗಿ ಸುಖಾಂತವಾಗಿ ಆನಂದವನ್ನು ನೀಡುತ್ತದೆ.

ರಸವು ಕಾವ್ಯದ ಆತ್ಮವಾದರೆ ಅದನ್ನು ಅಭಿವ್ಯಕ್ತಿಗೊಳಿಸುವುದು ಧ್ವನಿ. ಅರ್ಥಕ್ಕಿರುವ ಅನುರಣನ ಶಕ್ತಿಯೇ ಧ್ವನಿಯಾಗಿದ್ದು ಧ್ವನಿಪೂರ್ಣವಾದ ಅಲಂಕಾರವನ್ನು ಪ್ರತಿಮೆ ಎನ್ನಬಹುದು.

" ಪ್ರತಿಮಾ ವಿಧಾನದಲ್ಲಿ ವ್ಯಂಜಕ ಧ್ವನಿ ಮುಖ್ಯ ಅಪಾರವಾದ ಅರ್ಥ ಧ್ವನಿಸಬೇಕು. ಕವಿಯ ಮನಸ್ಸಿನಲ್ಲಿರುವ ಅನುಭವ ತೀವ್ರತೆ ಅಭಿವ್ಯಕ್ತಿಯನ್ನು ಬಯಸುತ್ತದೆ. ಅನುಭವದ ಒತ್ತಡದ ಮೂಲಕ ಬಿಡುಗಡೆ ಪಡೆಯುವುದೇ ಅಭಿವ್ಯಕ್ತಿ. ಪ್ರತಿಯೊಂದು ಅನುಭವವೂ ಯಾವುದೇ ಒಂದು ರೀತಿಯ ಅಭಿವ್ಯಕ್ತಿಯನ್ನು ಬಯಸುತ್ತದೆ. ಅನುಭವದ ಕ್ಷಣವನ್ನು ಶಬ್ದಗಳಲ್ಲಿ ಹಿಡಿದಿಡುವ ಪ್ರಯತ್ನವೇ ಅಭಿವ್ಯಕ್ತಿ. ಕವಿಯ ಅನುಭವ ಇನ್ನೊಬ್ಬರ ಅನುಭವವಾಗಬೇಕು".[೫] ಅಮೂರ್ತ ಅನುಭವಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಹೇಳುವುದರೊಂದಿಗೆ ರಮಣೀಯ ಅರ್ಥವನ್ನು ಪ್ರತಿಪಾದಿಸಿದಾಗ ಅದು ಅನುಭವ ತೀವ್ರತೆಯನ್ನು ಪಡೆಯುತ್ತದೆ. ಪ್ರತಿಮಾನಿರ್ಮಿತಿಯಲ್ಲಿಯೂ ಈ ಎಲ್ಲಾ ಅಂಶಗಳು ಒಳಗೊಳ್ಳಬೇಕು.

ಕುರುಡುನಾಯಿ ಸಂತೆಗೆ ಬಂತಂತೆ ಅದು ಏತಕೆ ಬಂತೋ
ಖಂಡಸಕ್ಕರೆ ಹಿತವಿಲ್ಲವಂತೆ ಖಂಡ ಎಲುಬು ಕಡಿದಿತಂತೆ
ಹೆಂಡಿರ ಮಕ್ಕಳ ನೆಚ್ಚಿತಂತೆ ಕೊಂಡು ಹೋಗುವಾಗ ಯಾರಿಲ್ಲವಂತೆ

....

ಮಂಗನ ಕೈಯ ಮಾಣಿಕ್ಯವಂತೆ ಹಾಂಗೂ ಹಿಂಗೂ ಕಳೆದೀತಂತೆ
ರಂಗ ಪುರಂದರ ವಿಠಲನ ಮರೆದು ಭಂಗ ಬಹಳ ಪಟ್ಟಿತಂತೆ. (೩೦೩)

ಕುರುಡುನಾಯಿಯು ಅಜ್ಞಾನ, ಮೊಂಡುತನ ಮತ್ತು ಹೀನಭಾವದ ಸಂಕೇತವಾಗಿದೆ. ನಾಯಿಯು ಗೊತ್ತುಗುರಿಯಿಲ್ಲದೆ ಬೀದಿ ಬೀದಿ ಅಲೆದಾಡುತ್ತದೆ, ಸಿಕ್ಕಿ ಸಿಕ್ಕಿದ್ದನ್ನೆಲ್ಲ ತಿನ್ನುತ್ತದೆ. ಇಲ್ಲಿ ನಾಯಿಯು ಲೌಕಿಕ ಸುಖಭೋಗಗಳಲ್ಲಿ ಮುಳುಗಿರುವ ಮನುಷ್ಯನನ್ನು ಸೂಚಿಸುತ್ತದೆ. ಮಾನವನು ಉದ್ದೇಶರಹಿತನಾಗಿ ಭೋಗ ಜೀವನವನ್ನು ನಡೆಸಿ ಕೊನೆಗೆ ಹೇಳ ಹೆಸರಿಲ್ಲದಂತೆ ಸಾಯುತ್ತಾನೆ. ಇಲ್ಲಿ ನಾಯಿಯ ಅಲೆದಾಟವನ್ನು ಸ್ವಾರ್ಥ ಜೀವನವನ್ನು ನಡೆಸಿ ನಶ್ವರವಾಗುವ ಮಾನವನ ಬದುಕಿಗೆ ಹೋಲಿಸಲಾಗಿದೆ. ಪ್ರಾಪಂಚಿಕ ಬದುಕಿನ ಅರ್ಥಕಳೆದುಕೊಳ್ಳುವ ರೀತಿ ಹಾಗೂ ಈ ಆಕರ್ಷಣೆಯನ್ನು ಮೀರಿದ ಅಲೌಕಿಕ ಭಾವನೆಯನ್ನು ಈ ಕೀರ್ತನೆ ಸೂಚಿಸುತ್ತದೆ.

ಪ್ರತಿಮೆಗಳಲ್ಲಿ ಕವಿಯ ಅನುಭವದೊಡನೆಯೇ ನಮಗೆ ಬೇರೆಯ ಅನುಭವವೂ ಆಗುತ್ತದೆ. ಅದನ್ನೇ ಆಲಂಕಾರಿಕರು ರಸ ಎಂದು ಕರೆದಿದ್ದಾರೆ ಇದನ್ನೇ ಇನ್ನೊಂದು ರೀತಿಯಲ್ಲಿ ಆನಂದ ಎಂದು ಕರೆಯಬಹುದು. ಒಟ್ಟಿನಲ್ಲಿ ಕಾವ್ಯ ಪ್ರತಿಮೆಯ ರೂಪವನ್ನು ಹೀಗೆ ಅಡಕಗೊಳಿಸಬಹುದು.

೧. ಶಬ್ದಗಳ ಸಹಾಯದಿಂದ ಮೂಡಿಸಿದ ಒಂದು ಚಿತ್ರ ಅಂದರೆ ಪ್ರತಿಮೆಯು ಶಬ್ದಚಿತ್ರ

೨. ಪ್ರತಿಮೆಗಳು ಇಂದ್ರಿಯಜನ್ಯವಾಗಿದ್ದು ರೂಪಕಾತ್ಮಕವಾಗಿರುತ್ತದೆ.

೩. ಪ್ರತಿಮೆಗಳು ರಸಾನುಭವವನ್ನೆದಗಿಸುತ್ತವೆ.

೪. ಪ್ರತಿಮೆಗಳ ಮಾನವೀಯ ಭಾವನೆಗಳನ್ನು ಸ್ಫುರಿಸುತ್ತವೆ.

೫. ಪ್ರತಿಮೆಯು ಹೇಳಬೇಕಾದ ವಿಚಾರಗಳನ್ನು ನೇರವಾಗಿ ಹೇಳದೆ ಅದು ಓದುಗರಿಗೆ ಪ್ರತಿಮೆಯ ಮೂಲಕವೇ ಧ್ವನಿತವಾಗುತ್ತದೆ. ಆದ್ದರಿಂದ ಪ್ರತಿಮೆಯನ್ನು ಒಂದು ಧ್ವನಿವಿಶೇಷ ಎನ್ನಬಹುದು.

೬. ಕಾವ್ಯ ಪ್ರತಿಮೆಯೆಂದರೆ ಕವಿಯ ವ್ಯಕ್ತಿತ್ವದ ಮುದ್ರೆ.

೩.೨ ಪ್ರತಿಮಾ ಲಕ್ಷಣಗಳು

ನವೀನತೆಯುಳ್ಳ ಶ್ರೇಷ್ಠ ಪ್ರತಿಮೆಗಳು ಕಾವ್ಯಕಲೆಯ ಮುಖ್ಯ ಲಕ್ಷಣಗಳೆಂದು ಹೇಳಿದ ಲೆವಿಸ್ ಪ್ರಕಾರ ನವೀನತೆ, ಸಾಂದ್ರತೆ, ಮತ್ತು ಧ್ವನಿ ಪ್ರಚುರತೆಗಳೇ ಕಾವ್ಯದ ಮುಖ್ಯ ಲಕ್ಷಣಗಳು. ಸಿ.ಎಮ್. ಬೌರಾ ಹೇಳುವಂತೆ ಸಂಕ್ಷಿಪ್ತತೆ, ನವನವತ್ವ, ಅಪೂರ್ವತೆ, ಧ್ವನಿಪ್ರಚುರತೆ ಮತ್ತು ಭಾವತೀವ್ರತೆ ಇವು ಪ್ರತಿಮೆಗಳಲ್ಲಿರಬೇಕಾದ ಲಕ್ಷಣಗಳು. ಪ್ರತಿಮೆಯು ರೂಪ, ರುಚಿ, ಸ್ಪರ್ಶ, ಗಂಧ, ಶ್ರವಣ ಮುಂತಾದ ಅನುಭವಗಳನ್ನು ನೀಡುತ್ತವೆ. ಇದಕ್ಕೆ ಉದಾಹರಣೆಯಾಗಿ ನಾವು ಪುರಂದರದಾಸರ ಈ ಕೆಳಗಿನ ಕೀರ್ತನೆಗಳನ್ನು ಗಮನಿಸಬಹುದು.

ರೂಪಕ್ಕೆ

ತುಂಬಿದ ಹರಿಗೋಲಂಬಿಗ ಅದ
ಕೊಂಭತ್ತು ಛಿದ್ರವು ಅಂಬಿಗ
ಸಂಭ್ರಮದಿಂ ನೋಡಂಬಿಗ ಅದ
ರಿಂಬು ನೋಡಿ ನಡೆಸಂಬಿಗ (೨೮)

ಇಲ್ಲಿ 'ತುಂಬಿದ ಹರಿಗೋಲಂಬಿಗ' ಪದ್ಯದ ಸಾಲು ದೋಣಿಯನ್ನು ನಡೆಸುವವನ ಚಿತ್ರ (ಜೀವನದ ದೋಣಿಯನ್ನು ನಡೆಸುವವ ಪರಮಾತ್ಮ) ವನ್ನು ನೆನಪಿಸುತ್ತದೆ.

ರುಚಿಗೆ

ಕತ್ತೆಗೆ ಹೂರಣದ ರುಚಿ ತಿಳಿಯಲಿಲ್ಲ
ತೊತ್ತಿಗೆ ಪತಿವ್ರತೆಗುಣ ಬರಲಿಲ್ಲ
ಮುತ್ತಿನ ಹಾರ ಕಪಿಗೆ ಹಾಕಸಲ್ಲ
ಕುತ್ತಿಗೆ ಕೊಯ್ವಗೆ ಕರುಣವೇ ಇಲ್ಲ. (೧೧೪)

ಇಲ್ಲಿ 'ಕತ್ತೆಗೆ ಹೂರಣದ ರುಚಿ ತಿಳಿಯಲಿಲ್ಲ' ಎಂಬುದು ಬುದ್ಧಿಯಿಲ್ಲದವರಿಗೆ ಒಳ್ಳೆಯ ವಿಚಾರದ ಸವಿ ಗೊತ್ತಾಗದು ಎಂಬ ಮಾತನ್ನು ಧ್ವನಿಸುತ್ತದೆ.

ಸ್ಪರ್ಶಕ್ಕೆ

ಬಿಡದೆ ಯಮನಾಳುಗಳು ಬಾರೆಂದು ಎಳೆವಾಗ
ಮಡದಿ ಮಕ್ಕಳು ಕಡೆಗೆ ತೊಲಗುವರೊ ಮರುಳೆ. (೧೩೩)

ಪುರಂದರದಾಸರ ಈ ಕೀರ್ತನೆಯಲ್ಲಿ ಸಾಂಸಾರಿಕ ಜೀವನದಲ್ಲಿ ತೊಡಗಿರುವವನಿಗೆ ಸಾವು ಬಂದಾಗ ಅದನ್ನು ಮಡದಿ, ಮಕ್ಕಳೂ ಸೇರಿದಂತೆ ಯಾರಿಂದಲೂ ತಡೆಯಲು ಸಾಧ್ಯವಿಲ್ಲ, ಲೌಕಿಕದ ಬದುಕು ಶಾಶ್ವತವಲ್ಲ ಎಂಬ ಅಂಶವು ಸ್ಪರ್ಶಜ್ಞಾನವನ್ನು ನೀಡುತ್ತದೆ.

ಗಂಧ

ಇವಗೇಕೆ ಪರಿಮಳ ಇವಗೇಕೆ ಶೃಂಗಾರ
ನವನೀತಚೋರ ನಾರುವ ಗೊಲ್ಲಗೆ'
ಹೊಲಸು ಮೈಯವಗೇಕೆ ಹೊಸ ಕಸ್ತೂರಿ ವಾಟ
ತಲೆದೋರುವವಗೇಕೆ ದಟ್ಟ ಪುನುಗು (೧೧೭)

ಇಲ್ಲಿ ಪರಿಮಳಕ್ಕೆ ಸಂಬಂಧಿಸಿದ ವಿಚಾರಗಳನ್ನು ಹೇಳಲಾಗಿದೆ.

ಶ್ರವಣ

ಕಾಗೆ ಕೂಗಿತಲ್ಲ, ಈಗ ಒಂದು ಕಾಗೆ ಕೂಗಿತಲ್ಲ
ಎಲ್ಲರೇಳದ ಮುನ ಗುಲ್ಲು ಮಾಡುತಲೆದ್ದು
ಚೆಲ್ಲಿದ ಧನಧಾನ್ಯವ ಮೆಲ್ಲುತ (೨೮೩)

ಈ ಕೀರ್ತನೆಯಲ್ಲಿ ಕಾಗೆಯ ಕೂಗಿನ ವಿಚಾರವನ್ನು ಹೇಳುವುದರ ಮೂಲಕ ಕಾಗೆ ಹೀನವಲ್ಲ ಎಂಬ ಭಾವ ವ್ಯಕ್ತವಾಗಿದೆ.

ಈ ಮೇಲಿನ ಎಲ್ಲಾ ಪ್ರತಿಮೆಗಳೂ ಒಂದೊಂದು ದೃಷ್ಟಿಯಿಂದ ವಿಶಿಷ್ಟ. ಹೀಗೆ ಪ್ರತಿಮೆಗಳು ಭಾವಪೂರ್ಣವೂ ಬುದ್ಧಿಗಮ್ಯವೂ ಆಗಿರುವುದರ ಜೊತೆಗೆ ಇಂದ್ರಿಯಗಮ್ಯವೂ ಆಗಿವೆ. ಆದ್ದರಿಂದ "ಕಾವ್ಯ ಪ್ರತಿಮೆಗಳನ್ನು ಶಬ್ದಗಳ

ಸಹಾಯದಿಂದ ಮೂಡಿಸಿದ ಒಂದು ಚಿತ್ರ ಎನ್ನುವುದರೊಡನೆ ಅದು ಇಂದ್ರಿಯ ಅನುಭವಗಳ ಗುಣಗಳನ್ನು ಒಳಗೊಂಡ ಚಿತ್ರವೆಂಬುದನ್ನು ಬೆರೆಸಬೇಕಾಗುವುದು". [೬]

ಪ್ರತಿಮಾನಿರ್ಮಿತಿಯಲ್ಲಿ ಇಂದು ನವೀನತೆ, ತೀಕ್ಷ್ಣತೆ ಮತ್ತು ಪ್ರಚೋದಕ ಶಕ್ತಿಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಪ್ರತಿಮಾ ನಿರ್ಮಿತಿಯು ನವೀನತೆಯಿಂದ ಕೂಡಿದ್ದಾಗ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ನೆನಪಿನಲ್ಲಿ ಉಳಿಯುವುದು ಸಾಧ್ಯವಾಗುತ್ತದೆ. ನವೀನತೆ ಎಂದರೆ ಪ್ರತಿಮೆಯ ಬಂಧದಲ್ಲಿ ಹೊಸತನವೆನ್ನಬಹುದು. ಉಪಮೆಗಿಂತ ರೂಪಕವು ಹೆಚ್ಚು ತೀಕ್ಷ್ಣವಾಗಿರುತ್ತದೆ. ತೀಕ್ಷ್ಣತೆಯ ಪ್ರತಿಮೆಗಳು ನಮ್ಮ ಭಾವನೆಗಳನ್ನು ಪ್ರಚೋದಿಸುವ ಗುಣವನ್ನು ಹೊಂದಿರುತ್ತದೆ. ಒಂದು ಸುಂದರ ಪ್ರತಿಮೆಯು ಪ್ರಚೋದಕ ಶಕ್ತಿಯಿಂದ ಕೂಡಿದ್ದಾಗ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ ಮತ್ತು ಕಾವ್ಯದ ಉದ್ದೇಶವೂ ಈಡೇರಬಲ್ಲುದು.

೩.೩ ಪ್ರತಿಮೆಗಳ ಮಾದರಿ

ಪ್ರತಿಮೆಯು ಕಾವ್ಯದಲ್ಲಿ ಒಂದು ಸ್ವತಂತ್ರ ಘಟಕವಾಗಬಹುದು. ಅದು ಕಾವ್ಯದ ಜೀವಂತ ಬೆಳವಣಿಗೆಗೆ ಪೋಷಕವಾಗುವ ಅಂಶವೂ ಹೌದು. ಒಂದು ಪದ ಕೆಲವೊಮ್ಮೆ ಪ್ರತಿಮೆಯಾದರೆ ಇಡೀ ಕವಿತೆಯೇ ಕೆಲವೊಮ್ಮೆ ಪ್ರತಿಮೆಯಾಗಬಹುದು. ಈ ಪ್ರತಿಮೆಗಳ ಮಾದರಿಗಳನ್ನು ತಿಳಿಯುವುದು ಅವಶ್ಯವಾಗಿದೆ.

ಪ್ರತಿಮಾ ಮಾದರಿ ಸ್ವಭಾವಗಳನ್ನು ಕುರಿತಂತೆ ಕಾವ್ಯ ಕ್ರಿಯೆ ಮತ್ತು ಸಂಪೂರ್ಣ ಕಾವ್ಯದೃಷ್ಟಿ – ಈ ಎರಡೂ ಅಂಶಗಳನ್ನು ಗಮನಿಸಬಹುದು. ಕಾವ್ಯ ಪ್ರತಿಮೆಗಳನ್ನು ಸೃಷ್ಟಿಸುವಲ್ಲಿ ಕವಿಯ ಕಲ್ಪನಾಶಕ್ತಿ ಬಹಳ ಮುಖ್ಯವಾಗಿ ಕೆಲಸ ಮಾಡುತ್ತದೆ. ಕಲ್ಪಕತೆಯು ಕವಿಯ ಮಾನಸಿಕ ಪ್ರವೃತ್ತಿಯಾಗಿದ್ದು ಇದು ಕವಿಗಿಂತ ಕವಿಗೆ ಭಿನ್ನವಾಗಿದ್ದು ಕವಿಯ ಭಾವನೆಯನ್ನವಲಂಬಿಸಿದೆ. ಶೆಲ್ಲಿ ಕವಿಗೆ ಕಲ್ಪಕತೆಯೇ ದೇವತೆಯಾಗಿದ್ದು ತಾನೇ ಅದರ ದೂತನಾಗಿದ್ದ. ಮಾನಸಿಕ ಕಾರ್ಯಪ್ರವೃತ್ತಿಯಾದ ಕಲ್ಪಕತೆಯಿಂದಲೇ ಮಾನವೀಯ ಸಹಾನುಭೂತಿಯು ಹರಿಯುತ್ತದೆ. ಆದುದರಿಂದಲೇ ಶೆಲ್ಲಿಯು ಕಲ್ಪಕತೆಗೆ 'ನೈತಿಕ ಕಲ್ಯಾಣದ ಸಾಧನ' ಎಂದು ಕರೆದಿದ್ದಾನೆ. ಕಾವ್ಯದಲ್ಲಿ ಕಲ್ಪಕತೆಯೊಂದಿಗೆ ಸಹಾನುಭೂತಿಯ ವಿಚಾರಗಳೂ ಸೇರಿಕೊಂಡಿವೆ.

“ಒಂದು ಸ್ಮೃತಿ ಚಿತ್ರದಿಂದ ಕವಿಯು ತನ್ನ ಕಾವ್ಯನಿರ್ಮಿತಿಯನ್ನು ಪ್ರಾರಂಭಿಸುತ್ತಾನೆ. ಇದು ಅವನ ಅನುಭವದ ನದಿಯಲ್ಲಿದ್ದ ಒಂದು ಹನಿಯು; ಹನಿಯಿಂದಾದ ಸ್ಫಟಿಕವೇ ಪ್ರತಿಮೆ”.[೬]

ಹಿಂದಿನ ಕವಿಗಳು ಗೂಢವಾದ ವಿಚಾರಗಳನ್ನು ಮನಸ್ಸಿನಲ್ಲಿಟ್ಟು ಬರೆಯುತ್ತಿದ್ದು ಇಂದು ಇದು ಬದಲಾಗಿದೆ. ಗೊಯ್‌ಥೆ ಎಂಬ ಜರ್ಮನ್ ಕವಿಯು ಹಿಂದಿನ ಪದ್ಧತಿಗಿಂತ ಆಧುನಿಕ ಪದ್ಧತಿಯು ಬದಲಾದ ಬಗ್ಗೆ ಹೀಗೆ ಬರೆಯುತ್ತಾನೆ. “ಗೂಢವಾದ ವಿಚಾರವನ್ನು ಕಾವ್ಯದಲ್ಲಿ ಬರೆಯುವುದು ನನ್ನ ಮಾರ್ಗವಾಗಿಲ್ಲ. ನಾನು ನನ್ನೊಳಗೇ ನೂರಾರು ಸ್ಮೃತಿ ಚಿತ್ರಗಳನ್ನು ಪಡೆಯುತ್ತೇನೆ. ಅವು ಇಂದ್ರಿಯಜನ್ಯವಾಗಿ, ಜೀವಂತವಾಗಿ, ರಮಣೀಯವಾಗಿ ಮತ್ತು ವೈವಿಧ್ಯಪೂರ್ಣವಾಗಿರುತ್ತವೆ. ಕಲ್ಪಕತೆಯ ಒಂದು ಜಾಗರೂಕ ಶಕ್ತಿಯು ಅವುಗಳನ್ನು ತರುತ್ತದೆ”. ಇದನ್ನೇ ಇಂದಿನ ಕಾವ್ಯರಚನೆಯ ಮೊದಲನೆಯ ಮಟ್ಟವೆಂದು ಗುರುತಿಸುತ್ತಾರೆ. ಕಲ್ಪಕತೆಯ ಶಕ್ತಿಗೆ ಶರಣುಹೋಗಿ ಅದನ್ನು ಪೂಜಿಸುತ್ತ ಕವಿಯು ಸಮಾಧಿಸ್ಥನಾಗಿ ಕುಳಿತಾಗ, ಅವನೆದುರಿಗೆ ಪ್ರತಿಮೆಗಳು ಸಾಲುಸಾಲಾಗಿ ಬರುತ್ತವೆ. ಇದನ್ನೇ ಕಾವ್ಯನಿರ್ಮಿತಿಯ ಎರಡನೆಯ ಮಟ್ಟವೆಂದು ಡಬ್ಲ್ಯೂ. ಬಿ. ಏಟ್ಸರು ಹೇಳಿದ್ದಾರೆ. ಸುಪ್ತಚೇತನದಲ್ಲಿ ಹುದುಗಿರುವ ವಿಚಾರಗಳನ್ನು ಹೊರಸೆಳೆಯಲು ಸಂಕಲ್ಪಶಕ್ತಿ ಮತ್ತು ಬುದ್ಧಿಯನ್ನು ಹಿಡಿತದಲ್ಲಿಟ್ಟಿರಬೇಕು. ಸಂಕಲ್ಪಶಕ್ತಿ ಬುದ್ಧಿರಹಿತವಾಗಿದ್ದರೂ ತೀವ್ರವಾಗಿರುತ್ತದೆ. ಇದನ್ನು ಬುದ್ಧಿಯನ್ನು ಬದಿಗಿರಿಸಿದ ಮಟ್ಟವೆನ್ನುತ್ತಾರೆ. ಮೂರನೆಯ ಮಟ್ಟದಲ್ಲಿ ಕವಿಯ ತಲ್ಲೀನತೆ ಹೆಚ್ಚು ಚುರುಕಾಗಿದ್ದು ಇಲ್ಲಿ ಕಾವ್ಯವಿಮರ್ಶೆಯ ಅಂಶವೂ ಇರುತ್ತದೆ. ಇಲ್ಲಿ ಕವಿ ನೂರಾರು ಪ್ರತಿಮೆಗಳನ್ನು ಆಧರಿಸಿ ಅವುಗಳಲ್ಲಿ ಉತ್ತಮವಾದುದನ್ನು ಆರಿಸುತ್ತಾನೆ. ಇದರಿಂದ ಕವಿತೆಗಳಲ್ಲಿ ಪ್ರತಿಮೆಗಳ ಒಂದು ಮಾದರಿ ಸಿದ್ಧವಾಗುತ್ತದೆ. ಪ್ರತಿಮೆ ಕವಿಯ ಬುದ್ಧಿಮತ್ತೆ ಮತ್ತು ಭಾವನಾ ಸಂಕೀರ್ಣತೆಯನ್ನು ಕ್ಷಣದಲ್ಲಿ ಕಟ್ಟಿಕೊಡುವ ವಿಶೇಷ ಶಕ್ತಿಯ ಸಾಧನವಾಗುತ್ತದೆ. ಪ್ರತಿಮಾನಿರ್ಮಿತಿಯ ಪ್ರಕ್ರಿಯೆಯನ್ನು ಗಾಳ ಹಾಕಿ ಮೀನು ಹಿಡಿಯುವ ಪ್ರಕ್ರಿಯೆಗೆ ಹೋಲಿಸಲಾಗಿದೆ. ಮೀನುಗಾರನು ನೀರಲ್ಲೇ ಸಿಕ್ಕ ಒಂದು ಸಣ್ಣ ಕೀಟವನ್ನು ಗಾಳದ ತುದಿಗೆ ಸಿಕ್ಕಿಸಿ ಮೀನು ಹಿಡಿಯುತ್ತಾನೆ. ಅಂತೆಯೇ ಕವಿಯು ತನ್ನ ಭಾವದ ಗಾಳಕ್ಕೆ ಪ್ರತಿಮೆಯೊಂದನ್ನು ಸಿಕ್ಕಿಸುತ್ತಾನೆ. ಮೀನುಗಾರನ ಗಾಳಕ್ಕೆ ನೀರಿನಲ್ಲಿರುವ ಮೀನುಗಳು ಸಿಗುತ್ತವೆ. ಮೀನುಗಾರನು ಶಾಂತರೀತಿಯಿಂದ ಕುಳಿತಂತೆ ಕವಿಯು ಶಾಂತಚಿತ್ತದಿಂದ ಕುಳಿತಾಗ ಹೊಸ ಹೊಸ ವಿಚಾರಗಳು ಹೊಳೆದು ಗಾಳಕ್ಕೆ ಮೀನು ಸಿಕ್ಕಂತೆ ಪ್ರತಿಮೆಗಳು ನಿರ್ಮಾಣವಾಗುತ್ತವೆ. ಹೀಗೆ ಕಾವ್ಯ

ಸಾಗರದಲ್ಲಿ ಪರಿವರ್ತನೆಗೆ ಒಳಗೊಂಡ ವಸ್ತು ವಿಷಯವೇ ಪ್ರತಿಮೆ. ಈ ಪ್ರಕ್ರಿಯೆಯಲ್ಲಿ ಕವಿ ಎದ್ದು ಬರುವ ಪ್ರತಿಮಾ ಪ್ರವಾಹವನ್ನು ಸ್ವೀಕರಿಸಬೇಕು ಪ್ರವಾಹ ನಿಂತರೆ ಕಾವ್ಯವು ಶುಷ್ಕವಾಗುತ್ತದೆ.

ಕವಿಯು ತನಗೆ ಹೊಳೆದ ಸಾಲುಗಳನ್ನು ತನ್ನ ಸುಪ್ತಚೇತನದಿಂದ ಪರಿಶೀಲಿಸಿದಾಗ ಅದು ಹೆಚ್ಚು ಆಳವಾಗಿದ್ದರೆ ಉತ್ತಮ ಪ್ರತಿಮೆಯಾಗುತ್ತದೆ. ಯಾಕೆಂದರೆ ಸುಪ್ತಚೇತನವು ಅನುಭವಗಳನ್ನು ಪ್ರತಿಮೆಯಾಗಿ ಮಾರ್ಪಡಿಸುವ ಶಕ್ತಿಯನ್ನು ಹೊಂದಿದೆ. ಕವಿಯ ಕಲ್ಪನೆಯು ಇಲ್ಲಿ ಪರಿಪಾಕಗೊಂಡು ಭಾವಪೂರ್ಣತೆಯನ್ನು ಪಡೆಯುತ್ತದೆ.

ಪ್ರತಿಮಾ ಮಾದರಿಗಳ ಹಿಂದೆ ಕ್ರಿಯಾತ್ಮಕ ತತ್ವವು ಅಡಗಿರುತ್ತದೆ. ಪ್ರತಿಮೆಗಳ ಸಹಯೋಗ, ಒಗ್ಗೂಡುವಿಕೆಯ ಒಟ್ಟು ಪರಿಣಾಮ ಸಾಂದ್ರವಾಗುತ್ತದೆ. ಪ್ರತಿಮೆಯಲ್ಲಿ ಉಪಮಾ, ರೂಪಕಗಳಂತೆ ಕೇವಲ ಹೋಲಿಸುವಿಕೆಯ ಕ್ರಿಯೆ ಮಾತ್ರ ನಡೆಯುವುದಿಲ್ಲ; ಆ ಹೋಲಿಕೆಯ ವಸ್ತುಗಳನ್ನು ಇಲ್ಲಿ ಹೇಳುವುದಿಲ್ಲ. “ಎರಡು ದೂರದ ವಸ್ತುಗಳನ್ನು ಹೋಲಿಸುವುದರಿಂದ ಅಥವಾ ಒಂದು ಕಡೆ ತರುವುದರಿಂದ ಮಾತ್ರ ಪ್ರತಿಮೆ ಮೂಡಿಬರದೆ ಆ ಎರಡು ದೂರದ ವಸ್ತುಗಳ ಹಿಂದಿನ ಸಮಾನ ಸಂಬಂಧಗಳನ್ನು ಭಾವನಾತ್ಮಕವಾಗಿ ಶ್ರುತಪಡಿಸುವುದರಿಂದ ಮಾತ್ರ ಪ್ರತಿಮೆಯಾಗುತ್ತದೆ”.[೮] ಪ್ರತಿಮೆಯು ಸತ್ಯದ ಬೆಳಕಿನಲ್ಲಿ ಮತ್ತೊಂದು ಸತ್ಯವನ್ನು ತೋರಿಸುತ್ತದೆ. ಅಪರಿಚಿತವಾದ ವಸ್ತುವನ್ನು ಪರಿಚಿತಗೊಳಿಸಲು ಅಮೂರ್ತ ವಿಚಾರಗಳನ್ನು ಮೂರ್ತರೂಪಗೊಳಿಸಲು ಪ್ರತಿಮೆಗಳು ಸಹಕಾರಿಯಾಗುತ್ತವೆ.

ಪ್ರತಿಮಾ ಮಾದರಿಗಳು ಮಾದರೀಯವಾಗಿರಗಬೇಕೇ ಹೊರತು ಶಬ್ದಚಿತ್ರಗಳ ನಾನಾ ಮುಖಗಳ ಸಹಯೋಗ ಮಾತ್ರ ಆಗಿರಬಾರದು. ಪುರಂದರದಾಸರ ಈ ಕೀರ್ತನೆಯಲ್ಲಿ ಬೇರೆ ಬೇರೆ ಶಬ್ದಚಿತ್ರಣಗಳನ್ನು ನೀಡುವುದರ ಮೂಲಕ ಸಾಮಾಜಿಕ- ಧಾರ್ಮಿಕ ಮೌಲ್ಯಗಳ ಮಹತ್ವವನ್ನು ಅಜ್ಞಾನಿಯು ಅರಿಯಲಾರನೆಂಬುದನ್ನು ಸೂಚಿಸಿದ್ದಾರೆ.

ಇಲ್ಲಿ ನಮ್ಮ ಶಾಸ್ತ್ರ ಮಾರುವುದಿಲ್ಲ
ಸುಮ್ಮನಿದ್ದರೆ ದಾರು ಕೇಳುವರಿಲ್ಲ
ಏಡಿ ಕಡಗವಿಟ್ಟು ಫಲವೇನಿಲ್ಲ
ಬೇಡ ತಾ ಮುತ್ತಿನ ಬೆಲೆ ಏನು ಬಲ್ಲ
ಕಾಡ್ಹಳ್ಳಿಗೌಡ ತಾನರಸಾಗಲಿಲ್ಲ
ವೇದಶಾಸ್ತ್ರಕ ಮೂಢ ತಲೆದೂಗಲಿಲ್ಲ (೧೧೪)

ಇಲ್ಲಿ ಒಂದರ ಹಿಂದೆ ಒಂದು ಬರುವ ದೃಷ್ಟಾಂತಗಳು ಹೆಚ್ಚಿನ ಅರ್ಥವನ್ನು ಸ್ಫುರಿಸಿ ಧಾರ್ಮಿಕ ವಿಚಾರಗಳನ್ನು ಪರಿಣಾಮಕಾರಿಯಾಗಿ ಹೇಳುವಲ್ಲಿ ಯಶಸ್ವಿಯಾಗಿವೆ.

ಪ್ರತಿಮೆಗಳಲ್ಲಿ ಮೇಲ್ಮೈಯ ಸಹಯೋಗಗಳಿಗಿಂತ ಕಾವ್ಯದ ಆಳದಲ್ಲಿ ಸಾಮ್ಯತೆ, ಸಹಯೋಗಗಳಿರುವುದು ಮುಖ್ಯ. ಪ್ರತಿಮೆಯ ಆಳದಲ್ಲಿ ಇಂತಹ ಸಹಯೋಗವಿಲ್ಲದಿದ್ದಲ್ಲಿ ಅದರಿಂದ ಸತ್ಯದರ್ಶನವಾಗದು. ಕವಿಯ ಅನುಭವದಿಂದ ಮೂಡಿಬರುವ ಕಾವ್ಯ ವಸ್ತುವಿಗಿಂತಲೂ ಹೆಚ್ಚು ವ್ಯಾಪಕವಾಗಿ ಕಾವ್ಯದ ಪ್ರತಿಮೆಯನ್ನು ಆಯ್ದುಕೊಳ್ಳಲಾಗುತ್ತದೆ. ಆದರೆ ಇಲ್ಲಿ ಸಹಜತೆ ಅಗತ್ಯ. ಕೀಟ್ಸ್ ಹೇಳುವಂತೆ "ಪ್ರತಿಮಾ ನಿರ್ಮಿತಿಯು ಸೂರ್ಯೋದಯದ ಹಾಗೆ ಸಹಜವಾಗಿರಬೇಕು. ಪ್ರತಿಮೆಯ ಉದಯ, ಪ್ರಗತಿ ಮತ್ತು ಅಸ್ತಮಾನವು ಸೂರ್ಯೋದಯ ಮತ್ತು ಸೂರ್ಯಾಸ್ತಗಳಂತೆಯೇ ಸ್ವಾಭಾವಿಕ ಕ್ರಿಯೆಯಾಗಿ ಬರಬೇಕು. ಕವಿಗೆ ಅದು ಅವನ ಮೇಲೆ ಬೆಳಗಿ, ಶಾಂತವಾಗಿ, ಅಸ್ತಂಗತವಾಗಬೇಕು".[೯] ವಿವಿಧ ಕೋನಗಳಲ್ಲಿರಿಸಿದ ಕನ್ನಡಿಗಳ ಸಾಲಿನಂತೆ ಪ್ರತಿಮೆಗಳು ವಸ್ತು ಸಂಗತಿಯ ಅನೇಕಾರ್ಥಗಳನ್ನು ಪ್ರತಿಫಲಿಸಬೇಕು. ಮಾಂತ್ರಿಕ ಕನ್ನಡಿಗಳಂತೆ ಅವು ಕೇವಲ ವಸ್ತುಸಂಗತಿಯನ್ನಲ್ಲದೆ ಅದಕ್ಕೆ ಜೀವವನ್ನು ಹೊಸ ರೂಪವನ್ನು ಕೊಡುತ್ತವೆ. ವಸ್ತುವಿನ ಅಂತಃಶಕ್ತಿಯನ್ನು ದರ್ಶನೀಯಗೊಳಿಸುವ ಸಾಮರ್ಥ್ಯ ಅದಕ್ಕೆ ಇರುತ್ತದೆ". [೧೦] ಕಾವ್ಯ ಮತ್ತು ಪ್ರತಿಮೆಗಳ ನಡುವೆ ಸೂಕ್ತ ಹೊಂದಾಣಿಕೆ ಇದ್ದಾಗ ಆ ಪ್ರತಿಮೆಯು ಹೆಚ್ಚು ಸತ್ವಯುತವಾಗಿ ಪ್ರಕಾಶಿತವಾಗುತ್ತದೆ.

ಹೊಂದಿಕೆಯುಳ್ಳ ಮಾದರಿಯ ಪ್ರತಿಮೆಯನ್ನು ನಿರ್ಮಿಸುವಲ್ಲಿ ಅನುಭವಗಳನ್ನು ಸಂಘಟಿಸುವ ಶಕ್ತಿಯೂ ಇರುತ್ತದೆ. ರಿಲ್ಕ್ ಎಂಬ ಒಬ್ಬ ಫ್ರೆಂಚ್ ವಿಮರ್ಶಕರು 'Note book of Malte Laurids Brigge' ಎಂಬ ಪುಸ್ತಕದಲ್ಲಿ ಅವಿಸ್ಮರಣೀಯವಾದ ಮಾತುಗಳನ್ನು ಈ ಬರೆದಿದ್ದಾನೆ. "ಜನರು ಕಲ್ಪಿಸುವಂತೆ ಪದ್ಯಗಳು ಕೇವಲ ಭಾವನೆಗಳಲ್ಲ; ಅವು ಅನುಭವಗಳು, ಒಂದು ಕವನವನ್ನು ಬರೆಯಬೇಕಾದರೆ, ಕವಿಯು ಅನೇಕ ನಗರಗಳನ್ನು, ಜನರನ್ನು, ವಸ್ತುಗಳನ್ನು ನೋಡಿರಬೇಕು. ಪಕ್ಷಿಗಳ ಹಾರಾಟ, ಉಷಃಕಾಲದ ಸಮಯಕ್ಕೆ ಮೃದುವಾದ ಪುಷ್ಪಗಳ ಅಭಿನಯ, ಪ್ರಾಣಿಗಳ ವೈವಿಧ್ಯ ಮುಂತಾದವುಗಳನ್ನು ಅರಿತಿರಬೇಕು. ಪ್ರಣಯಪೂರಿತ ಅನೇಕ ರಾತ್ರಿಗಳ ಸವಿನೆನಪು, ಶ್ರಮಿಕ ಹೆಂಗಳೆಯರ ಆಕ್ರೋಶ, ಸಾಯುವವನ ಕೊನೆಯ ಗಳಿಗೆಯ ತೆರೆದ ಕಿಟಕಿಗಳ ಕೋಣೆಯಲ್ಲಿ ಕುಳಿತು ಸುತ್ತಲೂ ಇರುವ ದು:ಖದ ವಾತಾವರಣ

ಮುಂತಾದವುಗಳನ್ನು ಅನುಭವಿಸಿರಬೇಕು. ಕೇವಲ ಸ್ಮೃತಿಗಳೇ ಒಂದು ಕವಿತೆಯನ್ನು ನಿರ್ಮಿಸುವುದಿಲ್ಲ. ಇಂತಹ ಸ್ಮೃತಿಗಳು ಹೆಚ್ಚಾದಾಗ ಅವುಗಳನ್ನು ಮರೆಯುವ ಶಕ್ತಿಯೂ ಕವಿಗಿರಬೇಕು. ಮತ್ತೆ ಅವು ಪುಟಿದೇಳುವವರೆಗೂ ಅವನಲ್ಲಿ ಅಪಾರ ತಾಳ್ಮೆಯಿರಬೇಕು. ಯಾಕೆಂದರೆ ಈ ಸ್ಮೃತಿಗಳೇ ಮುಖ್ಯವಾದವುಗಳು, ಯಾವಾಗ ಈ ಸ್ಮೃತಿಗಳು ರಕ್ತಗತವಾಗಿ ಕವಿಯ ಹಾವಭಾವ ಹಾಗೂ ದೃಷ್ಟಿಯಲ್ಲಿ ಬೆರೆತು ಹೋಗುತ್ತಿವೆಯೋ ಮತ್ತು ಯಾವಾಗ ಅವನಿಂದ ಅವುಗಳನ್ನು ಪ್ರತ್ಯೇಕಿಸಲು ಬರುವುದಿಲ್ಲವೋ ಅಂತಹ ಅಪೂರ್ವ ಕಾಲದಲ್ಲಿ ಕವಿತೆಯ ಪ್ರಥಮ ಶಬ್ದವು ಈ ಸ್ಮೃತಿಗಳ ಮಧ್ಯದಲ್ಲಿ ಉದ್ಭವಿಸಿ, ಅವುಗಳಿಂದ ಮುನ್ನುಗ್ಗುತ್ತವೆ". [೧೧]

ಪ್ರತಿಮೆಗಳ ಬಗ್ಗೆ ಕಲ್ಪಿಸಿ ಅವುಗಳ ಸ್ವಭಾವವನ್ನು ಊಹಿಸುವಂತೆ ಮಾಡುವ ತಾಳ್ಮೆ ಕವಿಗಿರಬೇಕು. ಕವಿಯ ಅಂತರಂಗದ ಶಕ್ತಿ ಪ್ರತಿಮಾ ಮಾದರಿಗಳನ್ನು ನಿರ್ಮಿಸಲೂ ಶುದ್ಧೀಕರಿಸಲು ನೆರವಾಗುತ್ತದೆ. ಇದಕ್ಕೆ ಅವನೊಳಗಿನ ಧ್ವನಿ ಕಾರಣ. ಇದರಿಂದ ಕವಿಯು ಮೃದುವಾಗಿ ಹಾಗೂ ಪ್ರಯತ್ನಪೂರ್ವಕವಾಗಿ ಬರುವ ಪ್ರತಿಮಾ ಮಾದರಿಗಳನ್ನು ಮುಂದುವರಿಸುತ್ತಾನೆ. ಅನಗತ್ಯ ವಿಚಾರಗಳನ್ನು ಕೈ ಬಿಟ್ಟು ಪ್ರತಿಮಾ ಮಾದರಿಯ ಸಾರವನ್ನು ಮಾತ್ರ ಸ್ವೀಕರಿಸುತ್ತಾನೆ. "ಈ ರೀತಿಯಿಂದ ಯೋಚಿಸಿದಾಗ, ಬರುವ ಪ್ರತಿಮಾಮಾದರಿಯಲ್ಲಿಯ ಕೆಲಭಾಗವಾದರೂ ಅಖಂಡವಾಗಿರುತ್ತದೆ. ಅನಂತರ ಅನುಭವವಲ್ಲದ, ಸ್ಮೃತಿಯಲ್ಲದ, ಶಬ್ದಗಳ ಅಸ್ಪಷ್ಟ ಕುಣಿತವಲ್ಲದ ಮತ್ತು ಇವುಗಳನ್ನೊಳಗೊಂಡ ಒಂದು ನವಜೀವನ ರೂಪುಗೊಳ್ಳುತ್ತದೆ. ಆ ನವಜೀವನವೇ ಕವಿತೆ".[೧೨]

ಕವಿಯ ಮನಸ್ಸಿನಲ್ಲಿ ಹುಟ್ಟುವ ಪ್ರತಿಮೆಗಳ ಶ್ರೇಣಿಯಿಂದಲೇ ಒಂದು ಉತ್ತಮ ಕಾವ್ಯ ರೂಪುಗೊಳ್ಳಲಾರದು. ಪ್ರತಿಮೆಯಿಂದ ಕಾವ್ಯಾರ್ಥ ಧ್ವನಿತವಾಗಬೇಕು. ಆದರೆ ಪ್ರತಿಮೆಗಳಿಗಾಗಿ ಕಾವ್ಯ ಇರಬಾರದು. ಪ್ರತಿಮೆ ಕಾವ್ಯದ ಸೌಂದರ್ಯವನ್ನು ಅರ್ಥವಂತಿಕೆಯನ್ನು ಹೆಚ್ಚಿಸುವಂತಿರಬೇಕು. ಈ ವಿಧಾನದಿಂದ ಕಾವ್ಯದಲ್ಲಿ ಬಿಡಿ ಪ್ರತಿಮೆಗಳು ಮೂಡುತ್ತವೆ. ಪ್ರತಿಮೆಗಳ ಸರಣಿಯು ಕಾವ್ಯದಲ್ಲಿ ಭಾವತೀವ್ರತೆಯನ್ನು ಹೆಚ್ಚಿಸುವಲ್ಲಿ ಅರ್ಥಪೂರ್ಣವಾಗಿ ದುಡಿಯುತ್ತದೆ. ಆದರೆ ಇಲ್ಲಿ ಬರುವ ಪ್ರತಿಮೆಗಳು ಒಂದಕ್ಕೊಂದು ಪೂರಕವಾಗಿರಬೇಕು. ಉದಾಹರಣೆಗೆ ಪುರಂದರದಾಸರ ಈ ಕೀರ್ತನೆಯಲ್ಲಿ ಇಂತಹ ಪ್ರತಿಮೆಗಳ ಗುಂಪುಗಳಿರುವುದನ್ನು ಗಮನಿಸಬಹುದು.

ಬೇವು ಬೆಲ್ಲದೊಳಿಡಲೇನು ಫಲ ಹಾವಿಗೆ ಹಾಲೆರೆದೇನು ಫಲ
ಕುಟಿಲವ ಬಿಡದಿಹ ಕುಜನರು ಮಂತ್ರವ ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಮನದಲಿ ವಿಠಲನ ನೆನೆದರೆಯೇನು ಫಲ (೬೬೩)

ಇಲ್ಲಿ ಕೊನೆಯ ಸಾಲಿನಲ್ಲಿ ಹೇಳುವ ಅಂಶವನ್ನು ಬಲಪಡಿಸಲು ಮೊದಲಿನ ಪ್ರತಿಮೆಗಳು ಮೂಡಿಬಂದಿವೆ. ಮೊದಲಿನ ಪ್ರತಿಮೆಗಳು ಬೇರೆ ಬೇರೆ ಚಿತ್ರಣಗಳನ್ನು ನೀಡುತ್ತಾ ಹೋದರೂ ಅಂತಿಮವಾಗಿ ಮನುಷ್ಯರು ಸುಳ್ಳನ್ನು ಹೇಳುತ್ತಾ ಮನದಲ್ಲಿ ದೇವರನ್ನು ನೆನೆದರೆ ಏನೂ ಫಲವಿಲ್ಲ ಎಂಬ ವಿಚಾರವನ್ನು ಬಲಪಡಿಸುವಲ್ಲಿ ಯಶಸ್ವಿಯಾಗಿದೆ. ಈ ರೀತಿ ಏಕಮುಖ ಪರಿಣಾಮಕಾರಿತ್ವವು ಬಿಡಿ ಬಿಡಿ ಪ್ರತಿಮೆಗಳಲ್ಲಿ ಗೋಚರಿಸುತ್ತದೆ. ಹೀಗೆ ಕಾವ್ಯದಲ್ಲಿ ಪ್ರತಿಮೆಗಳು ವಿಶಿಷ್ಟವಾಗಿ ಮೂಡಿಬಂದು ಕಾವ್ಯಕ್ಕೆ ಜೀವಕಳೆಯನ್ನು ನೀಡುತ್ತವೆ.

ಟಿಪ್ಪಣಿಗಳು

೧. ಡಾ. ಉಷಾಕಿರಣ್ ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ ಪುಟ ೫೪

೨. ಡಾ. ಮಂಗಳಾ ಪ್ರಿಯದರ್ಶಿನಿ : ನವೋದಯ ಕಾವ್ಯದಲ್ಲಿ ಅನುಭಾವ ಅಂಶಗಳು ಪುಟ ೧೪೭

೩. 'ಜೀವಿ' ಕುಲಕರ್ಣಿ, ಎ.ವಿ.ಗೋಕಾಕ : ಕಾವ್ಯದಲ್ಲಿ ಪ್ರತಿಮಾ ಸಂವಿಧಾನ ಪುಟ ೧೩

೪. 'ಜೀವಿ' ಕುಲಕರ್ಣಿ, ಎ.ವಿ.ಗೋಕಾಕ : ಕಾವ್ಯದಲ್ಲಿ ಪ್ರತಿಮಾ ಸಂವಿಧಾನ ಪುಟ ೧೪

೫. ಡಾ. ಉಷಾಕಿರಣ್: ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ ೫೬

೬. 'ಜೀವಿ' ಕುಲಕರ್ಣಿ, ಎ.ವಿ.ಗೋಕಾಕ : ಕಾವ್ಯದಲ್ಲಿ ಪ್ರತಿಮಾ ಸಂವಿಧಾನ ಪುಟ ೧೧

೭. 'ಜೀವಿ' ಕುಲಕರ್ಣಿ, ಎ.ವಿ.ಗೋಕಾಕ : ಕಾವ್ಯದಲ್ಲಿ ಪ್ರತಿಮಾ ಸಂವಿಧಾನ ಪುಟ ೨೧

೮. ಡಾ. ಉಷಾಕಿರಣ್: ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ ಪುಟ ೬೪

೯. ಡಾ. ಉಷಾಕಿರಣ್: ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ ಪುಟ ೬೫

೧೦.ಡಾ., ಉಷಾಕಿರಣ್: ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ ಪುಟ ೬೫

೧೧.'ಜೀವಿ' ಕುಲಕರ್ಣಿ, ಎ.ವಿ.ಗೋಕಾಕ : ಕಾವ್ಯದಲ್ಲಿ ಪ್ರತಿಮಾ ಸಂವಿಧಾನ ಪುಟ ೨೯

೧೨.'ಜೀವಿ' ಕುಲಕರ್ಣಿ, ಎ.ವಿ.ಗೋಕಾಕ: ಕಾವ್ಯದಲ್ಲಿ ಪ್ರತಿಮಾ ಸಂವಿಧಾನ ಪುಟ ೨೯

ಅಧ್ಯಾಯ ೪

ಪ್ರತಿಮಾಲೋಕದ ವಸ್ತು ವಿನ್ಯಾಸ

ಅಧ್ಯಾಯ – ೪
ಪ್ರತಿಮಾಲೋಕದ ವಸ್ತು ವಿನ್ಯಾಸ

೪.೦

ನಡುಗನ್ನಡ ಕಾಲದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ದಾಸ ಸಾಹಿತ್ಯವು ಮೂಡಿಬಂದಿದೆ. ಈ ದಾಸ ಸಾಹಿತ್ಯದಲ್ಲಿ ಪುರಂದರದಾಸರ ಕೀರ್ತನೆಗಳಲ್ಲಿ ಪ್ರತಿಮಾ ವಿಧಾನವು ಸೇರಿದಂತೆ ವಿಶಿಷ್ಟವೂ, ಶ್ರೇಷ್ಠವೂ ಆಗಿದೆ. ಪ್ರತಿಮಾ ನಿರ್ಮಿತಿಯಲ್ಲಿ ಕವಿ ತನಗರಿವಿಲ್ಲದಂತೆಯೇ ತನ್ನ ಅಂತರಂಗವನ್ನು ತೆರೆದಿಡುತ್ತಾನೆ. "ಕಾವ್ಯವು ಯಾವ ಮನಸ್ಸಿನಿಂದ ಹುಟ್ಟುತ್ತದೆಯೋ, ಮತ್ತು ಯಾವ ಮನಗಳಿಗೆ ಹೋಗಿ ಮುಟ್ಟುತ್ತದೆಯೋ, ಅವುಗಳಲ್ಲಿ ಒಂದು ಜೀವಂತವಾದ ಸಂಬಂಧವನ್ನು ತರಬೇಕಾಗಿದ್ದರೆ, ಅದು ಜೀವಚಿತ ಪ್ರತಿಮೆಗಳ ರೂಪದಲ್ಲಿರುವ ತನ್ನ ಸತ್ಯದ ಸನ್ಮಾರ್ಗದಿಂದಲೇ ಸಾಧಿಸಬೇಕು"[೧]. ಇದಕ್ಕೆ ಪುರಂದರದಾಸರೂ ಹೊರತಲ್ಲ. ಪುರಂದರದಾಸರ ಅನೇಕ ಕೀರ್ತನೆಗಳಲ್ಲಿ ಆತ್ಮವಿಮರ್ಶೆ, ಆತ್ಮನಿವೇದನೆಗಳಿದ್ದು ಅದು ಓದುಗರ ಮನ ಮುಟ್ಟಿದೆ. ಪುರಂದರದಾಸರ ಅಂತರಂಗ ನಿವೇದನೆ ಮತ್ತು ಆತ್ಮನಿವೇದನೆಗೆ ಕೀರ್ತನೆಗಳಲ್ಲಿನ ಪ್ರತಿಮಾ ವಿಧಾನ ನೆರವಾಯಿತು. ಅವರ ಅನೇಕ ಕೀರ್ತನೆಗಳಲ್ಲಿ ಉತ್ತಮ ಪುರುಷ ಏಕವಚನದ ಬಳಕೆಯಾಗಿರುವುದನ್ನು ಗಮನಿಸಬಹುದು.

ಇಬ್ಬರ್ಹೆಂಡಿರ ಸುಖವು ಇಂದು ಕಂಡೆನಯ್ಯಾ
ಅಬ್ಬಬ್ಬ ಎಂದಿಗೂ ಸಾಕುಸಾಕಯ್ಯ
ಒಬ್ಬಳಲಿ ಪೋಗಿ ಓಗರವ ಮಾಡೆನಲು
ಬೊಬ್ಬೆಯೇನಿದು ಕೊಬ್ಬೆ ನಡೆಯೆಂದಳು (೧೧೦)

ಪುರಂದರದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಚಿಂತನೆಗಳನ್ನು ಕಾಣಬಹುದು. ಯಾರು ಹೊಲೆಯರು ಎಂಬುದಕ್ಕೆ ಪುರಂದರದಾಸರ ಚಿಂತನೆ ಹೀಗೆ ಸಾಗುತ್ತದೆ.

ಹೊಲೆಯ ಹೊರಗಿಹನೇ ಊರೊಳಗಿಲ್ಲವೆ
ಶ್ರೀಹರಿಯ ಸ್ಮರಣೆಯನು ಬಲ್ಲವರು ಪೇಳಿ

ಶೀಲವನು ಕೈಗೊಂಡು ನಡೆಸದಾತನೆ ಹೊಲೆಯ
ಪೇಳಿದ ಹರಿಕಥೆಯನು ಕೇಳದವನೆ ಹೊಲೆಯ
ಆಳಾಗಿ ಅರಸಂಗೆ ಕೇಡು ಬಗೆವವನೆ ಹೊಲೆಯ
ಸೂಳೆಯನು ಕಾಮಿಸುವ ಶುದ್ಧ ಹೊಲೆಯ (೧೦೦೯)

ಹೀಗೆ 'ಹೊಲೆಯ' ಎಂಬ ಪದಕ್ಕೆ ಪುರಂದರದಾಸರ ವ್ಯಾಖ್ಯಾನ ಸಾಗುತ್ತದೆ. ಪುರಂದರದಾಸರು ಹೀಗೆ ಅನೇಕ ಕೀರ್ತನೆಗಳಲ್ಲಿ ಲೋಕನೀತಿಯನ್ನು ವಿಶದಪಡಿಸಿದ್ದಾರೆ. ಸಮಾಜದ ಓರೆಕೋರೆಗಳಿಗೆ ತಮ್ಮ ಮಾತಿನಚಾಟಿಯಲ್ಲಿ ಉತ್ತರವನ್ನು ನೀಡಿದ್ದಾರೆ. 'ಕಾವಿಯನುಟ್ಟು ತಿರುಗುವಿರಲ್ಲ ಕಾಮವ ಬಿಡಲಿಲ್ಲ' 'ಡೊಂಕು ಬಾಲದ ನಾಯಕರೆ ನೀವೇನೊಟವ ಮಾಡಿದಿರಿ' 'ಮನವ ತೊಳೆಯಬಲ್ಲರಲ್ಲದೆ ಮನೆಯ ತೊಳೆಯಬಲ್ಲರೆ' 'ಮಾಡು ಸಿಕ್ಕದಲ್ಲ ಮಾಡಿನ ಗೂಡು ಸಿಕ್ಕದಲ್ಲ', 'ಕುರುಡು ನಾಯಿ ಸಂತೆಗೆ ಬಂತಂತೆ ಅದು ಏತಕೆ ಬಂತೋ' ಮುಂತಾದ ಕೀರ್ತನೆಗಳಲ್ಲಿ ಅವರ ಸಾಮಾಜಿಕ ವಿಡಂಬನೆಯನ್ನು ಕಾಣಬಹುದು. ಪುರಂದರದಾಸರ ಸಾಮಾಜಿಕ ಕಳಕಳಿಯು ತೀವ್ರ ವಿಡಂಬನೆಯ ಮೂಲಕ ವ್ಯಕ್ತವಾಗಿದ್ದು ಸಾಮಾಜಿಕ ಧಾರ್ಮಿಕ ರೀತಿ ನೀತಿಗಳಲ್ಲಿ ಸುಧಾರಣೆ ತರುವ ಮನೋಧೋರಣೆಯನ್ನು ಹೊಂದಿದೆ. ಸಮಾಜದ ಲೋಪದೋಷಗಳನ್ನು ವಿಡಂಬನಾತ್ಮಕವಾಗಿ ಎತ್ತಿ ತೋರಿಸಿ ಆ ಮೂಲಕ ಸಾಮಾನ್ಯ ಜನರಿಗೂ ಅರ್ಥವಾಗುವ ಹಾಗೆ ತಮ್ಮ ಕೀರ್ತನೆಗಳಲ್ಲಿ ಹಾಡಿದ್ದಾರೆ. ಇಲ್ಲಿ ಸಾಮಾಜಿಕ ಬದುಕಿಗೆ ಮೌಲ್ಯವರ್ಧನೆ, ಅರ್ಥವತ್ತಾದ ಸರಳ ರೀತಿ ನೀತಿಗಳನ್ನು ಕಾಣಬಹುದು. ಪುರಂದರದಾಸರ ಕೀರ್ತನೆಗಳು ಧಾರ್ಮಿಕ ಹಿನ್ನೆಲೆಯಿಂದ ಹೊರಹೊಮ್ಮಿದ್ದರೂ ಸಮಾಜದ ಓರೆಕೋರೆಗಳನ್ನು ಗುರುತಿಸಿ ತಿದ್ದುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಈ ಗುರಿಸಾಧನೆಗೆ ಪ್ರತಿಮೆಗಳು ಪ್ರಮುಖ ಸಾಧನವಾಗಿ ಕೆಲಸ ಮಾಡಿವೆ.

ಪುರಂದರದಾಸರ ಅನೇಕ ಕೀರ್ತನೆಗಳಲ್ಲಿ ಆತ್ಮನಿವೇದನೆ, ಆತ್ಮವಿಮರ್ಶೆ ಪ್ರಕಟವಾಗಿವೆ. 'ಆಚಾರವಿಲ್ಲದ ನಾಲಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ', ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯಾ', 'ಕಲ್ಲಾಗಿ ಇರಬೇಕು ಕಠಿಣಭವತೊರೆಯೊಳಗೆ', 'ಈಸಬೇಕು ಇದ್ದು ಜೈಸಬೇಕು', 'ಇಬ್ಬರ್ಹೆಂಡಿರ ಸುಖವ ಇಂದು ಕಂಡೆನಯ್ಯ' 'ಭಂಡನಾದೆನು ನಾನು ಸಂಸಾರದಿ ಕಂಡು ಕಾಣದ ಹಾಗೆ ಇರಬಹುದೆ ಹರಿಯೆ' 'ಹೊಳೆಯ ಭರವ ನೋಡಂಬಿಗ' ಮುಂತಾದ ಕೀರ್ತನೆಗಳಲ್ಲಿ ಅವರ ಅಂತರಂಗದ ಭಾವಪ್ರಕಟವಾಗಿದೆ. ಪುರಂದರದಾಸರ ಕೀರ್ತನೆಗಳಲ್ಲಿ ಪ್ರಯೋಗವಾಗಿರುವ ಪ್ರತಿಮೆಗಳ ಅಧ್ಯಯನವನ್ನು ಕೈಗೊಂಡಿರುವುದರಿಂದ ಇಲ್ಲಿ ಪ್ರತಿಮೆಗಲ ಮೂಲಕ ಅವರ ವಿಚಾರಧಾರೆಗಳು ಮೂಡಿಬಂದಿರುವುದನ್ನು ವಿಶೇಷವಾಗಿ ಗಮನಿಸಲಾಗಿದೆ. ಪುರಂದರದಾಸರ ಕೀರ್ತನೆಗಳಲ್ಲಿ ಸಾಮಾಜಿಕ ವಿಚಾರಗಳಲ್ಲಿ ಲೋಕನೀತಿಯೂ ಒಳಗೊಂಡಿದೆ. ಸಸ್ಯಪ್ರತಿಮೆಗಳು ಮತ್ತು ಪ್ರಾಣಿ ಪ್ರತಿಮೆಗಳು ಧಾರಾಳವಾಗಿವೆ. ಧಾರ್ಮಿಕ ವಿಚಾರಗಳೂ ಹೇರಳವಾಗಿ ಬಂದಿದ್ದು

ಅಂತಿಮವಾಗಿ ಎಲ್ಲಾ ಪ್ರತಿಮೆಗಳೂ ಧಾರ್ಮಿಕತೆಯೆಡೆಗೆ ಮುಖಮಾಡುತ್ತವೆ. ಸಾಮಾಜಿಕ ಧಾರ್ಮಿಕ ಆಚರಣೆಗಳು ಮತ್ತು ಲೋಕ ನೀತಿಗಳ ವಿಮರ್ಶೆ ಎಲ್ಲವೂ ಪ್ರಗತಿಪರ ಧೋರಣೆಯನ್ನು ಹೊಂದಿರುವುದೂ ಗಮನೀಯ. ಈ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಈ ರೀತಿ ಗುರುತಿಸಬಹುದು.

೪.೧ ಸಸ್ಯ ಪರಿಕಲ್ಪನೆಗಳು

ಪುರಂದರದಾಸರ ಕೀರ್ತನೆಗಳಲ್ಲಿ ಧಾರ್ಮಿಕ ವಿಚಾರಗಳನ್ನು ಅಭಿವ್ಯಕ್ತಪಡಿಸುವಲ್ಲಿ ಸಸ್ಯ ಹಾಗೂ ಸಂಬಂಧೀ ವಿಚಾರಗಳು ಸಹಜ ವಿಶಿಷ್ಟ ಸಂಕೇತಗಳಾಗಿ ಮೂಡಿಬಂದಿವೆ. ಪುರಂದರದಾಸರ ವ್ಯಕ್ತಿವಿಶಿಷ್ಟತೆ ಹಾಗೂ ಅವರ ಕಾವ್ಯ ಪ್ರೌಢಿಮೆಯನ್ನು ಇಂತಹ ಕೀರ್ತನೆಗಳಲ್ಲಿ ಗುರುತಿಸಬಹುದು. "ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ ಈಸಬೇಕು ಇದ್ದು ಜೈಸಬೇಕು". ಎಂಬಲ್ಲಿ ಸಂಸಾರದಲ್ಲಿ ಎಷ್ಟೇ ಕಷ್ಟ ನಷ್ಟಗಳು ಬಂದರೂ ಅವುಗಳನ್ನೆಲ್ಲ ಸಮರ್ಥವಾಗಿ ಎದುರಿಸಿ ಬಾಳಿ ಬದುಕಬೇಕಾಗಿರುವುದು ಮಾನವಧರ್ಮ ಎಂಬ ಅಂಶ ವ್ಯಕ್ತವಾಗಿದೆ.

"ಜಾಲಿಯ ಮರವಂತೆ । ಧರೆಯೊಳು ದುರ್ಜನರು ಜಾಲಿಯ ಮರದಂತೆ" ಜಾಲಿಯ ಮರವು ನೆರಳನ್ನೂ ನೀಡದು. ಅಂತೆಯೇ ದುರ್ಜನರು ಇತರರಿಗೆ ಉಪಕಾರವನ್ನು ಎಂದಿಗೂ ಮಾಡಲಾರರು. 'ರಾಗಿ ತಂದೀರಾ ಭಿಕ್ಷಕ್ಕೆ ರಾಗಿ ತಂದೀರಾ' ಎಂಬಲ್ಲಿ 'ರಾಗಿ' ಪದವನ್ನು ಬೇರೆ ಬೇರೆ ಅರ್ಥಗಳಲ್ಲಿ ಬಳಸಿರುವ ರೀತಿ ಮತ್ತು ಆ ಮೂಲಕ ನೀತಿಬೋಧೆ, ಮಾಡಿರುವುದು ಭಾವತೀವ್ರತೆಯನ್ನು ಹೆಚ್ಚಿಸಿದೆ. 'ಬಿಳಿನೀರ ಕುಡಿದು ಒತ್ತಲೆ ಬೇವು ಉಟ್ಟು' ಹುಳಿ ಮೂಲಂಗೀರುಳ್ಳಿ ತಿಂಬವನೆ ಖೋಡಿ' ಎಂದು ಎಂತೆಂಥವರು ಮೂರ್ಖರೆಂಬುದನ್ನು ವಿವರಿಸಿದ್ದಾರೆ. 'ಹಣ್ಣು ಕೊಂಬರು ಬನ್ನಿ। ಹರಿದಾಸರು ಚಿಣ್ಣ ಬಾಲಕೃಷ್ಣನೆಂಬೊ ಹೆಸರಿನ ಹಣ್ಣು' ಎಂಬಲ್ಲಿ "ಹಣ್ಣು ಬಂದಿದೆ ಎಂಬುದರ ವಿಶೇಷ ಅರ್ಥವೆಂದರೆ, ಇಂತಹ ಹಣ್ಣು ಹಿಂದೆಂದೂ ಬಂದಿಲ್ಲ. ಇದು ಅಪೂರ್ವವಾದ ಚೆನ್ನ ಚೆನ್ನಾದ ಬಾಲಕೃಷ್ಣನೆಂಬ ಹಣ್ಣು"[೨] ಆಗಿದೆ. ಭವರೋಗಗಳನ್ನೆಲ್ಲವನ್ನು ಕಳೆಯಲು ಬಾಲಕೃಷ್ಣನೆಂಬ ಹಣ್ಣು ಸೇವಿಸಬೇಕೆಂಬಲ್ಲಿ 'ಹಣ್ಣು' ದೈವಭಕ್ತಿಗೆ ಪ್ರತೀಕವಾಗಿದೆ. ಹೀಗೆ ಅನೇಕ ಸಸ್ಯಸಂಬಂಧೀ ಪರಿಕಲ್ಪನೆಗಳನ್ನು ದಾಸರ ಕೀರ್ತನೆಗಳಲ್ಲಿ ಕಾಣಬಹುದು.

೪.೨ ಪ್ರಾಣಿ ಪರಿಕಲ್ಪನೆಗಳು

ಪುರಂದರದಾಸರು ತಮ್ಮ ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಅನೇಕ ಪ್ರಾಣಿ ಪಕ್ಷಿಗಳ ಸಂಗತಿಗಳನ್ನು ಸಹಜ ಸುಂದರವಾಗಿ ನಿರೂಪಿಸಿರುವುದು ಅವರ ಸೂಕ್ಷ್ಮಾಭಿವ್ಯಕ್ತಿಗೆ ಸಾಕ್ಷಿಯಾಗಿದೆ. ಪುರಂದರದಾಸರು ಕೀರ್ತನೆಗಳಲ್ಲಿ ಬಳಸಿದ ಪ್ರಾಣಿಪ್ರತಿಮೆಗಳು ಮನುಷ್ಯರಲ್ಲಿರುವ ಮೃಗೀಯ ಭಾವನೆಗಳು, ಅಜ್ಞಾನ, ಹೀನತನ ಇತ್ಯಾದಿಗಳ ಸಂಕೇತಗಳಾಗಿವೆ. ಪುರಂದರದಾಸರು ಹಾಸ್ಯ ವಿಡಂಬನೆಯೊಂದಿಗೆ ಸ್ವಾಭಾವಿಕ ಗುಣವಿಮರ್ಶೆಯನ್ನು ಮಾಡಿದ್ದು ಇವುಗಳು ಧಾರ್ಮಿಕತೆಗೆ, ದೈವತ್ವಕ್ಕೆ ಪ್ರತೀಕವಾಗಿವೆ. ಪ್ರಾಪಂಚಿಕ ಸುಖದ, ಸಂಸಾರದ ಬಗೆಗಿನ ಮಿಥ್ಯಾಕರ್ಷಣೆಗಳು ಬರೀ ವ್ಯರ್ಥವೆಂಬುದನ್ನು ಪ್ರಾಣಿಪ್ರತಿಮೆಗಳಲ್ಲಿ ಸುಂದರವಾಗಿ ಅಭಿವ್ಯಕ್ತಗೊಳಿಸಲಾಗಿದೆ. "ಕರಿಯತುರಗವಿರಲು ಬಿಟ್ಟು ಕೆಡಹುವ ಕತ್ತೆಯೇರಲು ಬೇಡವೋ" ಎಂಬುದು ಎಲ್ಲ ಶಕ್ತಿ ಸಾಮರ್ಥ್ಯಗಳಿದ್ದೂ ಅದನ್ನು ಬಳಸದ ಮಾನವನ ಮೌಢ್ಯವನ್ನು ಸೂಚಿಸುತ್ತದೆ. "ಕಚ್ಚದಿರು ಎಲ್ಲರಲಿ ಕಚ್ಚದಿರು ಬಲ್ಲರಲಿ ಕಚ್ಚದಿರು ಶ್ವಾನನಂತೆ ಆತ್ಮಾ' ಎಂಬಲ್ಲಿ ಮಾನವನು ಲೌಕಿಕದ ಸುಖಕ್ಕಾಗಿ ಹಾತೊರೆದು ಇನ್ನೊಬ್ಬರಿಗೆ ಹಿಂಸಿಸುವ ಗುಣವನ್ನು ಖಂಡಿಸುವುದನ್ನು ಕಾಣಬಹುದು. "ಕತ್ತೆಗೆ ಹೂರಣದ ರುಚಿ ತಿಳಿಯಲಿಲ್ಲ ...... ಮುತ್ತಿನ ಹಾರ ಕಪಿಗೆ ಸಲ್ಲ" ಎಂಬಲ್ಲಿ ಕತ್ತೆಯ ಬುದ್ಧಿಹೀನತೆ ಮತ್ತು ಕಪಿಯ ಚಂಚಲ ಸ್ವಭಾವದ ಮೂಲಕ ಮನುಷ್ಯನ ಅಜ್ಞಾನವನ್ನು ಚಂಚಲತೆಯನ್ನು, ಪೆದ್ದುತನವನ್ನು ವಿಡಂಬಿಸಿದ್ದಾರೆ.

'ಶ್ವಾನಸೂಕರನಂತೆ ಹೊಟ್ಟೆ ಹೊರೆದೆ', ಕುರುಡು ನಾಯಿ ಸಂತೆಗೆ ಬಂತಂತೆ', 'ನಾಯಿ ಬಂದದಪ್ಪಾ ಅಣ್ಣಾ ಅತ್ತಲಾಗಿರಿ ನಾಯಿ ಅಂದರೆ ನಾಯಿ ಅಲ್ಲ ಮಾನವ ಜನ್ಮದ ಹೀನ ನಾಯಿ' ಇತ್ಯಾದಿ ಕೀರ್ತನೆಗಳು ಮಾನವನ ಹೀನತನಕ್ಕೆ ಪ್ರತೀಕವಾಗಿದ್ದು, ಮಾನವನ ಅಜ್ಞಾನವನ್ನು ಬಿಂಬಿಸುತ್ತವೆ. ಅಲ್ಲದೆ ಮಾನವನು ಲೌಕಿಕ ಸುಖಕ್ಕಾಗಿ ಮಾಡುವ ಹೀನತನವನ್ನು ಚಿತ್ರಿಸುತ್ತವೆ. "ಹುತ್ತದೊಳಗೆ ಒಂದು ಸರ್ಪ ಎಂಟು ಗಜಗಳ ಬಿಡದೆ ನುಂಗಿತು", "ಅರ್ತಿಯಾಗಿದೆ ಬದುಕು ಸಾಯಲಾರೆನು ಎನಲು ಮೃತ್ಯು ಹೆಡತಲೆಯಲ್ಲಿ ನಗುತಿರ್ಪಳಯ್ಯಾ" ಇವು ಸಂಸಾರದ ಮಿಥ್ಯಾಕರ್ಷಣೆಯಲ್ಲಿ ಸಿಲುಕಿ ನಲುಗುವ ಜನರ ಸ್ಥಿತಿ ಹಾಗೂ ಕ್ಷಣಿಕ ಬದುಕನ್ನು ಸೂಚಿಸುತ್ತವೆ. "ಮಾಣಿಕವು ಕೋಡಗನ ಕೈಯಲ್ಲಿ ಇದ್ದಂತೆ, ಕೋಣನಿದಿರಿಗೆ ಕಿನ್ನರಿ ಮೀಟಿದಂತೆ" ಅರಿಯದ, ಅಜ್ಞಾನಿಗಳಿದಿರು ಏನು

ಉಪದೇಶವಿತ್ತರೂ ವ್ಯರ್ಥ ಎಂಬ ನಿಲುವು ಕಾಣುತ್ತದೆ. "ಕೆಂಡಕೆ ಒರಳ ಮುತ್ತುವುದುಂಟೆ .... ಹುತ್ತ ಸರ್ಪನ ಕಪ್ಪೆ ನುಂಗುವುದುಂಟೆ ಎಂಬುದು ದೃಢಭಕ್ತಿಯುಳ್ಳವರನ್ನು ಯಾರಿಂದಲೂ ಏನೂ ಮಾಡಲಾಗದು ಎಂಬುದನ್ನು ಧ್ವನಿಸುತ್ತದೆ. "ನಿಂದಕರಿರಬೇಕು ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೊ ಹಾಂಗೆ" ಇಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವಾಗ ಅದನ್ನು ಅಸೂಯೆಯಿಂದ ಸಹಿಸದವರು ನಿಂದಿಸುತ್ತಾರೆ. ಆದರೆ ಅವರಿಂದಲೂ ಸಮಾಜಕ್ಕೆ ಒಳಿತಾಗುತ್ತದೆ. ಹಂದಿ ಊರಿನ ಕೊಳೆಯನ್ನು ತಿಂದು ಶುದ್ಧ ಮಾಡುವಂತೆ ನಿಂದಕರು ನಿಂದಿಸಿದಾಗ ಒಳ್ಳೆಯ ಕೆಲಸಗಳನ್ನು ಮಾಡುವವರು ಇನ್ನಷ್ಟು ಜಾಗೃತರಾಗಿ ಕೆಲಸ ಮಾಡುತ್ತಾರೆಂಬುದನ್ನು ಸೂಚಿಸುತ್ತದೆ. "ಮಾತಿಗೆ ಬಾರದ ವಸ್ತು ಬಹಳಿದ್ದರೇನು.......ಶ್ವಾನನ ಮೊಲೆಯೊಳಗೆ ಹಾಲಿದ್ದರೇನು" ಎಂಬುದು ಉಪಯೋಗಕ್ಕೆ ಬಾರದ ವಸ್ತುಗಳಲ್ಲಿ, ಉಪಕಾರ ಮಾಡದ ವ್ಯಕ್ತಿಗಳಲ್ಲಿ ಏನು ಉತ್ತಮ ವಸ್ತುಗಳಿದ್ದರೂ ಅದು ನಿರರ್ಥಕ ಎಂಬ ಪುರಂದರದಾಸರ ಚಿಂತನೆ ತುಂಬ ತರ್ಕಬದ್ಧವಾದುದು. 'ಏಕೆ ಚಿಂತಿಸುತಿದ್ದಿ ಕೋತಿ ಮನವೆ", "ಕಚ್ಚದಿರು ಎಲ್ಲರಲಿ ಕಚ್ಚದಿರು ಬಲ್ಲರಲಿ ಕಚ್ಚದಿರು ಶ್ವಾನನಂತೆ ಆತ್ಮ" 'ಶ್ವಾನಸೂಕರಂತೆ ಹೊರೆದೆ ಹೊಟ್ಟೆ" ಮುಂತಾದ ಕೀರ್ತನೆಗಳು ಪುರಂದರದಾಸರ ಆತ್ಮನಿವೇದನೆಯನ್ನು ಪ್ರತಿನಿಧಿಸುತ್ತವೆ. "ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ ಬೇಟೆಗಾರರಿಗೆ ದಯಪುಟ್ಟೀತೆ" ಬೆಟ್ಟದ ನವಿಲು ಕಣ್ಣೀರಿಟ್ಟಿತೆಂದು ಬೇಟೆಗಾರನು ದಯೆ ತೋರಲಾರನು. ಅಂತೆಯೇ ಪುರಂದರವಿಠಲನನ್ನು ನೆನೆಯದಿದ್ದರೆ ಆತನು ಕರುಣೆತೋರಲಾರನು ಎಂಬಲ್ಲಿ ಆತ್ಮಶೋಧನೆಯ ಭಾವ ವ್ಯಕ್ತವಾಗಿದೆ. ಹೀಗೆ ಪುರಂದರದಾಸರ ಕೀರ್ತನೆಗಳಲ್ಲಿ ಆತ್ಮನಿವೇದನೆ, ಧಾರ್ಮಿಕತೆಯ ಪ್ರತಿಪಾದನೆಯೊಂದಿಗೆ ಸಮಾಜದ ಓರೆಕೋರೆಗಳ ಚಿತ್ರಣ ದೊರೆಯುತ್ತವೆ.

೪.೩ ಸಾಮಾಜಿಕ ಪರಿಕಲ್ಪನೆಗಳು

ಮನುಷ್ಯನು ಈ ಸಮಾಜದಿಂದ ಹೊರತಾಗಿರುವುದು ಸಾಧ್ಯವಿಲ್ಲ. ಸಾಹಿತ್ಯವು ಜನಜೀವನದ ಪ್ರತಿಬಿಂಬ ಅಥವಾ ಗತಿಬಿಂಬ. ಅಂತೆಯೇ ಪುರಂದರದಾಸರ ಕೀರ್ತನೆಗಳು ಸಮಾಜದ ಅನೇಕ ಮಗ್ಗುಲುಗಳನ್ನು ಪರಿಶೀಲಿಸುತ್ತದೆ.ಅದು ಚಿಕಿತ್ಸಕ ಗುಣವನ್ನು ಹೊಂದಿದೆ. ಸಾಹಿತ್ಯವು ಔಷಧಿಯಾದರೆ ಕವಿ ವೈದ್ಯನಾಗುತ್ತಾನೆ. ಇಂತಹ ಮಹಾನ್‌ವೈದ್ಯ, ದಾರ್ಶನಿಕ ಶ್ರೀ ಪುರಂದರದಾಸರೆಂದರೆ ಅತಿಶಯೋಕ್ತಿಯಲ್ಲ.

'ಇದಕೊಳ್ಳಿ ಭವರೋಗಕೌಷಧವನ್ನು ಇಂದ್ರಿಯವ ಜಯಿಸುವುದೆ ಇದಕೆ ಇಚ್ಛಾಪತ್ಯ' ಎಂದು ಲೌಕಿಕ ಜೀವನದಲ್ಲಿ ಮುಳುಗಿರುವ ಜನರಿಗೆ ಔಷಧಿ ಮತ್ತು

ಸತ್ಯವನ್ನು ಹೇಳುತ್ತಾರೆ. ನಾನು ಕರ್ಮಗಳ ಫಲವಾಗಿ ಈ ಲೋಕದಲ್ಲಿ ಹುಟ್ಟಿದ್ದು "ಇನ್ನು ಪುಟ್ಟಿಸದಿರಯ್ಯ, ಪುಟ್ಟಿಸಿದುದಕ್ಕೆ ಪಾಲಿಸಯ್ಯ ನನ್ನ ದಯದಿ ತಾರಿಸಯ್ಯ" ಎಂದು ಬಂಧ ವಿಮೋಚನೆಗೆ ಮೋಕ್ಷಕ್ಕಾಗಿ ಬೇಡುವುದರ ಜೊತೆಗೆ ಹುಟ್ಟಿದ ನಂತರ ಉತ್ತಮ ಮಾನವನಾಗಿ ಬಾಳಬೇಕೆಂಬ ಸಂದೇಶವನ್ನು ಸಾರುತ್ತಾರೆ. 'ಆಚಾರವಿಲ್ಲದ ನಾಲಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ' ಎಂದು ಮಾನವನ ನೀಚತನವನ್ನು ಎತ್ತಿ ಆಡುತ್ತಾರೆ. 'ಒಡೆತನ ಬರುವಾಗ ತನ್ನ ಪತಿಯನೆ ಕಂಡು ಚೆಲುವ ಚೆನ್ನಿಗನೆಂದು ಪೊಗಳುವರೊ' ಎಂಬಲ್ಲಿ ಸಂಪತ್ತು ಬಂದಾಗ ಎಲ್ಲವೂ ಚಂದ, ಇಲ್ಲದಿದ್ದಾಗ ಏನೂ ಇಲ್ಲ ಎಂಬ ಭಾವ ವ್ಯಕ್ತವಾಗುತ್ತದೆ. ಜನರ ಇಂತಹ ಸ್ವಾರ್ಥವನ್ನು ಪುರಂದರದಾಸರು ತೀವ್ರವಾಗಿ ವಿರೋಧಿಸುವುದನ್ನು ಕಾಣಬಹುದು. ಜನರಿಗೆ ಇರುವ ಸ್ವಾರ್ಥ, ಸಂಸಾರದ ಕಷ್ಟಗಳು ಅವುಗಳನ್ನು ಎದುರಿಸಿ ಬದುಕಬೇಕು, ಬಾಳಬೇಕು ಎಂಬ ಸಂದೇಶವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಈಸಬೇಕು ಇದ್ದು ಜೈಸಬೇಕು.... ಗೇರು ಹಣ್ಣಿನಲ್ಲಿ ಬೀಜ ಸೇರಿದಂತೆ ಸೇರಿದಂತೆ ಸಂಸಾರದಿ' ಎಲ್ಲ ಹಣ್ಣಿನ ಒಳಗೆ ಬೀಜವಿದ್ದರೆ ಗೇರು ಹಣ್ಣಿನ ಹೊರಗೆ ಬೀಜವಿದೆ. ಇದು ಹಣ್ಣಿನೊಂದಿಗಿದ್ದರೂ ಹಣ್ಣಿನಿಂದ ಬೇರೆ ಬೇರೆಯಾಗಿರುವುದನ್ನು ಕಾಣಬಹುದು. ಅಂತೆಯೇ ನಾವು ಸಂಸಾರದಲ್ಲಿದ್ದರೂ ಅದೇ ಸುಖಭೋಗದಲ್ಲಿ ಮುಳುಗಿ ಹೋಗಬಾರದು. ಸಂಸಾರಿಯಾಗಿಯೂ ಎಲ್ಲ ಕಷ್ಟಗಳನ್ನೆದುರಿಸಿ ಜೀವನವನ್ನು ಸಾಗಿಸಬೇಕು. ಇದೇ ಅಂಶವು "ಇರಬೇಕು ಇಲ್ಲದಿರಬೇಕು ಸಂಸಾರದಿ ಜನಕಾದಿ ರಾಜಋಷಿಗಳಂತೆ"; "ಇರಬೇಕು ಇಲ್ಲದಿರಬೇಕು ಹರಿದಾಸರು ಸಂಸಾರದೊಳಗೆ" ಎಂಬ ಕೀರ್ತನೆಗಳಲ್ಲೂ ವ್ಯಕ್ತವಾಗಿದೆ.

"ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ ಜೋಡು ಹೆಂಡಿರಂಜಿ ಓಡಿಹೋಗುವಾಗ ಗೋಡೆ ಬಿದ್ದು ಬಯಲಾಯಿತಲ್ಲ" ಎಂಬಲ್ಲಿ ಸಂಸಾರಿಯಾದವನು ಲೌಕಿಕ ಭೋಗದಲ್ಲಿ ಮುಳುಗಿ ಹೋಗಿ ದೇವರನ್ನು ನೆನೆಯದೆ ಕೊನೆಗೆ ಪಶ್ಚಾತ್ತಾಪ ಪಡುವ ಚಿತ್ರಣವಿದೆ.

"ಬಿಡದೆ ಎಳೆವಾಗ ಮಡದಿ ಮಕ್ಕಳು ಕಡೆಗೆ ತೊಲಗುವರು ಮರುಳೆ ಎಂಬಲ್ಲಿ ಈ ಸಂಸಾರದಲ್ಲಿ ಎಲ್ಲವೂ ನಶ್ವರ.ಸಾವು ಬಂದಾಗ ಅದನ್ನು ಯಾರೂ ತಡೆಯಲಾಗದು ಎಂಬ ಜೀವನ ಸತ್ಯವನ್ನು ಹೇಳಿದ್ದಾರೆ. ಮಾನವನು ಎಷ್ಟೇ ಸುಖ ಭೋಗಗಳಿಂದ ಮೆರೆದರೂ ಅಂತಿಮವಾಗಿ ಎಲ್ಲರಿಗೂ ಸಾವು ಬರುತ್ತದೆ. ಆಗ ಏನನ್ನೂ ಕೊಂಡೋಗಲು ಸಾಧ್ಯವಿಲ್ಲ. ಆಗ ಯಾರೂ ಜೊತೆ ಬರಲಾರರು. ಎಂಬ ಸತ್ಯವನ್ನು "ಕುರುಡು ನಾಯಿ ಸಂತೆಗೆ ಬಂತಂತೆ...... ಕೊಂಡೋಗುವಾಗ

ಯಾರಿಲ್ಲವಂತೆ", "ದೇಹ ತನ್ನದೆಂದು ಹಿಗ್ಗುವ ದೇಹ ಸಂಗಡ ಬಾರದು" ಮುಂತಾದ ಕೀರ್ತನೆಗಳಲ್ಲಿ ಕಾಣಬಹುದು. ಹೀಗೆ ಸಂಸಾರ ಹಾಗೂ ಬದುಕಿಗೆ ಸಂಬಂಧಿಸಿದಂತೆ ಅನೇಕ ಜೀವನಮೌಲ್ಯಗಳನ್ನು ಪುರಂದರದಾಸರ ಕೀರ್ತನೆಗಳಲ್ಲಿ ಗುರುತಿಸಿಬಹುದು.

ಪುರಂದರದಾಸರು ಅಂತರಂಗ ಶುದ್ಧಿಯ ಬಗೆಗೆ ಹೆಚ್ಚು ಒತ್ತನ್ನು ಕೊಟ್ಟವರು. ಅವರೆಂದೂ ಅಂಧಶ್ರದ್ಧೆಯನ್ನು ನಂಬಿದವರಲ್ಲ."ಮಲವ ತೊಳೆಯಬಲ್ಲರಲ್ಲದೆ ಮನವ ತೊಳೆಯಬಲ್ಲರೆ", "ಮುಸುರೆ ತೊಳೆಯಬೇಕು ಈ ಮನಸಿನ ಮುಸುರೆ ತೊಳೆಯಬೇಕು" ಎಂದು ಹಾಡಿದ್ದಾರೆ. 'ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರೆ' ಎಂದು ಜನರಲ್ಲಿರುವ, ಜನನಾಯಕರಲ್ಲಿರುವ ನೀಚಬುದ್ಧಿಯನ್ನು ಛೇಡಿಸಿದ್ದಾರೆ. ಹೀಗೆ ಪುರಂದರದಾಸರ ಅನೇಕ ಕೀರ್ತನೆಗಳಲ್ಲಿ ಸಾವು, ಬದುಕು, ಸಂಸಾರ, ಅನೇಕ ಜೀವನ ಮೌಲ್ಯಗಳನ್ನು ಒಳಗೊಂಡಿದ್ದು ಸಮಾಜದ ಓರೆಕೋರೆಗಳನ್ನು ಗುರುತಿಸಿ ತಿದ್ದುವ ಕಾಳಜಿಯನ್ನು ಕಾಣಬಹುದು. ಪುರಂದರದಾಸರ ಕೀರ್ತನೆಗಳಲ್ಲಿ ಬದುಕಿನ ಅನುಭವಗಳು ಮತ್ತು ಲೋಕೋದ್ಧಾರಕ್ಕಾಗಿ ಹಂಬಲಿಸುವ ಗುಣಗಳನ್ನು ತೀವ್ರವಾಗಿ ಕಾಣಬಹುದು.

೪.೪ ಧಾರ್ಮಿಕ ಪರಿಕಲ್ಪನೆಗಳು

"ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ" ಎಂದು ಪುರಂದರದಾಸರು ಜನರು ಒಳಿತಿಗಾಗಿ ಧರ್ಮಮಾರ್ಗವನ್ನು ಅನುಸರಿಸಬೇಕು ಎಂದು ಧರ್ಮಕ್ಕೆ ಪ್ರಾಧಾನ್ಯವನ್ನು ನೀಡಿ ಧಾರ್ಮಿಕ ಪರಿವರ್ತನೆಗೆ ಕಾರಣರಾದವರು. ಪ್ರತಿಯೊಬ್ಬನಲ್ಲೂ ದೇವರಿದ್ದಾನೆ ಎಂಬುದನ್ನು "ಒಡಲೆಂಬ ಮನೆಯಲಿ ನೀನು ಇರುತಿದ್ದಿ" ಎಂಬ ಹಾಡಿದ್ದಾರೆ. ಈ ಜೀವನವೆಂಬುದೊಂದು ದೋಣಿ. ಅದನ್ನು ನಡೆಸುವವನೇ (ಅಂಬಿಗ) ಪರಮಾತ್ಮ. ದೇಹವೇ ಹರಿಗೋಲು; ಆದರೆ ಅದಕ್ಕೆ ಒಂಭತ್ತು ಛಿದ್ರಗಳು. ಆದ್ದರಿಂದ ಜೀವನ ನೌಕೆಯ ಪಯಣಕ್ಕೆ ಅಂಬಿಗನನ್ನೇ ನಂಬಬೇಕು. ಅಂದರೆ ಎಲ್ಲವೂ ಪರಮಾತ್ಮನಿಂದಲೇ ಎಂಬ ತತ್ವ 'ಅಂಬಿಗ ನಾ ನಿನ್ನ ನಂಬಿದೆ' ಎಂಬ ಕೀರ್ತನೆಯಲ್ಲಿದೆ.

ಅಂಧಶ್ರದ್ಧೆ, ಆಚರಣೆಗಳನ್ನು ಅನೇಕ ದಾಸರು, ವಚನಕಾರರು ವಿರೋಧಿಸಿದ್ದಾರೆ. ಅಂತರಂಗದಲ್ಲಿ ಭಕ್ತಿ ಇಲ್ಲದೆ ಮಾಡುವ ಪೂಜೆ ವ್ಯರ್ಥ ಎಂಬುದನ್ನು ಪುರಂದರದಾಸರು ಅನೇಕ ಕೀರ್ತನೆಗಳ ಮೂಲಕ ಪ್ರತಿಪಾದಿಸಿದ್ದಾರೆ.

ನಮ್ಮ ಧರ್ಮಶಾಸ್ತ್ರವನ್ನು ಕೆಲವರು ಕೀಳಾಗಿ ಕಾಣುತ್ತಾರೆ. ಅಂತಹವರು ಅಜ್ಞಾನಿಗಳು ಎಂಬುದನ್ನು "ಇಲ್ಲಿ ನಮ್ಮ ಶಾಸ್ತ್ರ ಮಾರುವುದಿಲ್ಲ ಸುಮ್ಮನಿದ್ದರೆ ದಾರು ಕೇಳುವುದಿಲ್ಲ" ಎಂದು ಹಾಡಿದ್ದಾರೆ. "ಉದರವೈರಾಗ್ಯವಿದು ನಮ್ಮ ಪದುಮನಾಭನಲ್ಲಿ ಲೇಶ ಭಕುತಿಯಿಲ್ಲ" ಎಂಬಲ್ಲಿ 'ಉದರ ವೈರಾಗ್ಯ' ವು ಅಂತರಂಗದಲ್ಲಿ ಭಕ್ತಿ ಭಾವವಿಲ್ಲದೆ ಕೇವಲ ತೋರಿಕೆಯ ಡಂಭಾಚಾರವನ್ನು ಸುಂದರವಾಗಿ ಚಿತ್ರಿಸುತ್ತದೆ.

"ವ್ರಣವನಾಶಿಪ ಕುರುಡ ನೊಣ ಮೊಸರ ಕಂಡಂತೆ" ವ್ರಣವನ್ನು ಅಪೇಕ್ಷಿಸುವಂತಹ ಕುರುಡು ನೊಣವು ಮೊಸರನ್ನು ಕಂಡು ಆಸೆಯಿಂದ ಬಾಯಿ ಬಿಡುವಂತೆ ಸ್ವಾರ್ಥದಿಂದೊಡಗೂಡಿದ ಜನರ ಭಕ್ತಿಯನ್ನು ನಿಜವಾದ ಭಕ್ತಿಯಲ್ಲವೆಂದು ಅಲ್ಲಗಳೆದಿದ್ದಾರೆ.

ಅಂತೆಯೇ ಭಕ್ತಿಯಿಲ್ಲದ ಸ್ನಾನ ವ್ಯರ್ಥ ಅದರಿಂದ ಪರಿಶುದ್ಧವಾಗಲಾರದೆಂಬುದನ್ನು "ಊರೂರ ನದಿಗಳಲಿ ಬಾರಿಬಾರಿಗೆ ಮುಳುಗಿ ತೀರದಲ್ಲಿ ಕುಳಿತು ನೀ ಹಣೆಗೆ ನಿತ್ಯ"; "ತನುವ ನೀರೊಳಗದ್ದಿ ಫಲವೇನು ಮನದಲ್ಲಿ ದೃಢಭಕ್ತಿ ಇಲ್ಲದ ಮನುಜರು" ಎಂದು "ದಾನಧರ್ಮವನ್ನು ಮಾಡುವುದೇ ಸ್ನಾನ" ಮುಂತಾಗಿ ಹೇಳುವಲ್ಲಿ "ಸ್ನಾನವ ಮಾಡಿರೊ ಜ್ಞಾನ ತೀರ್ಥಗಳಲಿ" ಕೀರ್ತನೆಗಳಲ್ಲಿ 'ಸ್ನಾನ' ಪದ ಬಳಕೆಯಾಗಿದೆ. ಅಂತೆಯೇ ನಾವು ಪುಣ್ಯಕಾರ್ಯವನ್ನು ಮಾಡಬೇಕು. ಪುಣ್ಯ ಸಂಪಾದನೆಯ ಅರ್ಥದಲ್ಲಿ "ಬುತ್ತಿಯ ಕಟ್ಟೋ ಮನುಜ ಬುತ್ತಿಯ ಕಟ್ಟೋ ಬುತ್ತಿಯನ್ನು ಕಟ್ಟಿದರೆ ಎತ್ತಲಾದರು ಉಣಬಹುದು' ಎಂಬ ಕೀರ್ತನೆಯಲ್ಲಿ ಬಳಸಿದ 'ಬುತ್ತಿ' ಧರ್ಮಮಾರ್ಗದ ಬುತ್ತಿಯಾಗಿದೆ.ಮುತ್ತು ಕೊಳ್ಳಿರೋ ಜನರು ಮುತ್ತು ಕೊಳ್ಳಿರೋ ಎಂಬಲ್ಲಿ ಬಳಸಿದ ಮುತ್ತು ಇಲ್ಲಿ ವಿಶೇಷ ಅರ್ಥವನ್ನು ಹೊಂದಿದ್ದು ಅದು ದೇವರ ನಾಮದ ಮುತ್ತು ಆಗಿದೆ. ಈ ಬದುಕು ನಶ್ವರ. ಇಲ್ಲಿ ಯಾವುದೂ ಶಾಶ್ವತವಲ್ಲ ಎಂಬ ಸಂಗತಿಯನ್ನು "ಯಾರಿಗೆ ಯಾರುಂಟು ಎರವಿನ ಸಂಸಾರ ನೀರ ಮೇಲಣಗುಳ್ಳೆ ನಿಜವಲ್ಲ ಹರಿಯೇ" ಎಂಬ ಕೀರ್ತನೆಯಲ್ಲಿ ಪುರಂದರದಾಸರು ತುಂಬ ಸಶಕ್ತವಾಗಿ ನಿರೂಪಿಸಿದ್ದಾರೆ. "ಎರವಿನ ಸಂಸಾರ"ವು ಲೌಕಿಕ ಜೀವನದ ಪರಸ್ಪರ ಅವಲಂಬನೆಯ ಬದುಕನ್ನು ಸೂಚಿಸುತ್ತದೆ. ಅಂತೆಯೇ 'ನೀರ ಮೇಗಣ ಗುಳ್ಳೆ' ಎಂಬುದು ಮಾನವನ ಕ್ಷಣಿಕ ಬದುಕನ್ನು ಸೂಚಿಸುವುದರೊಂದಿಗೆ ಕಷ್ಟ ಕಾಲದಲ್ಲಿ ನಮಗೆ ಉಪಕಾರ ಮಾಡುವವರೆಂದರೆ ಪರಮಾತ್ಮ ಮಾತ್ರ ಎಂಬ ಅಂಶವನ್ನು ಸಾರುತ್ತದೆ. ಇಲ್ಲಿ ಎಷ್ಟೇ ಕಷ್ಟಗಳಿದ್ದರೂ ಅದನ್ನು ನಾವೇ ಎದುರಿಸಬೇಕು. ಅದಕ್ಕೆ ನಾವು ಇನ್ನೊಬ್ಬರ ಸಹಾಯ ಯಾಚಿಸಿದರೆ ಏನೂ ದೊರಕಲಾರದು ಎಂಬ ಸತ್ಯ ಪುರಂದರದಾಸರ ಈ ಕೀರ್ತನೆಯಲ್ಲಿ ಅಡಗಿದೆ.

ಆಧ್ಯಾತ್ಮಿಕದ ವಿಚಾರವೆಂದರೆ ಅವರಿಗೆ ಸಿಹಿಯಿದ್ದಂತೆ. ದೇವರ ನಾಮಸ್ಮರಣೆಯಿಂದ ಅಂತಹ ಸಿಹಿಯನ್ನು ಸೇವಿಸಿದ ಅನುಭವವಾಗಲು ಸಾಧ್ಯ. "ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ" ಎಂಬ ಕೀರ್ತನೆಯಲ್ಲಿ ಭಗವಂತನನ್ನು ಆಗಾಗ ನೆನೆದು ಸಂತಸಪಡುವುದನ್ನು ಕಾಣಬಹುದು. ದೈವತ್ವದ ಅಪೂರ್ವ ಅನುಭವವಾಗಲು ಗುರು ಬೇಕು. ಗುರುವಿಗೆ ನಾವು ಶರಣಾಗಬೇಕು. ಆಗ ಮಾತ್ರ ಗುರು ನಮ್ಮನ್ನು ದೈವತ್ವದೆಡೆಗೆ ಕೊಂಡೊಯ್ಯಲು ಸಾಧ್ಯ. ಗುರು ಸೇವೆಯ ಮಹತ್ವವನ್ನು "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬ ಕೀರ್ತನೆಯಲ್ಲಿ ಪ್ರತಿಪಾದಿಸಿದ್ದಾರೆ. ಇಲ್ಲಿ 'ಮುಕುತಿ' ಎಂಬುದು ಭವಬಂಧನದ ಬಿಡುಗಡೆಯ ಸಂಕೇತವಾಗಿದೆ.

ಪುರಂದರದಾಸರ ಕೀರ್ತನೆಗಳಲ್ಲಿ ಅವರ ಜೀವನಾನುಭವಗಳ ಅಭಿವ್ಯಕ್ತಿಯು ವೈವಿಧ್ಯಮಯ ಪ್ರತಿಮೆಗಳಾಗಿ ಹೊರಹೊಮ್ಮಿವೆ. ಕೀರ್ತನೆಗಳು ಸಹಜ ಪರಿಣಾಮಕಾರಿ ಶಕ್ತಿಯನ್ನು ಪಡೆದು ಆತ್ಮರೂಪವಾಗಿ ಪ್ರಕಟವಾಗಿವೆ. ಇಲ್ಲಿ ಯಾವುದೇ ಪ್ರತಿಮೆಗಳು ಕಾವ್ಯದಲ್ಲಿ ವೈವಿಧ್ಯವನ್ನು ತರುವುದಕ್ಕಾಗಿ ಪ್ರಯತ್ನಪೂರ್ವಕವಾಗಿ ಬಂದಿಲ್ಲ. ಬದಲಾಗಿ ಅವು ಪುರಂದರದಾಸರ ಅಂತರಂಗದ ಭಾವದ ಸಹಜ ಅಭಿವ್ಯಕ್ತಿಯಾಗಿ ಹೊರಹೊಮ್ಮಿವೆ. ಸಾಮಾಜಿಕತೆ, ಧಾರ್ಮಿಕತೆ ಒಂದಕ್ಕೊಂದು ಪೂರಕವಾಗಿದ್ದು ಇಲ್ಲಿ ಸಂಸಾರ, ದೈವತ್ವ, ಆತ್ಮನಿವೇದನೆ, ಆತ್ಮವಿಡಂಬನೆ, ಅಂಧ ಆಚರಣೆಗಳ ಬಗೆಗಿನ ವಿರೋಧ ಮುಂತಾದ ಅನೇಕ ಭಾವಗಳನ್ನು ನಾವು ಗುರುತಿಸಬಹುದು. ಈ ಪ್ರತಿಮಾ ಚಿತ್ರಗಳು ಮಾನವನ ನಿತ್ಯಜೀವನದಲ್ಲಿ ಕಂಡುಬರುವ ಅನೇಕ ಘಟನೆಗಳಿಗೆ ಹತ್ತಿರವಾಗಿದ್ದು ಮನುಷ್ಯನ ವರ್ತನೆಯ ವಿವಿಧ ಮುಖಗಳು ಹಾಗೂ ಮಾನವನ ಅಂತರಂಗದ ತುಮುಲಗಳನ್ನು, ಜಂಜಾಟಗಳನ್ನು ಒಳಗೊಂಡಿದ್ದು ಮನಶ್ಶಾಸ್ತ್ರೀಯ ಹಿನ್ನೆಲೆಗಳನ್ನು ಒಳಗೊಂಡಿದೆ. ಇಲ್ಲಿರುವ ಒಂದೊಂದು ಚಿತ್ರವೂ ಬದುಕಿನ ಅನುಭವದಿಂದ ಮೂಡಿದ ಚಿತ್ರಗಳಂತಿದ್ದು ಪರಸ್ಪರ ಒಬ್ಬರನ್ನೊಬ್ಬರು ಅರಿತುಕೊಳ್ಳುವ ಸಂಬಂಧವನ್ನು ಬೆಸೆಯುವ ವಾಹಕಗಳಾಗಿ ಕಾಣುತ್ತವೆ. ಮಾನವ ಸಹಜ ಗುಣಗಳನ್ನು ಕೀರ್ತನೆಗಳ ಮೂಲಕ ಸಾದೃಶ್ಯಗೊಳಿಸಿದ ಬಗೆಗಳನ್ನು ಪುರಂದರದಾಸರ ಕೀರ್ತನೆಗಳಲ್ಲಿ, ಪ್ರತಿಮಾನಿರ್ಮಿತಿಯಲ್ಲಿ ಕಾಣಬಹುದು. ಪುರಂದರದಾಸರ ಪ್ರತಿಮಾಲೋಕದ ವಸ್ತು ವಿನ್ಯಾಸವನ್ನು ಪರಿಶೀಲಿಸುವ ದೃಷ್ಟಿಯಿಂದ ಹಾಗೂ ಅಧ್ಯಯನದ ಅನುಕೂಲದ ದೃಷ್ಟಿಯಿಂದ ಸಸ್ಯಲೋಕ, ಪ್ರಾಣಿಲೋಕ, ಸಾಮಾಜಿಕ ಲೋಕ ಮತ್ತು ಧಾರ್ಮಿಕ ಲೋಕಕ್ಕೆ ಮುಖ್ಯವಾಗಿ

ಸಂಬಂಧಪಡುವಂತಹ ಕೀರ್ತನೆಗಳನ್ನು ವಿಂಗಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇದು ಕೇವಲ ಹೊರನೋಟದ ವಿಭಾಗ ಮಾತ್ರವಾಗಿದ್ದು ಅಂತಿಮವಾಗಿ ಎಲ್ಲವೂ ಧಾರ್ಮಿಕ ವಿಚಾರವನ್ನೇ ಪ್ರತಿನಿಧಿಸುವುದು ಗಮನೀಯ. ಒಟ್ಟಿನಲ್ಲಿ ಪುರಂದರದಾಸರ ಕೀರ್ತನೆಗಳನ್ನು ಗಮನಿಸಿದಾಗ ಸಸ್ಯಲೋಕ, ಪ್ರಾಣಿಲ್ಲೋಕ, ಧಾರ್ಮಿಕ ಲೋಕ ಮತ್ತು ಸಾಮಾಜಿಕ ಲೋಕಗಳಿಗೆ ಸಂಬಂಧಿಸಿದ ಪ್ರತಿಮೆಗಳಿದ್ದು ಅವು ಮನುಷ್ಯನ ಸ್ವಾಭಾವಿಕ ವರ್ತನೆಗಳ ವಿವಿಧ ರೂಪಗಳನ್ನು ಬಿಂಬಿಸುವ, ವಿಶ್ಲೇಷಿಸುವ, ಖಂಡಿಸುವ ವಿಧಾನ ಹಾಗೂ ಧಾರ್ಮಿಕತೆಯ ಲೇಪದೊಂದಿಗೆ ಮುನ್ನಡೆಯಬೇಕಾದ ವಿಚಾರವನ್ನೇ ಪ್ರತಿಪಾದಿಸುತ್ತವೆ.

ಟಿಪ್ಪಣಿಗಳು

೧. 'ಜೀವಿ' ಕುಲಕರ್ಣಿ, ಎ.ವಿ.ಗೋಕಾಕ : ಕಾವ್ಯದಲ್ಲಿ ಪ್ರತಿಮಾ ಸಂವಿಧಾನ ಪುಟ ೩೭.

೨. ಭದ್ರಗಿರಿ ಅಚ್ಯುತ ದಾಸರು, ಪುರಂದರದಾಸರ ಕೀರ್ತನೆಗಳಲ್ಲಿ ರೂಪಕಗಳು, ಮಧುಕರ 0ಯಕ್ಕುಂಡಿ (ಸಂ) ಪುರಂದರದಾಸ–ಕೀರ್ತನ, ಪುಟ ೫೮

ಅಧ್ಯಾಯ ೫

ಪುರಂದರದಾಸರ ಪ್ರತಿಮಾ ಜಗತ್ತು – ವಿವಿಧ ಮುಖಗಳು

ಅಧ್ಯಾಯ ೫

ಪುರಂದರದಾಸರ ಪ್ರತಿಮಾ ಜಗತ್ತು-ವಿವಿಧ ಮುಖಗಳು

ಪುರಂದರದಾಸರ ಪಾಂಡಿತ್ಯ, ಪ್ರತಿಮೆಗಳು ಜೀವನಾನುಭವದ ಆಳ ಅಗಾಧವಾಗಿದ್ದು ಅವುಗಳನ್ನು ನಾವು ಅವರ ಕೀರ್ತನೆಗಳಲ್ಲಿ ಕಾಣಬಹುದು. ಅವರು ನಾನಾ ರೀತಿಯ ಜನರನ್ನು ನೋಡಿದವರು. ಅವರ ವಿಚಿತ್ರ ಸ್ವಭಾವವನ್ನು ಕಂಡು ಅಲ್ಲಿಯೇ ಪ್ರತಿಕ್ರಿಯಿಸಿದವರು. ಪುರಂದರದಾಸರು ಜನರ ಉಪದೇಶಕ್ಕೆ ಕೀರ್ತನೆಗಳನ್ನು ಮಾಧ್ಯಮವಾಗಿ ಮಾಡಿಕೊಂಡರು. ಅವರು ಜನರಿಗೆ ಅರ್ಥವಾಗುವ ರೀತಿಯಲ್ಲಿ ಜೋಡಿಸಿ ಪೋಣಿಸಿದ ಪದ ಪುಂಜಗಳು ಅವರ ಕೀರ್ತನೆಯ ಹಾರದ ಮಣಿಗಳಾಗಿವೆ. ಈ ಕೀರ್ತನೆ ಗಳಲ್ಲೆಲ್ಲಾ ಅನೇಕ ಪ್ರತಿಮೆಗಳಿದ್ದು ಅವುಗಳು ವಿವಿಧ ವಸ್ತು ವಿಷಯಗಳನ್ನೊಳಗೊಂಡಿವೆ. ಅವುಗಳಲ್ಲಿ ಅನೇಕ ಸಸ್ಯ ಸಂಬಂಧೀ ಪ್ರತಿಮೆಗಳು, ಪ್ರಾಣಿ ಸಂಬಂಧೀ ಪ್ರತಿಮೆಗಳಿದ್ದು ಸಾಮಾಜಿಕ, ಧಾರ್ಮಿಕ, ನೀತಿಯನ್ನು ಒಳಗೊಂಡ ಪ್ರತಿಮೆಗಳೂ ಧಾರಾಳವಾಗಿವೆ.ಇವುಗಳನ್ನೆಲ್ಲಾ ಅಧ್ಯಯನದ ಅನುಕೂಲಕ್ಕೋಸ್ಕರ ಸಸ್ಯ ಜಗತ್ತು, ಪ್ರಾಣಿ ಜಗತ್ತು, ಸಾಮಾಜಿಕ ಜಗತ್ತು, ಧಾರ್ಮಿಕ ಜಗತ್ತು ಎಂಬ ನಾಲ್ಕು ಮುಖಗಳನ್ನಾಗಿ ಗುರುತಿಸಲಾಗಿದೆ.

೫.೧ ಸಸ್ಯ ಜಗತ್ತು

ಪುರಂದರದಾಸರು ಗೇರುಹಣ್ಣು, ಎಳ್ಳು ಕಾಳು, ಜಾಲಿಯುಮರ, ಬೇವು, ಬಾಳೆಹಣ್ಣು, ಮೂಲಂಗಿ, ಈರುಳ್ಳಿ ಮುಂತಾದ ಸಸ್ಯ ಹಾಗೂ ಸಸ್ಯ ಮೂಲ ವಸ್ತು ಗಳನ್ನು ತಮ್ಮ ಕೀರ್ತನೆಗಳಲ್ಲಿ ಸಂಕೇತ, ರೂಪಕಗಳಾಗಿ ಬಳಸಿದ್ದಾರೆ.ಜನರ ಆಚಾರ ವಿಚಾರಗಳನ್ನು ದೃಢಪಡಿಸಲು ಸಸ್ಯ ಜಗತ್ತಿನ ಸಂಕೇತಗಳನ್ನು ಬಳಸಿರುವುದಲ್ಲದೆ ಜಾಲಿಯ ಮರ, ಬೇವು ಮುಂತಾದುವನ್ನು ಆತ್ಮವಿಮರ್ಶೆಗಾಗಿ ಹಾಗೂ ಅಜ್ಞಾನ ದುರ್ಜನರ ರೀತಿ ನೀತಿಗಳನ್ನು ಖಂಡಿಸುವ ಸಾದನವಾಗಿ ಬಳಸಿದ್ದಾರೆ. ಇದರಿಂದ ಕಾವ್ಯ ಧ್ವನಿಯು ತೀಕ್ಷ್ಣವಾಗಿ ಹೊರಹೊಮ್ಮುವುದರೊಂದಿಗೆ ಅವರ ಕೀರ್ತನೆಗಳ ಕಾವ್ಯಗುಣದ ಮೌಲ್ಯವೂ ಹೆಚ್ಚಿದೆ.

ಈಸಬೇಕು ಇದ್ದು ಜಯಿಸಬೇಕು
ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಡದ್ದಾಗೆ

ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ
ಮೀರಿಯಾಸೆ ಮಾಡದಲೆ ಧೀರ ಕೃಷ್ಣನ ಭಕುತರೆಲ್ಲಾ

ಎಷ್ಟೇ ಲೌಕಿಕ ಸುಖ ಭೋಗಗಳಿದ್ದರೂ ಅವುಗಳನ್ನು ಅನುಭವಿಸುವುದರೊಂದಿಗೆ ಸಂಸಾರದಲ್ಲಿ ಮುಳುಗಿರಬಾರದು "ಇರಬೇಕು ಇಲ್ಲದಿರಬೇಕು ಸಂಸಾರದಲಿ" ಎಂಬ ದಾಸರ ವಾಣಿಯಂತೆ ಜನರು ಸಾಗಬೇಕು. ಹೀಗೆ ಗೇರುಹಣ್ಣಿನಲ್ಲಿ ಬೀಜವು ಅದರೊಂದಿಗೇ ಇದ್ದರೂ ಪ್ರತ್ಯೇಕವಾಗಿ ಕಾಣುವಂತೆ ಸಂಸಾರಿಗಳಾದವರು ಸಂಸಾರದಲ್ಲಿದ್ದುಕೊಂಡು ಎಲ್ಲಾ ಕಷ್ಟ ಸುಖಗಳನ್ನು ಎದುರಿಸಿ ಅತಿ ಆಸೆ ಮಾಡದೆ ಸಂಸಾರ ಸಾಗರದಲ್ಲಿ ಈಸಿ ಜಯಿಸಬೇಕು.

ಜಾಲಿಯ ಮರವಂತೆ ಧರೆಯಾಳು ದುರ್ಜನರು
ಜಾಲಿಯ ಮರವಂತೆ

ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂಥ
ಬಿಸಿಲಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ (೪೦೧)

ಒಂದು ಮರವು ಜನರಿಗೆ ಬಹೂಪಯೋಗಿಯಾಗಿದ್ದು ಹಸಿದು ಬಂದವರಿಗೆ ಹಣ್ಣು, ಸುವಾಸನೆ, ಬಳಲಿದವರಿಗೆ ನೆರಳು ನೀಡುತ್ತದೆ. ಮರವು ಪರಿಸರ ಸಂರಕ್ಷಣೆಗೂ ಕಾರಣೀಭೂತವಾಗಿದೆ. ಅಂತೆಯೇ ಸಜ್ಜನರಾದವರು ಪರೋಪಕಾರಿ
ಗಳಾಗಿದ್ದು ದೀನ ದಲಿತರ ಉದ್ಧಾರಕ್ಕಾಗಿ ಶ್ರಮಿಸುತ್ತಾರೆ. ಜಾಲಿಯ ಮರ ಒಂದು ನಿರುಪಯುಕ್ತ ಸಸ್ಯ. ಅಂತೆಯೇ ದುರ್ಜನರು ಯಾವುದೇ ಒಳ್ಳೆಯ ಕೆಲಸವನ್ನು ಮಾಡಲಾರರು ಎಂಬ ಸತ್ಯವನ್ನು ದಾಸರು ಜಾಲಿಯ ಮರದ ಪ್ರತಿಮೆಯ ಮೂಲಕ ಸೊಗಸಾಗಿ ಚಿತ್ರಿಸಿದ್ದಾರೆ.

ದುರ್ಜನರಾದವರು ಧಾರ್ಮಿಕ ಆಚಾರ ವಿಚಾರಗಳನ್ನು ಬಿಟ್ಟಿರುತ್ತಾರೆ. ಅದನ್ನೇ ದಾಸರು ಇನ್ನೊಂದು ಕೀರ್ತನೆಯಲ್ಲಿ ಹೀಗೆ ಹೇಳಿದ್ದಾರೆ.

ಮಾಯಾವಾದಿ ಗಂಡನೊಲ್ಲೆನೆ ಅವನ
ಮಾಯಾವಾಣಿ ಪೂಜೆ ಮಾಡಲಾರೆನಕ್ಕ

ಎಳೆ ತುಳಸಿಗಂಗೆ ಅಗ್ರೋದಕದಿ ನಿ
ರ್ಮಲವಾಗಿ ಪೂಜೆಯ ಮಾಡೆಂದರೆ
ಬಿಳಿ ನೀರ ಕುಡಿದು ಬತ್ತಲೆ ಬೇವು ಉಟ್ಟು
ಹುಳಿ ಮೂಲಂಗೀರುಳ್ಳಿ ತಿಂಬುವನೆ ಖೋಡಿ (೬೩೧)

ಭಕ್ತಿ ಭಾವವಿಲ್ಲದೆ ಪೂಜಿಸುವವರನ್ನು ದುರುಳರೆಂದು ಈ ಮೇಲಿನ ಕೀರ್ತನೆಯಲ್ಲಿ ಹೇಳಲಾಗಿದೆ. ತುಳಸಿ, ಗಂಗಾಜಲವನ್ನು ಬಳಸಿ ನಿರ್ಮಲ ಮನಸ್ಸಿನಿಂದ ಪೂಜೆ ಮಾಡಬೇಕಾದ ಜನರು ಶೇಂದಿಯನ್ನು ಕುಡಿದು ಪೂಜೆಗೆ ವರ್ಜ್ಯವಾದ ಹುಳಿ ,ಮೂಲಂಗಿ, ಈರುಳ್ಳಿಯನ್ನು ತಿಂದು ಪೂಜೆಯನ್ನು ಮಾಡುವವರು ದುರುಳರು ಎಂದಿದ್ದಾರೆ. ಇಲ್ಲಿ ಬಳಸಿದ ಬಿಳಿ ನೀರು ಅಮಲು ಪದಾರ್ಥವಾಗಿದ್ದು ಅದು ಅಜ್ಞಾನದ ಸಂಕೇತವಾಗಿದೆ. ಬೇವು ಎಂದೂ ತನ್ನ ಕಹಿ ಗುಣವನ್ನು ಬಿಡದು. ಅದು ದುರುಳರ ದುಷ್ಟತನದ ಸಂಕೇತವಾಗಿದೆ. ಹುಳಿ, ಮೂಲಂಗಿ, ಈರುಳ್ಳಿ ಪೂಜೆಗೆ, ಪೂಜೆ ಮಾಡುವವರಿಗೆ ವರ್ಜ್ಯವಾದ ಆಹಾರವಾಗಿದ್ದು ಅದು ಇಲ್ಲಿ ಅನಾಚಾರದ ಸಂಕೇತವಾಗಿ ಬಳಕೆಯಾಗಿದೆ. ಧಾರ್ಮಿಕ ಸಾಧನೆಗೆ ಅಡ್ಡಿಪಡಿಸುವ ಹೀನ ಸ್ಥಿತಿ ಈ ಪ್ರತಿಮೆಯಲ್ಲಿದೆ.

ದುರ್ಜನರು ಎಂದಿಗೂ ತಮ್ಮ ಹುಟ್ಟುಗುಣವನ್ನು ಬಿಡರು ಎಂಬುದನ್ನು ಪುರಂದರದಾಸರ ಈ ಕೀರ್ತನೆಯಲ್ಲಿ ಗಮನಿಸಬಹುದು.

ಬೇವು ಬೆಲ್ಲದೊಳಿಡಲೇನು ಫಲ ಹಾವಿಗೆ ಹಾಲೆರೆದರೇನು ಫಲ
ಕುಟಿಲವ ಬಿಡದಿಹ ಕುಜನರು ಮಂತ್ರವ ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಮನದಲಿ ವಿಠಲನ ನೆನೆದರೆಯೇನು ಫಲ (೬೬೩)

ಬೇವು ದುರ್ಜನರ ಸಂಕೇತವಾಗಿ ಬಂದರೆ. ಬೆಲ್ಲ ಸಜ್ಜನರ ಸಂಕೇತವಾಗಿದೆ. ಬೇವನ್ನು ಬೆಲ್ಲದೊಳಗಿಟ್ಟರೂ ಕೂಡ ಏನೂ ಫಲವಿಲ್ಲ .ಅದು ಎಂದೂ ತನ್ನ ಕಹಿಯನ್ನು ಬಿಡದು ಹಾವಿಗೆ ಹಾಲೆರೆದು ಫಲವಿಲ್ಲ. ಅಂತೆಯೇ ದುರ್ಜನರು ಮಂತ್ರ ಪಠಣವನ್ನು ಮಾಡಿದರೂ ಏನೂ ಫಲವಿಲ್ಲ.

ಅಂತರಂಗ ಶುದ್ಧಿಯಿಲ್ಲದೆ ಮಾಡುವ ಪೂಜೆ ವ್ಯರ್ಥ, ದುರ್ಜನರು ಎಂದೂ ಬದಲಾವಣೆಯನ್ನು ಹೊಂದಲಾರರು ಎಂಬ ಭಾವವನ್ನು ಈ ಮೇಲಿನ ಕೀರ್ತನೆ ಗಳಲ್ಲಿ ಕಾಣಬಹುದು.

ದಾಸರ ಪ್ರಕಾರ ಎಷ್ಟು ಕಷ್ಟಗಳಿದ್ದರೂ , ದು:ಖಗಳಿದ್ದರೂ ಜನರಲ್ಲಿರುವ ತಾಮಸ ಗುಣವೇ ಕಾರಣ. ಈ ತಾಮಸ ಗುಣವನ್ನು ಬಿಡದ ಜನರು ಎಂದಿಗೂ ಬದಲಾಗಲಾರರು.

ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಜೇನುಮಳೆಗರೆದರೆ ವಿಷ ಹೋಗುವುದೇನಯ್ಯಾ?
ಏನು ಓದಿದರೇನು ಏನು ಕೇಳಿದರೇನು
ಮನದೊಳಗಿನ ತಾಮಸ ಬಿಡದನಕ

ಎಂದು ಪ್ರಶ್ನಿಸಿದ್ದಾರೆ. ಪ್ರತಿಯೊಬ್ಬ ಮಾನವನಿಗೂ ಜೀವನ ಸಂಸ್ಕಾರ ಅಗತ್ಯ ಅದಕ್ಕಾಗಿ ತಾಮಸ ಗುಣವನ್ನು ಬಿಡಬೇಕು.

"ಸಜ್ಜನರ ಸಂಗ ನಮಗೆಂದಿಗಾಗುವುದೊ ದುರ್ಜನರ ಸಂಗದಲಿನೊಂದೆ ಹರಿಯೆ" ಎಂದು ಹಾಡಿ ದಾಸರು ಸಜ್ಜನರ ಸಹವಾಸಕ್ಕಾಗಿ ಹಾತೊರೆದಿದ್ದಾರೆ.

ಮನುಷ್ಯನಿಗೆ ಉತ್ತಮವಾದ ಆಹಾರ ಅಗತ್ಯವಾಗಿರುವಂತೆ ಆಸ್ತಿಕತೆ, ಧಾರ್ಮಿಕತೆಯೂ ಅತ್ಯಗತ್ಯ. ನಾವು ಧರ್ಮಮಾರ್ಗದಲ್ಲಿ ನಡೆಯಬೇಕು ಎಂಬ ನಿಲುವು ಪುರಂದರದಾಸರದು.

ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ
ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು
ಅನ್ನದಾನವ ಮಾಡುವರಾಗಿ ಅನ್ನಛತ್ರವನಿಟ್ಟವರಾಗಿ
ಅನ್ಯವಾರ್ತೆಯ ಬಿಟ್ಟವರಾಗಿ ಅನುದಿನ ಭಜನೆಯ ಮಾಡುವರಾಗಿ

ದಕ್ಷಿಣ ಕರ್ನಾಟಕದ ಮುಖ್ಯ ಆಹಾರಗಳಲ್ಲಿ ಒಂದಾದ ರಾಗಿಯನ್ನು ಕುರಿತ ಪ್ರಶ್ನೆಯಿಂದ ಈ ಕವಿತೆ ಆರಂಭವಾಗುತ್ತದೆ. ನಾಮಪದವನ್ನು ಕ್ರಿಯಾಪದಕ್ಕೆ ತಿರುಗಿಸಿ ಹೆಚ್ಚಿನ ಅರ್ಥವಂತಿಕೆ ಕಾಣುವುದು ಈ ಪದದ ವೈಶಿಷ್ಟ್ಯ . ರಾಗಿ ಎಂಬ ಶಬ್ದದ ಹಿಂದಾಗಲಿ ಅಥವಾ ಮುಂದಾಗಲಿ ಕೆಲವು ಶಬ್ದಗುಚ್ಛಗಳನ್ನಿರಿಸಿದರೆ ಅವು ಹೊಸ ಹುಟ್ಟು ಪಡೆಯುತ್ತವೆ. ಇಲ್ಲಿ ಪದಗಳ ಜೋಡಣೆಯ ಚಮತ್ಕಾರವನ್ನು, ಶ್ಲೇಷೆಯನ್ನು ಗುರುತಿಸಬಹುದು. ಮಾತಾಪಿತೃಗಳ ಸೇವಿಪರಾಗಿ ಪಾಪ ಕಾರ್ಯವ ಬಿಟ್ಟವರಾಗಿ, ಜಾತಿಯಲ್ಲಿ ಮಿಗಿಲಾದವರಾಗಿ, ನೀತಿ ಮಾರ್ಗದಲಿ ಖ್ಯಾತರಾಗಿ ಹೀಗೆಯೇ ಇಡೀ ಕೀರ್ತನೆಯುದ್ದಕ್ಕೂ ರಾಗಿ ಪದವನ್ನು ವಿಶಿಷ್ಟವಾಗಿ ಬಳಸಿದ್ದಾರೆ. ಭಿಕ್ಷೆಯ ರಾಗಿಯೂ ಸಾರ್ಥಕ್ಯವನ್ನು ಪಡೆಯುವಂತೆ ನಾವು ಒಳ್ಳೆಯ ಕೆಲಸ ವನ್ನು ಮಾಡುವಂತಹವರಾಗಿ ಸಾರ್ಥಕ್ಯವನ್ನು ಪಡೆಯಬೇಕು ಎಂಬುದನ್ನು ದಾಸರು ಈ ಕೀರ್ತನೆಯಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ.

ಪುರಂದರದಾಸರು ಹಣ್ಣಿನ ಪ್ರತಿಮೆಯ ಮೂಲಕ ಧರ್ಮದ ಮರ್ಮವನ್ನು ವಿವರಿಸಿದ್ದಾರೆ.

ಹಣ್ಣು ಬಂದಿದೆ ಕೊಳ್ಳಿರೊ ನೀವೀಗ
ಚಿನ್ನ ಬಾಲಕೃಷ್ಣನೆಂಬೊ ಕನ್ನೆ ಬಾಳೆ

ಹವ್ಯಕವ್ಯದ ಹಣ್ಣು ಸವಿದ ಸಕ್ಕರೆ ಹಣ್ಣು
ಭವರೋಗಗಳನೆಲ್ಲ ಕಳೆವ ಹಣ್ಣು (೯೩೧)

ಬಾಳೆಯ ಹಣ್ಣನ್ನು ಮಾಧ್ಯಮವಾಗಿ ಮಾಡಿಕೊಂಡು ಪುರಂದರದಾಸರು ಇಲ್ಲಿ ಧಾರ್ಮಿಕ ಉಪದೇಶವನ್ನು ಮಾಡುತ್ತಾರೆ. ಇಲ್ಲಿ ಹಣ್ಣು ಬಂದಿದೆ ಎಂಬುದು ವಿಶೇಷವಾದ ಅರ್ಥವನ್ನು ಪಡೆದಿದ್ದು ಅದು ಸಾಧಾರಣ ಹಣ್ಣಲ್ಲ. ಅಪೂರ್ವವಾದ ಚಿನ್ನ ಬಾಲಕೃಷ್ಣನೆಂಬ ಹಣ್ಣು. ವ್ಯಾಪಾರಿಗಳು ವಸ್ತುಗಳ ಗುಣಗಾನ ಮಾಡುವಂತೆ ದಾಸರು ಇಲ್ಲಿ ಹಣ್ಣಿನ ಮೂಲಕ ಬಾಲಕೃಷ್ಣನ

ಗುಣಗಾನ ಮಾಡಿದ್ದಾರೆ.ಬಾಳೆಯ ಹಣ್ಣನ್ನು ಸುಲಿದು ತಿನ್ನುವುದು ಬಹಳ ಸುಲಭ. ಅಂತೆಯೇ ಭವರೋಗಗಳನ್ನೆಲ್ಲಾ ಕಳೆಯುವ ಭಗವಂತನ ನಾಮವನ್ನು ಸೇವಿಸಿದರೆ ಹಳೆಯ ಪಾಪಗಳೆಲ್ಲವೂ ಪರಿಹಾರವಾಗುವುದು.

ಕೊಳೆತು ಹೋಗುವುದಿಲ್ಲ ಹುಳುತು ಹೋಗುವುದಲ್ಲ
ಕಳೆದು ಬಿಸಾಡಿಕೊಳ್ಳುವುದಲ್ಲ
ಅಳತೆ ಕೊಂಬುವುದಲ್ಲ ಗಿಳಿ ಕಚ್ಚಿ ತಿಂಬೋದಲ್ಲ
ಒಳಿತಾದ ಹರಿಯೆಂಬೊ ಮಾವಿನ ಹಣ್ಣು. (೯೩೧)

ಈ ಹಣ್ಣು ಕೊಳೆತುಹೋಗಲಾರದು, ಹುಳ ಹಿಡಿಯಲಾರದು, ಕಳೆದು ಹೋಗುವಂತಹದ್ದಲ್ಲ, ಪಕ್ಷಿಗಳು ತಿಂದು ಹೋಗಲಾರದು. ಅಂತಹ ರುಚಿಕರವಾದ ಮಾವಿನಹಣ್ಣು ಎಂದು ಶ್ರೀ ಹರಿಯನ್ನು ನೆನೆದಿದ್ದಾರೆ. ನಾವು ದೇವರ ಸ್ಮರಣೆಯೊಂದಿಗೆ ಒಳ್ಳೆಯ ಕೆಲಸವನ್ನು ಮಾಡಿದರೆ ಅದು ಶಾಶ್ವತ ಎಂಬುದನ್ನು ದಾಸರು ಮಾವಿನ ಹಣ್ಣಿನ ಪ್ರತಿಮೆಯ ಮೂಲಕ ಹೇಳಿದ್ದಾರೆ.

ಸಂಸಾರದಿಂದ, ಭವಬಂಧನದಿಂದ ಪಾರಾಗಲು ವಿಷವನ್ನು ಕುಡಿಯಲು ನಿರ್ಧರಿಸಿದ ಹೆಂಡತಿಯೊಬ್ಬಳ ಮಾತನ್ನು ಈ ಕೀರ್ತನೆ ನಿರೂಪಿಸುತ್ತದೆ.

ವಿಷ ಕುಡಿಯುತೇನೆ ನೋಡು ಗಂಡ ವಿಷ ಕುಡಿಯುತೇನೆ
ವಿಷ ಕುಡಿಯುತೇನೆ ಹಸನಾಗಿರುತಿರು
ಹಂಸದಂತೆ ದೇಹವ ಹತವ ಮಾಡುತ್ತೇನೆ .

ಕಬ್ಬಿನ ರಸದೊಳಗೆ ಗಸಗಸ ರುಬ್ಬಿಯೇ ನೀ ಬೆರೆಸಿ
ಹುಬ್ಬು ಜೇನುತುಪ್ಪ ತಂಪಿಗೆ ಏಲಕ್ಕಿ ಪುಡಿ ಹಾಕಿ
ಸಜ್ಜನರೆಲ್ಲ ಕೈ ಸೇರಿದ ಬಳಿಕ ಹಬ್ಬ ಬಂದಿತೆಂದು ಉಬ್ಬುಬ್ಬಿ ಈಗ (೬೩೨)

ಈ ವಿಷವು ಇಹದ ಪಾಲಿಗೆ ಸಾಯಿಸುವ ವಿಷವಾದರೂ ಅಮರತ್ವವನ್ನು, ಮೋಕ್ಷವನ್ನು ಪಡೆಯುವ ವಿಷವಾದ್ದರಿಂದ ಅಮೃತವಾಗುತ್ತದೆ. ಆದ್ದರಿಂದಲೇ ಕಬ್ಬಿನ ರಸ, ಏಲಕ್ಕಿ ಪುಡಿ, ಜೇನು ಮುಂತಾದವುಗಳನ್ನು ಹಾಕಿ ಸ್ವಾದಿಷ್ಟಭರಿತವಾಗಿ ಸಂಭ್ರಮದಿಂದ ಕುಡಿಯುವ ಹಂಬಲದ ಚಿತ್ರಣ ಇಲ್ಲಿದೆ. ಇಲ್ಲಿ ವಿಷವು ಅಮರತ್ವದ ಪ್ರತಿಮೆಯಾಗಿದೆ.
ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ಕೀರ್ತನೆ ಹೀಗಿದೆ:

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ
ವಿಠ್ಠಲನಾಮ ತುಪ್ಪವ ಕಲಸಿ ಬಾಯಿ ಚಪ್ಪರಿಸಿರೊ
ಒಮ್ಮನ ಗೋಧಿಯ ತಂದು ವೈರಾಗ್ಯ ಕಲ್ಲಲಿ ಬೀಸಿ
ಸುಮ್ಮನೆ ಸಜ್ಜಿಗೆಯ ತೆಗೆದು ಸಣ್ಣ ಶಾವಿಗೆಯ ಹೊಸೆದು (೬೦೫)

ಇಲ್ಲಿ ಪಾಯಸ, ಸಕ್ಕರೆ, ಗೋಧಿ, ಬೀಸುವಕಲ್ಲು ಇತ್ಯಾದಿ ಪದಗಳನ್ನು ಅರ್ಥವಂತಿಕೆಯಿಂದ ಬಳಸಿದ್ದು ಗಮನೀಯ.ಒಮ್ಮನಸ್ಸು ಎಂಬ ಗೋಧಿಯನ್ನು ಬೀಸಲು ವೈರಾಗ್ಯ ಎಂಬ ಕಲ್ಲು. ಇಲ್ಲಿ ಒಟ್ಟಾಗಿ ಪಾಯಸ ತಯಾರಿಯ ಚಿತ್ರಣವಿದ್ದು ಅದು ಸಿಹಿಯ, ಆನಂದದ ಧಾರ್ಮಿಕತೆಯನ್ನು ಚಿತ್ರಿಸುತ್ತದೆ.

ದೇವರ ಸ್ಮರಣೆಯನ್ನು ಮಾಡದಿದ್ದರೆ ಅವರು ಬದುಕಿ ಫಲವಿಲ್ಲ. ಅದನ್ನು ದಾಸರು ಈ ರೀತಿ ಹೇಳಿದ್ದಾರೆ.

ಹರಿಸ್ಮರಣೆಯಿಲ್ಲದೆ ಬಾಳಿ ಬದುಕಿದರೇನು ,
ನರಜನ್ಮದಲ್ಲಿ ಜನಿಸಿ ಫಲವೇನು ಹರಿಯೇ,
ಸುಳ್ಳನಾಡುವ ಕಳ್ಳನೊಡನೆ ಗೆಳೆತನವೇನು
ಹಳ್ಳ ಹೊಳೆಯಿಲ್ಲದಿಹ ವಳ್ಳವೇನು
ಎಳ್ಳು ನುರಿಯದವಂಗೆ ಗಾಣಿಗನೆಂಬ ಪೆಸರೇನು
ಹಳ್ಳಿಯಿಲ್ಲದವಂಗೆ ಹೆಗ್ಗಳಿಕೆಯೇನು. (೯೭೦)

ಹರಿಯ ಸ್ಮರಣೆಯನ್ನು ಮಾಡದೆ ಬದುಕಿ ಫಲವಿಲ್ಲವೆಂಬುದನ್ನು ಪುಷ್ಟೀಕರಿಸಲು ಕಳ್ಳ, ಗಾಣಿಗ ಮುಂತಾದ ಪದಗಳು ಮೂರ್ತರೂಪವಾಗಿ ಬಂದಿವೆ .ಒಟ್ಟಿನಲ್ಲಿ ಗೇರುಹಣ್ಣು, ಎಳ್ಳು, ಜಾಲಿಯ ಮರ ಬೇವು, ಹುಳಿ, ಮೂಲಂಗಿ, ಈರುಳ್ಳಿ ಹೀಗೆ ವಿವಿಧ ಬಗೆಯ ಸಸ್ಯ ಪ್ರತಿಮೆಗಳು ಮತ್ತು ರೂಪಕಗಳು ಮಾನವರ ಸ್ವಭಾವಗಳ ಗುಣವಿಮರ್ಶೆಗಾಗಿ, ಧಾರ್ಮಿಕ ವಿಚಾರಗಳನ್ನು, ಭಕ್ತಿಯನ್ನು, ಪ್ರತಿಪಾದಿಸಲು ಮೂಡಿ ಬಂದಿವೆ. ಈ ಪ್ರತಿಮೆಗಳಲ್ಲಿ ಪುರಂದರದಾಸರ ಅಂತರಂಗದ ಭಾವ ಪ್ರಕಟವಾಗಿವೆ.

೫.೨ ಪ್ರಾಣಿ ಲೋಕ

ಮಾನವನಿಗೆ ನಿರ್ಸಗದ ಜೊತೆ ನಿಕಟವಾದ ಸಂಬಂಧವಿದೆ. ಈ ಭೂಮಿಯ ಅದೆಷ್ಟೋ ಪ್ರಾಣಿ ಪಕ್ಷಿಗಳೊಂದಿಗೆ ಸಹಜವಾಗಿ ಬದುಕುವ ರೀತಿಯಲ್ಲಿ ಮನುಷ್ಯರ ವರ್ತನೆಗಳು ಕೆಲವೊಮ್ಮೆ ಪ್ರಾಣಿಗಳ ವರ್ತನೆಗಳನ್ನು ಅನುಕರಿಸಿದಂತೆ ಕಾಣುತ್ತದೆ.ಮನುಷ್ಯರ ನಡವಳಿಕೆಗಳ ಓರೆಕೋರೆಗಳನ್ನು ಗುರುತಿಸಿ, ಖಂಡಿಸಿ ವಿಮರ್ಶಿಸುವಲ್ಲಿ ಪುರಂದರದಾಸರು ಪ್ರಾಣಿ ಪ್ರತಿಮೆಗಳನ್ನು ಬಳಸಿದ್ದಾರೆ. ಮಾನವನ ಬದುಕಿನ ಅಸಾಹಾಯಕತೆ, ಮೌಲ್ಯ ಹೀನತೆ, ಅರ್ಥಹೀನತೆಗಳನ್ನು ದಾಸರು ತಮ್ಮ ಕೀರ್ತನೆಗಳಲ್ಲಿ ನಿವೇದನೆಯ ರೂಪದಲ್ಲಿ , ವಿಡಂಬನಾತ್ಮಕವಾಗಿ ಕೆಲವೊಮ್ಮೆ ತೀಕ್ಷ್ಣವಾಗಿ ನಿರೂಪಿಸಿದ್ದಾರೆ. ಪುರಂದರದಾಸರ ಕೀರ್ತನೆಗಳಲ್ಲಿ ನಾಯಿ, ಕತ್ತೆ, ಗಿಳಿ, ಮಂಗ, ಕರಿ, ತುರಗ, ಕಪ್ಪೆ, ಹಾವು, ಏಡಿ, ಹಲ್ಲಿ, ಕರಡಿ, ಕಾಗೆ, ಮೀನು, ಮೊಸಳೆ, ಹುಲಿ, ಮೇಕೆ, ಕುರಿ, ಕೋಳಿ, ಹದ್ದು, ಕೋಣ, ಬೆಕ್ಕು, ಒರಳೆ, ಸಿಂಹ, ಮುಂತಾದ ಅನೇಕ ಪ್ರಾಣಿ, ಪಕ್ಷಿ-ಸರೀಸೃಪಗಳು ಪ್ರತಿಮೆಗಳಾಗಿ ಬಂದಿವೆ.

ನಾಯಿ:ನಾಯಿಯನ್ನು ಪುರಂದರದಾಸರು ಅನೇಕ ಕೀರ್ತನೆಗಳಲ್ಲಿ ಸಂಕೇತಗಳಾಗಿ ಬಳಸಿದ್ದಾರೆ. ನಾಯಿಯು ಚಂಚಲ ಸ್ವಭಾವ, ಮೊಂಡುತನ, ಹೀನಭಾವ, ಅಜ್ಞಾನದ ಸಂಕೇತವಾಗಿದೆ.

ಕುರುಡು ನಾಯಿ ಸಂತೆಗೆ ಬಂತಂತೆ ಅದು ಏತಕೆ ಬಂತೋ
ಖಂಡ ಸಕ್ಕರೆ ಹಿತವಿಲ್ಲವಂತೆ ಖಂಡ ಎಲುಬು ಕಡಿದಿತಂತೆ
ಹೆಂಡಿರ ಮಕ್ಕಳ ನೆಚ್ಚಿತಂತೆ ಕೊಂಡು ಹೋಗುವಾಗ ಯಾರಿಲ್ಲವಂತೆ (೩೦೩)

ಇಲ್ಲಿ ನಾಯಿಯ ಪ್ರತಿಮೆಯ ಮೂಲಕ ಸಾರ್ಥಕ್ಯವನ್ನು ಕಂಡುಕೊಳ್ಳದ ಮಾನವನ ಬದುಕಿನ ಚಿತ್ರಣವನ್ನು ನೀಡಲಾಗಿದೆ. ಕುರುಡುನಾಯಿಯು ಅಜ್ಞಾನ, ಅಂಧಕಾರದ ಪರಾಕಾಷ್ಠೆಯ ಸಂಕೇತವಾಗಿದೆ. ನಾಯಿಯು ಸಿಹಿಯನ್ನು ಅಪೇಕ್ಷಿಸದು ಬದಲಾಗಿ ತುಂಡು ಎಲುಬು ತಿನ್ನುತ್ತದೆ. ಇಲ್ಲಿ ಹೆಂಡಿರ ಮಕ್ಕಳ ನೆಚ್ಚಿತಂತೆ, ಕೊಂಡು ಹೋಗುವಾಗ ಯಾರಿಲ್ಲವಂತೆ ಎಂಬುದು ಮಾನವನ

ಸಂಸಾರದ ಬಗೆಗಿನ ವ್ಯಾಮೋಹವನ್ನು ಚಿತ್ರಿಸುವುದರೊಂದಿಗೆ ಮಾನವನು ಸ್ವಾರ್ಥದಿಂದ ಎಷ್ಟೇ ಸಂಪತ್ತನ್ನು ಸಂಪಾದಿಸಿದರೂ ಇಹಲೋಕ ತ್ಯಜಿಸಿದಾಗ ಏನನ್ನೂ ಕೊಂಡೊಯ್ಯಲಾಗದು ಎಂಬ ವಿಚಾರವನ್ನು ಪ್ರಚುರಪಡಿಸುತ್ತದೆ.

ಭರದಿ ಅಂಗಡಿ ಹೊಕ್ಕಿತಂತೆ
ತಿರುವಿ ದೊಣ್ಣೆಯಲಿ ಇಕ್ಕಿದರಂತೆ
ಮರೆತರಿನ್ನು ವ್ಯರ್ಥವಂತೆ
ನರಕದೊಳಗೆ ಬಿದ್ದಿತಂತೆ

ಇತ್ಯಾದಿ ನಾಯಿಗೆ ಸಂಬಂಧಿಸಿದ ಅನೇಕ ಚಿತ್ರಣಗಳಿವೆ. "ಆದರೆ ಇದರಲ್ಲಿ ಬರುವ ಮಾನವ ಸಂಬಂಧಿಯಾದ ವಿವರಗಳು (ಹೆಂಡಿರ ಮಕ್ಕಳ ನೆಚ್ಚಿತಂತೆ, ವೇದವಾದಗಳನೋದಿತಂತೆ, ಮಾನವನಾಗಿ ಹುಟ್ಟಿತಂತೆ) ಇದೊಂದು ಶುದ್ಧ ಪ್ರತಿಮೆಯಾಗಿ ಬೆಳೆಯದಂತೆ ಮಾಡಿವೆ".೧

ನಾಯಿ ಬಂದದಪ್ಪಾ ಅಣ್ಣಾ ಅತ್ತಲಾಗಿರಿ
ನಾಯಿ ಅಂದರೆ ನಾಯಿ ಅಲ್ಲ ಮಾನವ ಜನ್ಮದ ಹೀನ ನಾಯಿ

ಕೊಟ್ಟ ಸಾಲವ ಕೊಡದವ ನಾಯಿ ಇಟ್ಟ ಭಾಷೆಯ ತಪ್ಪುವ ನಾಯಿ
ಕೆಟ್ಟ ಮೇಲೆ ಕುಳಿತುಕೊಂಡು ಅಟ್ಟಹಾಸದಿ ಬಗುಳುವ ನಾಯಿ

ಕೊಟ್ಟು ಕುದಿಯುವ್ರೋ ಕೆಟ್ಟ ನಾಯಿಇಟ್ಟ ಅನ್ನವ ಹಂಗಿಪ್ಪ ನಾಯಿ
ಪುಟ್ಟಿ ಮಾತೆ ಗರ್ಭದಲ್ಲಿ ಕೆಟ್ಟ ಕೃತ್ಯವ ಮಾಳ್ಪವ ನಾಯಿ

ಪಟ್ಟ ಸ್ತ್ರೀಯಳ ಬಿಟ್ಟವ ನಾಯಿಬಿಟ್ಟ ಸ್ತ್ರೀಯಳ ಆಳ್ವವ ನಾಯಿ
ದಿಟ್ಟ ಶ್ರೀ ಪುರಂದರ ವಿಠಲರಾಯನ ಮನ
ಮುಟ್ಟಿ ಭಜಿಸದೆ ಹೋದವ ನಾಯಿ **(೫೧೪)**

ಇಲ್ಲಿ ನಾಯಿಯನ್ನು ಮನುಷ್ಯ ಜನ್ಮದ ಹೀನರಿಗೆ ಸಂಕೇತವಾಗಿ ಬಳಸಲಾಗಿದೆ. ಈ ಕೀರ್ತನೆಯಲ್ಲಿ ಮಾನವರಾಗಿ ಹುಟ್ಟಿ ಭಾಷೆ ತಪ್ಪುವವರನ್ನು, ಕೊಟ್ಟ ಸಾಲವನ್ನು ಕೊಡದವರನ್ನು, ಇತ್ಯಾದಿಯಾಗಿ ಹೇಳುತ್ತಾ ಪುರಂದರ ವಿಠಲನನ್ನು ಮನಮುಟ್ಟಿ ಭಜಿಸದವ ನಾಯಿ ಎಂದಿದ್ದಾರೆ. ನಾಯಿ ಪದವನ್ನು ರೂಪಕವಾಗಿ ಬಳಸಿದರೂ ಮತ್ತೆ ನಾಯಿ ಅಂದರೆ ನಾಯಿ ಅಲ್ಲ ಮಾನವ ಜನ್ಮದ ಹೀನ ನಾಯಿ ಎಂದು ಹೀನ ಕೆಲಸ ಮಾಡುವ ಮಾನವರ ಬಗ್ಗೆ ನೇರವಾಗಿ ನುಡಿದಿದ್ದಾರೆ.

ನೇಮವನು ತಾಳುವರು ದಾನವ ಮಾಡುವರು
ಕಾಮ ಕ್ರೋಧ ಮದ ಮತ್ಸರ ಬಿಡದೆ ಇಂಥಾ
ನಾಯಿಕುನ್ನಿಗಳ ಕಂಡೊಳಗಿಟ್ಟುಕೊಂಡರೆ
ಕಾಶಿಯಲಿ ಮಿಂದ ಫಲವೇನಯ್ಯ (೩೭)

ನಿಯಮ ನಿಷ್ಠೆಯಿಂದಿರದೆ, ಕಾಮ ಕ್ರೋಧ, ಮದ ಮತ್ಸರಗಳಿಂದೊಡಗೂಡಿದವರನ್ನು ನಾಯಿಕುನ್ನಿಗಳೆಂಬುದಾಗಿ ಕರೆದಿದ್ದು ಇದು ಮಾನವರ ಹೀನತೆಯನ್ನು ,ಅಂತರಂಗ ಶುದ್ಧಿ ಇಲ್ಲದಿರುವುದನ್ನು ಚಿತ್ರಿಸುತ್ತದೆ. ಅಂತರಂಗ ಶುದ್ಧಿಯ ಅ
ಗತ್ಯವನ್ನು ದಾಸರು ಈ ಕೀರ್ತನೆಯಲ್ಲಿ ಚಿತ್ರಿಸಿದ್ದಾರೆ.

ಎಂತಹುದೋ ನಿನ್ನ ಭಕುತಿ

ಸಂತತ ನಿನ್ನ ದಾಸರ ಸಂಗ ಸುಖವೆನಗೆ

ಅನ್ನವನೆ ತೋರೆ ಚಿಟಿಕಿರಿಯೆ ಬಾಲವ ಬೀಸಿ

ಕುನ್ನಿ ಸುಳಿದಾಡಿ ಕಾಲ್ಗೆರಗುವ ತೆರದಿ

ಹೆಣ್ಣಿನಾಸೆಗೆ ಬಾಯಿಬಿಡುವ ಸ್ತ್ರೈಣವಾಡಿದರೆ

ಘನ್ನನಯ್ಯ ಮನ್ನಿಸೆಲೊ ಚಿನ್ನ ಬಹು

ಕುನ್ನಿ ಮನಕೆಂತಹುದು ನಿನ್ನಯ ಭಕುತಿ (೧೪೨)

ಅಂತರಂಗದಲ್ಲಿ ಭಕ್ತಿಯಿಲ್ಲದೆ ಸ್ವಾರ್ಥದಿಂದ ದೇವರ ಧ್ಯಾನವನ್ನು ಮಾಡುವವರ ಬಗೆಗಿನ ವಿಡಂಬನೆ ದಾಸರ ಈ ಕೀರ್ತನೆಯಲ್ಲಿದೆ. ಕುನ್ನಿ ಸುಳಿದಾಡಿ ಕಾಲ್ಗೆರಗುವ ಕುನ್ನಿಮನವು ಮಾನವನ ಸ್ವಾರ್ಥದ ಸಂಕೇತವಾಗಿದೆ.

ಎಲ್ಲಾನು ಬಲ್ಲೆನೆಂಬುವಿರಲ್ಲ ಅವಗುಣ ಬಿಡಲಿಲ್ಲ

ಸೊಲ್ಲಿಗೆ ಶರಣರ ಕಥೆಗಳ ಪೇಳುತ

ಅಲ್ಲದ ನುಡಿಯನು ನುಡಿಯುವಿರಲ್ಲ

ಕಾವಿಯನ್ನುಟ್ಟು ತಿರುಗುವಿರಲ್ಲ ಕಾಮನ ಬಿಡಲಿಲ್ಲ

ನೇಮ ನಿಷ್ಠೆಗಳ ಮಾಡುವಿರಲ್ಲ ತಾಮಸ ಬಿಡಲಿಲ್ಲ

ತಾವೊಂದರಿಯದೆ ಪರರನು ತಿಳಿಯದೆ

ಶ್ವಾನನ ಕುಳಿಯಲಿ ಬೀಳುವಿರಲ್ಲ (೧೭೪)

ಇಲ್ಲಿ ಜನರ ಅಹಂಕಾರದ ಚಿತ್ರಣವಿದೆ. ಎಲ್ಲವನ್ನು ತಿಳಿದವರೆಂಬ ಅಹಂಕಾರದ ಜನರು ಕೊನೆಗೆ ಅಧ:ಪತನವಾ

ಗುವುದನ್ನು 'ಶ್ವಾನನ ಕುಳಿಯಲಿ ಬೀಳುವಿರಲ್ಲ' ಎಂದಿದ್ದಾರೆ. ಇಲ್ಲಿ ಅಧ:ಪತನದ ಸಂಕೇತವಾಗಿ ಶ್ವಾನವು ಬಂದಿದೆ.

ಕಾಯಲಾರೆನುರಂಗ ಕಂಡವರ ಬಾಗಿಲನು

ನಾಯಿಕುನ್ನಿಯಂತೆ ನರರ ಪೀಡಿಸುತ (೨೯೭)

ಇಲ್ಲಿ ಲೌಕಿಕ ಜೀವನದ ಸ್ವಾರ್ಥ ಹಾಗೂ ಹತಾಶೆಯ ಜೀವನದ ಚಿತ್ರಣವಿದ್ದು ಪ್ರಾಪಂಚಿಕ ಬದುಕಿನಿಂದ ಬಿಡುಗಡೆ ಪಡೆಯಬೇಕೆಂಬ ಹಂಬಲವಿದೆ. ಇದೇ ಭಾವವನ್ನು ಇನ್ನೊಂದು ಕೀರ್ತನೆಯಲ್ಲಿ ಕಾಣಬಹುದು.

ಕಚ್ಚದಿರು ಎಲ್ಲರಲಿ ಕಚ್ಚದಿರು ಬಲ್ಲರಲಿ

ಕಚ್ಚದಿರು ಶ್ವಾನನಂತೆ ಆತ್ಮಾ (೧೦೫)

ಭವ ಬಂಧನದಿಂದ ಬಿಡುಗಡೆಗೆ ಹಾತೊರೆಯುವ ಚಿತ್ರಣಕ್ಕೆ ಪೂರಕವಾಗಿ ಇಲ್ಲಿ ಶ್ವಾನ ಬಳಕೆಯಾಗಿದೆ.

ಇಷ್ಟು ಪಾಪವ ಮಾಡಿದ್ದೆ ಸಾಕು

ಸೃಷ್ಟೀಶನೆ ಎನ್ನನುದ್ಧರಿಸಬೇಕು

ಸ್ನಾನ ಸಂಧ್ಯಾದಿಗಳ ಮಾಡದಲೆ ಮೆಯ್ಗೆಟ್ಟೆ

ಜ್ಞಾನ ಮಾರ್ಗವನಂತು ಮೊದಲೆ ಬಿಟ್ಟೆ

ಏನ ಪೇಳಲಿ ಪರರ ಮಾನಿನಿಗೆ ಮನಸಿಟ್ಟೆ

ಶ್ವಾನ ಸೂಕರನಂತೆ ಹೊರೆದೆ ಹೊಟ್ಟೆ (೧೨೨)

ದಾಸರ ಈ ಕೀರ್ತನೆಯಲ್ಲಿಯೂ ಭವ ಬಂಧನದ ಬಿಡುಗಡೆಯ ಹಂಬಲವಿದೆ. 'ಶ್ವಾನ ಸೂಕರನಂತೆ ಹೊರೆದೆ ಹೊಟ್ಟೆ' ಎಂದು ಸ್ವಾರ್ಥದ ಬದುಕಿನ ಬಗ್ಗೆ ಪರಿತಪಿಸುವ ಚಿತ್ರಣವಿದೆ.

ಪರೋಪಕಾರವನ್ನು ಮಾಡದ ದುರ್ಜನರ ಬಗ್ಗೆ ದಾಸರು ಈ ರೀತಿ ಹೇಳಿದ್ದಾರೆ.

ಜಾಲಿಯ ಮರವಂತೆ ಧರೆಯೊಳು ದುರ್ಜನರು
ಜಾಲಿಯ ಮರವಂತೆ

ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ (೪೦೧)

ಅನ್ನಕ್ಕಾಗಿ ನಾಯಿಯು ಜಗಳ ಮಾಡುತ್ತದೆ. ಅಂತೆಯೇ ದುರ್ಜನರು ತಮ್ಮ ಸ್ವಾರ್ಥಕ್ಕಾಗಿಯೇ ಇರುತ್ತಾರೆ. ಅವರೆಂದಿಗೂ ಇತರರಿಗೆ ಉಪಕಾರ ಮಾಡಲಾರರು. ಇದೇ ಭಾವ ಇನ್ನೊಂದು ಕೀರ್ತನೆಯಲ್ಲಿ ಹೀಗಿದೆ.

ಮಾತಿಗೆ ಬಾರದ ವಸ್ತು ಬಹಳಿದ್ದರೇನು
ಹೋತಿನ ಕೊರಳೊಳಗೆ ಮೊಲೆ ಇದ್ದರೇನು
ತಾನು ಉಣ್ಣದ ದ್ರವ್ಯ ತಾಳ್ಯದ್ದ ಇದ್ದರೇನು
ದಾನವಿಲ್ಲದ ಮನೆಯು ದೊಡ್ಡದಾದರೇನು
ಹೀನಗುಣವುಳ್ಳವಗೆ ಹಿರಿಯತನ ಬಂದರೇನು
ಶ್ವಾನನ ಮೊಲೆಯೊಳಗೆ ಹಾಲಿದ್ದರೇನು (೭೨೩)

ಪರೋಪಕಾರವನ್ನು ಮಾಡದವರಲ್ಲಿ ಏನಿದ್ದರೂ ವ್ಯರ್ಥ ಎಂಬುದರ ಸಂಕೇತವಾಗಿ 'ಶ್ವಾನನ ಮೊಲೆಯೊಳಗೆ ಹಾಲಿದ್ದರೇನು' ಎಂದಿದ್ದಾರೆ.

ಪಾಪಿ ಬಲ್ಲನೆ ಪರರ ಸುಖ ದು:ಖವ
ಕೋಪಿ ಬಲ್ಲನೆ ಶಾಂತ ಸುಗುಣದ ಘನವ

ಶ್ವಾನಬಲ್ಲುದೆ ರಾಗ ಭೇದಂಗಳ
----------------------------- (೭೦೦)

ಪಾಪಿಯಾದವನು ಇತರರ ಸುಖ ದು:ಖವನ್ನು ಅರಿಯಲಾರನು. ಅಂತೆಯೇ ಶ್ವಾನವು ರಾಗ ವೈವಿಧ್ಯವನ್ನು ಅರಿಯಲಾರದು. ಅದೇನಿದ್ದರೂ ಬೊಗಳುವುದು ಮಾತ್ರ. ಇಲ್ಲಿ ಮಾನವನ ಅಜ್ಞಾನದ ಸಂಕೇತವಾಗಿಯೇ ಶ್ವಾನವು ಬಂದಿದೆ.

ಕೆಂಡಕೆ ಒರಳೆ ಮುತ್ತುವುದುಂಟೇ
ಪಾಂಡುರಂಗನ ದಾಸರಿಗೆ ಭಯವುಂಟೆ
ಆನೆ ಸಿಂಹವ ಕೂಡೆ ಸ್ನೇಹ ಬೆಳೆಸುವುದುಂಟೆ
ಶ್ವಾನ ಹೆಬ್ಬುಲಿ ಕೂಡೆ ಸರಸವುಂಟೆ

ಸ್ವಾಮಿ ಶ್ರೀ ಪುರಂದರವಿಠಲರಾಯನ
ನಾಮಧಾರಿಗಳಿಗೆ ನರಕವುಂಟೆ. (೩೧೫)

ದೈವ ಭಕ್ತರಿಗೆಂದೂ ನರಕವಿಲ್ಲ ಎಂಬುದನ್ನು ಪ್ರತಿಪಾದಿಸಲು ಶ್ವಾನ ಹೆಬ್ಬುಲಿಕೂಡೆ ನರಕವುಂಟೆ ಎಂಬ ಚಿತ್ರಣವನ್ನು ದಾಸರು ನೀಡಿದ್ದಾರೆ. ಇಲ್ಲಿ ಶ್ವಾನ ಮತ್ತು ಹೆಬ್ಬುಲಿ ಎರಡು ವಿರುದ್ಧ

ದಿಕ್ಕುಗಳ ಸಂಕೇತವಾಗಿದೆ. ಅವೆರಡೂ ಒಂದಾಗದು ಅಂತೆಯೇ ದೈವ ಭಕ್ತರಿಗೆಂದೂ ನರಕವುಂಟಾಗದು ಎಂಬುದು ಇಲ್ಲಿನ ಭಾವ.

ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರಿ.
ಕಣಕಕುಟ್ಟೋ ಅಲ್ಲಿಗೆ ಹೋಗಿಹಣಿಕಿ ಇಣಿಕಿ ನೋಡುವಿರಿ
ಕಣಕಕುಟ್ಟೋ ಒನಕೆಲಿ ಬಡಿದರೆ
ಕೈಂ ಕುಂಯಿ ರಾಗವ ಮಾಡುವಿರಿ (೪೧೧)

ಸ್ವಾರ್ಥ, ಭ್ರಷ್ಟಾಚಾರವನ್ನು ಮಾಡುವ ನಾಯಕರ ಬಗೆಗಿನ ವಿಡಂಬನೆ ಈ ಕೀರ್ತನೆಯಲ್ಲಿದೆ. ಹೀಗೆ ಸಮಾಜದ ಅಂಕು ಡೊಂಕುಗಳನ್ನು ಶ್ವಾನ, ನಾಯಿ, ನಾಯಿಕುನ್ನಿ ಪದಗಳನ್ನು ಬಳಸಿ ವಿಭಿನ್ನವಾಗಿ ಪುರಂದರದಾಸರು ಚಿತ್ರಿಸಿದ್ದಾರೆ.

ಕಪಿ: ಮನಸ್ಸಿನ ಚಂಚಲ ಸ್ವಭಾವದ, ಇಂದ್ರಿಯ ವಿಕಾರದ ಪ್ರತಿರೂಪವಾಗಿ ಕಪಿಯನ್ನು ಚಿತ್ರಿಸಲಾಗಿದೆ.

ಎಂತು ನೋಡಿದರು ಚಿಂತೆ ಈ ಒಡಲು ನಿ
ಶ್ಚಿಂತರಾಗಿಹರ ಒಬ್ಬರನು ಕಾಣೆ
ಬ್ರಹ್ಮನಿಗೆ ಶಿರಹೋಗಿ ಬಾಡಿ ಬಳಲುವ ಚಿಂತೆ
ಮುನ್ನ ಮೂರುತಿಗೆ ಕಪಿಯಾದ ಚಿಂತೆ. (೧೪೩)

ಈ ಲೋಕದಲ್ಲಿ ಎಲ್ಲರಿಗೂ ಒಂದಲ್ಲ ಒಂದು ಚಿಂತೆ ಇದ್ದೇ ಇದೆ. ಇಲ್ಲಿ 'ಮಾರುತಿಗೆ ಕಪಿಯಾದ ಚಿಂತೆ' ಎಂದು ಹೇಳುವುದರ ಮೂಲಕ ಈ ಲೋಕದಲ್ಲಿ ಹುಟ್ಟಿದವರು ಪ್ರತಿಯೊಬ್ಬರೂ ಒಂದಲ್ಲ ಒಂದು ವಿಚಾರದಲ್ಲಿ ಕಷ್ಟಪಡಬೇಕು. ಪ್ರತಿಯೊಬ್ಬರಿಗೂ ಚಿಂತೆ ಇದ್ದರೂ ಪುರಂದರ ವಿಠಲನಂತೆ ನಿಶ್ಚಿಂತರಾಗಿರಬೇಕು. ಪ್ರತಿಯೊಬ್ಬರೂ ಕಷ್ಟವನ್ನೆದುರಿಸಿ ಬದುಕನ್ನು ಸಾಗಿಸಬೇಕು. ಅದಕ್ಕಾಗಿ ಚಿಂತಿಸಬಾರದು ಎಂಬ ತತ್ವವನ್ನು ನಾವಿಲ್ಲಿ ಕಾಣಬಹುದು.

ಕೋತಿಹಾಗೆ ಕುಣಿದಾಡಬೇಡ
ರೀತಿಮಾರ್ಗವ ಹಿಡಿಯೆಲೊ ಮೂಢ
ಆತುರ ಹೆಚ್ಚಿ ಕೂಗಾಡಬೇಡ
ಪಾತಕ್ಕೆ ಈಜನ್ಮ ಬಿಡದಿರೋ ಮೂಢ (೩೪೧)

ಕೋತಿಯು ಕುಣಿದಾಡುವುದು ಅದರ ಗುಣ. ಆದರೆ ಮಾನವರು ಅದರಂತೆ ಕುಣಿದಾಡಬಾರದು. ಮಾನವರು ಉತ್ತಮ ನಡೆ ನುಡಿಯೊಂದಿಗೆ ಒಳ್ಳೆಯ ಬದುಕನ್ನು ಸಾಗಿಸಬೇಕು.ಸಂಸಾರದ ವ್ಯಾಮೋಹದಲ್ಲಿ ಮುಳುಗಿ ಸ್ವಾರ್ಥ ಜೀವನವನ್ನು ನಡೆಸುವ ಮಾನವರನ್ನು ಪುರಂದರದಾಸರು ಈ ಕೀರ್ತನೆಯಲ್ಲಿ ಖಂಡಿಸುತ್ತಾರೆ.

ಏಕೆ ಚಿಂತಿಸುತಿದ್ದಿ ಕೋತಿ ಮನವೇ
ಲೋಕನಾಥನ ನೆನೆದು ಸುಖಿಯಾಗಿರು ಮನವೇ (೧೯೧)

ದೇವರನ್ನು ನೆನೆಯದೆ ಸುಮ್ಮನೆ ಸಣ್ಣಪುಟ್ಟ ಸಮಸ್ಯೆಗಳಿಗೆ ಚಿಂತಿಸುವ ಮಾನವರ ಮನಸ್ಸಿನ ಸಂಕೇತವಾಗಿ ಇಲ್ಲಿ ಕೋತಿಯನ್ನು ಬಳಸಲಾಗಿದೆ.

ಎಂತಹದೋ ನಿನ್ನ ಭಕುತಿ
ಸಂತತ ನಿನ್ನ ದಾಸರ ಸಂಗ ಸುಖವೆನಗೆ

ಹೋಗಿ ಬಾರೈ ಎಂದಾಚೆಗೆಳೆದರೂ ತಲೆ
ಬಾಗಿ ನಿಂತೂ ಅಲ್ಲಿ ಮೌನವಾಗಿ
ಓಗರಕೆ ಮನೆ ಮನೆಯ ತಪ್ಪದೆ ತಿರುಗುವ ಜೋಗಿಯ ಕೈಯ ಕಟ್ಟೊಡೆದ ಕೋ
ಡಗದ ಮನಕೆಯೆಂತಹುದು ನಿನ್ನಯ ಭಕುತಿ (೧೪೨)

ಇಲ್ಲಿ ಏಕಾಗ್ರತೆಯಿಲ್ಲದೆ ದೇವರ ಧ್ಯಾನವನ್ನು ಮಾಡುವ ಭಕ್ತನ ಭಕ್ತಿಯನ್ನು ಪುರಂದರದಾಸರು ಪ್ರಶ್ನಿಸಿದ್ದಾರೆ.ಜೋಗಿಯೊಂದಿಗೆ ಮನೆ ಮನೆ ತಿರುಗುವ ಕೋಡಗನಂತಹ ಮನವು ಇನ್ನಷ್ಟು ಚಂಚಲ ಸ್ವಭಾವವನ್ನು ಬಿಂಬಿಸುತ್ತದೆ.

ಕತ್ತೆಗೆ ಹೂರಣದ ರುಚಿ ತಿಳಿಯಲಿಲ್ಲ
ತೊತ್ತಿಗೆ ಪತಿವ್ರತೆ ಗುಣ ಬರಲಿಲ್ಲ
ಮುತ್ತಿನ ಹಾರ ಕಪಿಗೆ ಸಲ್ಲ
ಕುತ್ತಿಗೆ ಕೊಯ್ವಗೆ ಕರುಣವೇ ಇಲ್ಲ (೧೧೪)

ಕತ್ತೆಗೆ ಹೂರಣದ ರುಚಿ ತಿಳಿಯಲಾರದು. ಸೂಳೆಯಾದವಳಿಗೆ ಪತಿವ್ರತೆಯ ಗುಣವು ತಿಳಿಯದು ಅಂತೆಯೇ ಮುತ್ತಿನ ಹಾರವನ್ನು ಕಪಿಗೆ ಹಾಕುವುದು ಶ್ರೇಯಸ್ಕರವಲ್ಲ ಎಂದು ಇಲ್ಲಿ ಅಪಾತ್ರರಾದ ಮಾನವರಿಗೆ ನಮ್ಮ ಶಾಸ್ತ್ರದ, ಧರ್ಮದ ಒಳತಿರುಳು ಅರ್ಥವಾಗದೆಂಬುದನ್ನು ಹೇಳಲಾಗಿದೆ.

ಕನಕದಾಸನ ಮೇಲೆ ದಯಮಾಡಲು ವ್ಯಾಸ
ಮುನಿ ಮಠದವರೆಲ್ಲ ದೂರಿಕೊಂಬುವರೊ

ಮಾಣಿಕವು ಕೋಡಗನ ಕೈಯಲ್ಲಿ ಇದ್ದಂತೆ
ಕೋಣನಿದಿರಿಗೆ ಕಿನ್ನರಿಯ ಮೀಟಿದಂತೆ
ವೇಣುಧ್ವನಿ ಬಧಿರನ ಬಳಿ ಮಾಡಿದಂತೆ ಕಣ್ಣು
ಕಾಣದವನಿಗೆ ಕನ್ನಡಿಯ ತೋರಿದಂತೆ (೨೭೨)

ಈ ಕೀರ್ತನೆಯಲ್ಲಿ ದಾಸರು ಕನಕದಾಸರು ಬಾಳೆಹಣ್ಣು ತಿನ್ನಲು ಹೊರಟ ಕಥೆಯನ್ನು ಹೇಳುವುದರೊಂದಿಗೆ ಅಜ್ಞಾನಿಗಳಿಗೆ ತಮ್ಮಲಿರುವ ಶಕ್ತಿ ಗೊತ್ತಾಗದು ಮತ್ತು ಅಜ್ಞಾನಿಗಳಿಗೆ ಮಾಡುವ ಉಪದೇಶವು ವ್ಯರ್ಥ ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ.ಕೋಡಗನಲ್ಲಿರುವ ಮಾಣಿಕ್ಯ ಕೋಣನೆದುರು ಬಾರಿಸುವ ಕಿನ್ನರಿ, ಕಿವುಡುತನ ಬಳಿಯ ಕೊಳಲು ವಾದನ, ಕುರುಡನಿಗೆ ತೋರುವ ಕನ್ನಡಿ ಇವ್ಯಾವುದೂ ಉಪಯೋಗಕ್ಕೆ ಬಾರದು. ಅಂತೆಯೇ ಧೂರ್ತರಾದ ವಿದ್ವಾಂಸರ ಬಳಿಯಿರುವ ಪಾಂಡಿತ್ಯವೂ ಉಪಯೋಗಕ್ಕೆ ಬಾರದು ಎಂಬ ವಿಚಾರವನ್ನು ಈ ಕೀರ್ತನೆಯಲ್ಲಿ ಕಾಣಬಹುದು.

ಮೂಢಬಲ್ಲನೆ ಜ್ಞಾನ ದೃಢ ಭಕ್ತಿಯ

ಕಾಡಕಪಿ ಬಲ್ಲುದೇ ಮಾಣಿಕದ ಬೆಲೆಯ (೭೩೨)

ಕಾಡಿನಲ್ಲಿರುವ ಕಪಿಗೆ ಮಾಣಿಕ್ಯದ ಬೆಲೆ ಅರಿಯಲಾರದು. ಅಂತೆಯೇ ಅಜ್ಞಾನಿಗಳಿಗೆ, ಮೂಢರಿಗೆ ಜ್ಞಾನ, ಭಕ್ತಿ ಮತ್ತು ಅದರ ಮಹತ್ವ ತಿಳಿಯಲಾರದು.

ಪಾಪಿ ಬಲ್ಲನೆ ಪರರ ಸುಖ ದು:ಖವ
ಕೋಪಿ ಬಲ್ಲನೆ ಶಾಂತ ಸುಗುಣದ ಘನವ
ಹೇಡಿಬಲ್ಲನೆ ರಣದ ಸಾಹಸದ ಶೌರ್ಯವನು
ಕೋಡಗವು ಬಲ್ಲದೆ ರತ್ನದ ಬೆಲೆಯನು (೬೦೦)

ಪಾಪಿಗಳಿಗೆ ಇನ್ನೊಬ್ಬರ ಕಷ್ಟ ಸುಖ ಅರಿಯದು. ಅಂತಯೇ ರತ್ನದ ಬೆಲೆಯನ್ನು ಮಹತ್ವವನ್ನು ಕಪಿ ಅರಿಯದು.
ಹಾಗೆಯೇ ಅಜ್ಞಾನಿಗಳಾದವರಿಗೆ ಒಳ್ಳೆಯ ವಿಚಾರಗಳ ಮಹತ್ವ ತಿಳಿಯದು.

ಕುರುಡು ನಾಯಿ ಸಂತೆಗೆ ಬಂತಂತೆ ಅದು ಏತಕೆ ಬಂತೋ
ಮಂಗನ ಕೈಯ ಮಾಣಿಕ್ಯವಂತೆ ಹಾಂಗೂ
ಹಿಂಗೂ ಕಳೆದಿತಂತೆ. (೩೦೩)

ಈ ಕೀರ್ತನೆಯಲ್ಲೂ ಮನುಷ್ಯರ ಅಜ್ಞಾನದ ಚಿತ್ರಣವನ್ನು ಕಾಣಬಹುದು. ಹೀಗೆ ಅನೇಕ ಕೀರ್ತನೆಗಳಲ್ಲಿ ಮಂಗನ ಪ್ರತಿಮೆಯನ್ನು ಮನುಷ್ಯನ ಅಜ್ಞಾನ, ಚಂಚಲ ಸ್ವಭಾವದ ಸಂಕೇತವಾಗಿ ಬಳಸಲಾಗಿದೆ.

ಕತ್ತೆ: ಇದು ಮಾನವನ ದಡ್ಡತನ, ವ್ಯರ್ಥ ಭಾವನೆಗಳಿಗೆ ಪ್ರತಿರೂಪವಾಗಿದೆ.

ಕರಿತುರಗವಿರಲು ಬಿಟ್ಟು ಕೆಡಹುವ ಕತ್ತೆಯೇರಲು ಬೇಡವೋ
ಪರಮಪುರುಷ ಪುರಂದರ ವಿಠಲನಿರಲು
ನರರ ಭಜಿಸಬೇಡವೋ ಎಂದೆಂದಿಗು (೨೪)

ಬಲಶಾಲಿಯಾದ ಆನೆ, ಕುದುರೆಗಳಿರುವಾಗ ಅದನ್ನು ಬಳಸುವುದು ಬಿಟ್ಟು ಕೆಡಹುವ ಕತ್ತೆಯನ್ನೇರುವುದು ಹೇಡಿತನದ ಪರಮಾವಧಿ. ಅಂತೆಯೇ ಎಲ್ಲರನ್ನು ರಕ್ಷಿಸುವ ಪರಮ ಪುರುಷ ಪುರಂದರ ವಿಠಲನಿರುವಾಗ ಅವನನ್ನು ಭಜಿಸದೇ ನರರನ್ನು ಭಜಿಸುವುದು ಮೂರ್ಖತನದ ಲಕ್ಷಣ.. ವ್ಯಕ್ತಿ ಪೂಜೆಯ ಬಗೆಗಿನ ವಿರೋಧ ಪುರಂದರದಾಸರ ಈ ಕೀರ್ತನೆಯಲ್ಲಿ ಚಿತ್ರಿತವಾಗಿದೆ

ಕತ್ತೆಗೆ ಹೂರಣದ ರುಚಿ ತಿಳಿಯಲಿಲ್ಲ
ತೊತ್ತಿಗೆ ಪತಿವ್ರತೆಗುಣ ಬರಲಿಲ್ಲ
ಮುತ್ತಿನ ಹಾರ ಕಪಿಗೆ ಸಲ್ಲ
ಕುತ್ತಿಗೆ ಕೊಯ್ವಗೆ ಕರುಣವೇ ಇಲ್ಲ (೧೧೪)

ಕತ್ತೆಗೆ ಕಡುಬಿನೊಳಗಿನ ಹೂರಣದ ರುಚಿ ತಿಳಿಯದು. ಸೂಳೆಗೆ ಪತಿವ್ರತೆಯ ಗಣಗಳೂ ಅರಿಯವು. ಮುತ್ತಿನ ಹಾರವು ಕಪಿಗೆ ಹಿಡಿಸದು. ಹಿಂಸೆಯನ್ನು ಮಾಡುವವರಿಗೆ ಕರುಣೆಯೆಂದೂ ಬರದು. ಅಂತೆಯೇ ಅನ್ಯಾಯವನ್ನು ಮಾಡುವವರಿಗೆ ಮೋಕ್ಷವೆಂದೂ ಸಿಗದು. ಇಲ್ಲಿ ನಿತ್ಯ ಬದುಕಿನ ಅವಲೋಕನದ ಸಂಕೀರ್ಣ ಚಿತ್ರಗಳಿದ್ದು ಕತ್ತೆಯ ದಡ್ಡತನದ ಚಿತ್ರವು ಅತ್ಯಂತ ಸಹಜ ರೀತಿಯಲ್ಲಿ ಚಿತ್ರಿತವಾಗಿದೆ.

ಪಾಪಿ ಬಲ್ಲನೆ ಪರರ ಸುಖ ದು:ಖವ
ಕೋಪಿ ಬಲ್ಲನೆ ಶಾಂತ ಸುಗುಣದ ಘನವ
ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ
ಮೃತ್ಯುಬಲ್ಲಳೆ ವೇಳೆ ಹೊತ್ತೆಂಬುದ (೬೦೦)

ಕತ್ತೆಯು ಕಸ್ತೂರಿಯನ್ನು ಹೊತ್ತುಕೊಂಡು ಹೋದರೂ ಅದರ ಪರಿಮಳವನ್ನು ಅರಿಯದು. ಅಂತೆಯೇ ಅಜ್ಞಾನಿಗಳು ತಮ್ಮ ನಡುವೆ ಎಷ್ಟೇ ಉತ್ತಮ ವಿಚಾರಗಳಿದ್ದರೂ ಅದರ ಮಹತ್ವವನ್ನು ಅರಿಯದೇ ಕೆಲಸವನ್ನು ಮಾಡುತ್ತಾರೆ.ಜನರ ಮೌಢ್ಯವನ್ನು ದಾಸರು ಇಲ್ಲಿ ವಿಮರ್ಶಿಸಿದ್ದಾರೆ.

ಆನೆ: ಇದು ಶೌರ್ಯಕ್ಕೆ ಸಂಕೇತವಾಗಿದೆ.

ಆನೆ ಬಂದಿತಮ್ಮ ಮರಿಯನೆ ಬಂದಿತಮ್ಮಾ
ತೊಲಗಿರೆ ತೊಲಗಿರೆ ಪರಬ್ರಹ್ಮ ಬಲು
ಸರಮಣಿ ಕಡಕೊಂಡು ಬಂತಮ್ಮ

ಕಪಟನಾಟಕದ ಮರಿಯಾನೆ
ನಿಕಟಸಭೆಯಲಿ ನಿಂತಾನೆ ಶಕಟನ ಬಂಡಿಯ ಮುರಿದಾನೆ
ಕಪಟ ನಾಟಕದಿಂದ ಸೋದರಮಾವನ
ನಕಟಕಟೆನ್ನದೆ ಕೊಂದಾನೆ (೬೯)

ಇಲ್ಲಿ ಆನೆ ಪದವನ್ನು ಪುರಂದರದಾಸರು ನಾಮಪದ ಮತ್ತು ಕ್ರಿಯಾಪದವಾಗಿಯೂ ಬಳಸಿರುವುದು ಅವರ ಕವಿತಾ ಪೌಢಿಮೆಗೆ ಸಾಕ್ಷಿ. ಆನೆಯು ಶೌರ್ಯದ ಸಂಕೇತವಾಗಿದ್ದು ಶ್ರೀ ಕೃಷ್ಣನ ಶೌರ್ಯದ ಸಂಕೇತವಾಗಿಯೂ ಬಂದಿದೆ.

ಸುಲಭವಲ್ಲವೊ ಮಹಾನಂದ ತನ್ನೊಳಗೆ ತಾ
ತಿಳಿಯಬೇಕು ಗುರುದಯದಿಂದ
ಬೆಕ್ಕನ್ನು ಇಲಿನುಂಗುವ ತನಕ ಕಡು
ರಕ್ಕಸಿಯ ಕಂಡು ಗಿಣಿ ನುಂಗುವ ತನಕ
ಮಕ್ಕಳ ಭಕ್ಷಿಸುವತನಕ ಮದ
ಸೊಕ್ಕಿದ ಗಜವನ್ನು ನರಿ ನುಂಗುವ ತನಕ (೯೧೧)

ಮದ ತುಂಬಿದ ಆನೆಯನ್ನು ನರಿ ನುಂಗುವುದು ಅಸಾಧ್ಯವಾದ ಮಾತು. ಅಂತೆಯೇ ಜ್ಞಾನಾರ್ಜನೆಗೆ ಅಂತ್ಯವೆಂಬುದಿಲ್ಲ. ಜ್ಞಾನವನ್ನು ಗಳಿಸಲು ಕಠಿಣ ಪರಿಶ್ರಮ ಅಗತ್ಯ. ನಿರಂತರವಾದ ಕಲಿಕೆಯ ಮಹತ್ವವನ್ನು ದಾಸರು ಇಲ್ಲಿ ವಿಮರ್ಶಿಸಿದ್ದಾರೆ.

ಕುದುರೆ: ಕುದುರೆಯು ಚುರುಕುತನದ ಸಂಕೇತವಾಗಿದೆ.

ಕರಿತುರಗವಿರಲು ಒಟ್ಟು ಕೆಡಹುವ ಕತ್ತೆಯೇರಲು ಬೇಡವೊ
ಪರಮ ಪುರುಷ ಪುರಂದರ ವಿಠಲನಿರಲು
ನರರ ಭಜಿಸಬೇಡವೊ ಎಂದೆಂದಿಗೂ (೨೪)

ಆನೆ ಕುದುರೆಗಳು ಇರುವಾಗ ಅವನ್ನು ಬಳಸದೆ ಕತ್ತೆಯನ್ನೇರುವುದು ಮೂರ್ಖತನ. ಇಲ್ಲಿ ಚಾಣಾಕ್ಷತನದ ಸಂಕೇತವಾಗಿ ಕುದುರೆಯನ್ನು ದಾಸರು ಬಳಸಿದ್ದಾರೆ.

ಬತ್ತಲೆ ಕುದುರೆಯ ಹತ್ತಬೇಡವೆಂದರೆ
ಹತ್ತಿದನು ಈತನು ಚಂದದಿಂದ (೧೧೯)

ಕುದುರೆಗೆ ಜೀನು, ಕಡಿವಾಣ ಎಲ್ಲ ಇದ್ದಾಗ ಅದನ್ನೇರಿ ಯೋಧರು ಯುದ್ಧಕ್ಕೆ ಹೋಗುವುದು ಧರ್ಮ. ಆದರೆ ಪರರ ಮಾತನ್ನು ಕೇಳದ ಅವಿವೇಕಿಗಳು ಬತ್ತಲೆ ಕುದುರೆಯನ್ನೇರುತ್ತಾರೆ. ಬತ್ತಲೆ ಕುದುರೆಯು ಅವಿವೇಕ, ಉದಾಸೀನತೆಯ ಸಂಕೇತವಾಗಿದ್ದು ಇಲ್ಲಿ ಅದನ್ನು ವಿಡಂಬನಾತ್ಮಕವಾಗಿ ದಾಸರು ಬಳಸಿದ್ದಾರೆ.

ಬತ್ತಲೆ ನಿಂತರೂ ಬಿಡುವೆನೆ
ಬೆನ್ನತ್ತಿ ನಿನಗೆ ಸದಾ ತಿರುಗುವೆ
ಹತ್ತಿದ ಕುದುರೆ ಸಹಿತವಾಗಿ ಹಿಡಿತಂದು
ಚಿತ್ತಕ್ಕೆ ಕಟ್ಟುವೆ ಪುರಂದರ ವಿಠಲ (೩೩೦)

ಭೂಮಿಯಲ್ಲಿ ಹುಟ್ಟಿದ ಪ್ರತಿಯೊಂದು ಜೀವಿಯೂ ದೇವಋಣ, ಪಿತೃಋಣವನ್ನು ತೀರಿಸಬೇಕಿರುವುದು ಧರ್ಮ. ಧರ್ಮ ಮಾರ್ಗದಲ್ಲಿ ನಡೆಯದವರನ್ನು ಸರಿದಾರಿಗೆ ತರಬೇಕೆಂಬ ಭಾವ ಇಲ್ಲಿದೆ.

ಬೆಕ್ಕು: ಇದು ಮೋಸ, ವಂಚನೆಯ ಪ್ರತೀಕವಾಗಿದೆ.

ಭಾಷೆಹೀನರ ಸಂಗಭಿಮಾನ ಭಂಗ
ಹಸಿವಿಗ್ಯಾರದೆ ಬೆಕ್ಕು ಹತ್ತಿಯನು ಮೆದ್ದಂತೆ
ತೃಷಿವಿಗ್ಯಾರದೆ ಕೂಪ ತೋಡಿದಂತೆ (೬೭೯)

ಈ ಕೀರ್ತನೆಯಲ್ಲಿ ಜನರ ಬುದ್ಧಿಹೀನತೆಯ ಚಿತ್ರಣವಿದೆ. ಜೋರಾಗಿ ಹಸಿವಾದ ಬೆಕ್ಕು ಬೇರೆ ಆಹಾರವನ್ನು ಹಡುಕದೇ ಹತ್ತಿಯನ್ನು ತಿನ್ನುವುದು ಮಾನವರ ಬುದ್ಧಿಹೀನತೆಯ ಸಂಕೇತವಾಗಿದೆ. ಬುದ್ಧಿಯಿಲ್ಲದವರ ಜೊತೆಗಿನ ಸಹವಾಸವು ಒಳಿತನ್ನುಂಟು ಮಾಡದು ಎಂಬ ಭಾವ ಇಲ್ಲಿದೆ.

ಬಣ್ಣಿಸ ಲೆನ್ನಳವೆ ಅನುದಿನ ಪಾಪವ ಮಾಡಿ
ಬೆಣ್ಣೆಯ ತಿಂದ ಬೆಕ್ಕಿನ ಹಾಗೆ ಕಣ್ಣುಬಿಡುತ ಇಲ್ಲಿಗೆ ಬಂದೆ. (೯೦೦)

ಬೆಕ್ಕು ಕದ್ದು ಬೆಣ್ಣೆಯನ್ನು ತಿಂದು ಏನೂ ಮಾಡದಂತಿರುತ್ತದೆ. ಮಾನವನು ನಾನಾ ಪಾಪ ಕರ್ಮಗಳನ್ನು ಮಾಡಿ ಏನೂ ಅರಿಯದಂತಿರುವುದನ್ನು ಬೆಕ್ಕಿನ ಹೋಲಿಕೆಯ ಮೂಲಕ ಚಿತ್ರಿಸಿದ್ದಾರೆ. ಆತ್ಮ ವಿಮರ್ಶೆಯನ್ನು ದಾಸರು ಈ ಕೀರ್ತನೆಯಲ್ಲಿ ಮಾಡಿದ್ದಾರೆ.

ಸುಳ್ಳು ನಮ್ಮಲ್ಲಿಲ್ಲವಯ್ಯ ಸುಳ್ಳು ನಮ್ಮಲ್ಲಿಲ್ಲ
ಇಲಿಯು ಒಲೆಯ ಚಾಚ್ವದ ಕಂಡೆ
ಬೆಕ್ಕು ಭಕ್ಕರಿ ಮಾಡ್ಡುವದ ಕಂಡೆ
ಮೆಣಸಿನ ಕಾಯ್ ಕಂಡೆನಪ್ಪ ಒನಕೆ ಗಡತರ (೯೧೨)

ಇಲಿಯು ಒಲೆಯನ್ನು ಹಾರುತ್ತಿದ್ದರೂ ಬೆಕ್ಕು ರೊಟ್ಟಿಯನ್ನು ಮಾಡುತ್ತಿರುವುದನ್ನು ಕಂಡೆ ಎಂದು ಇಲ್ಲಿ ದಾಸರು ಹೇಳಿರುವುದು ಮಾನವನ ಸತ್ಯ ನಿಷ್ಠೆ ಏಕಾಗ್ರತೆಯ ಸಂಕೇತವಾಗಿದೆ.ಬೆಕ್ಕು ಇಲಿಯನ್ನು ಕಂಡರೂ ರೊಟ್ಟಿಯನ್ನು ಮಾಡುತ್ತಿರುವ ಚಿತ್ರಣವು ಸತ್ಯದ ಮಹತ್ವವನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದೆ.

ಕಾಬಿಸಿ ಕಾಬಿಸಿ ಮ್ಯಾಂ ಮ್ಯಾಂ ಮ್ಯಾಂ
ಮಾರ್ಜಾಲ ಕಾಟವನ್ನು ತಡೆಯಲಾರೆವು ಕೃಷ್ಣ (೨೯೫)

ಬೆಕ್ಕು ಹಾಲಿಗಾಗಿ ಕೂಗುತ್ತಾ ಮನೆಯಿಡೀ ಓಡುತ್ತದೆ.ಅದು ಹಾಲು ಕುಡಿಯುವ ಭರದಲ್ಲಿ ಹಾಲಿನ ಗಡಿಗೆಯನ್ನೊಡೆದು ಬಿಡುತ್ತದೆ. ಅಂತೆಯೇ ಮನುಷ್ಯರು ಮಾರ್ಜಾಲದಂತೆ ಇನ್ನೊಬ್ಬರಿಗೆ ಕಾಟವನ್ನು ನೀಡುವುದನ್ನು ಬೆಕ್ಕಿನ ಪ್ರತಿಮೆಯ ಮೂಲಕ ದಾಸರು ವ್ಯಂಗ್ಯವಾಡಿದ್ದಾರೆ.

ಹುಲಿ: ಇದು ನಿರ್ಭಯದ ಸಂಕೇತವಾಗಿದೆ.

ಉಬ್ಬದಿರು ಉಬ್ಬದಿರು ಎಲೆ ಮಾನವ
ಹೆಬ್ಬುಲಿಯಂತೆ ಯಮ ಬೊಬ್ಬಿಡುತ ಕಾದಿರುವ (೧೩೬)

ಮಾನವನು ಎಷ್ಟೇ ಸುಖ ಭೋಗಗಳಿಂದ ಮೆರೆದರೂ ಅವನ ಹಿಂದೆಯೇ ಸಾವು ಎಂಬುದು ನಿಶ್ಚಿತವಾಗಿರುತ್ತದೆ. ಮಾನವನ ಕ್ಷಣಿಕ ಬದುಕಿನ ಚಿತ್ರಣ ಈ ಕೀರ್ತನೆಯಲ್ಲಿದೆ. ಹುಟ್ಟು ಸಾವುಗಳು ಸಾಗರದ ತೆರೆಗಳಂತೆ ಬರುತ್ತವೆ. ಹುಟ್ಟಿದವನು ಸಾಯಲೇಬೇಕು ಸತ್ತವನು ಮತ್ತೆ ಹುಟ್ಟುತ್ತಾನೆ. ಈ ಭವ ಬಂಧನದಿಂದ ಮುಕ್ತಿ ಪಡೆಯಲು ಭಕ್ತಿ ಮಾ
ರ್ಗವೇ ರಹದಾರಿಯೆಂದು ದಾಸರು ಸಾರಿದ್ದಾರೆ.

ಆನೆ ಸಿಂಹನ ಕೂಡೆ ಸ್ನೇಹ ಬೆಳೆಸುವುದುಂಟೆ
ಶ್ವಾನ ಹೆಬ್ಬುಲಿ ಕೂಡೆ ಸರಸವುಂಟೆ (೩೧೫)

ಆನೆ ಮತ್ತು ಸಿಂಹದ ನಡುವೆ ಸ್ನೇಹ ಬೆಳೆಯದು; ಶ್ವಾನ ಮತ್ತು ಹೆಬ್ಬುಲಿಯೊಡನೆ ಸರಸ ನಡೆಯದು, ಅದೇ ರೀತಿ ದೈವ ಭಕ್ತರಿಗೆ ನರಕವೆನ್ನುವುದು ಅಸಾಧ್ಯವಾದ ಮಾತು. ದೈವಭಕ್ತಿಗೆ ಮಿಗಿಲಾದುದು ಯಾವುದೂ ಇಲ್ಲ ಎಂಬ ತಾತ್ಪರ್ಯ ಇಲ್ಲಿ ಅಡಗಿದೆ.

ಕರಡಿ: ಇದು ಜನರ ಅಜ್ಞಾನದ ಪ್ರತೀಕವಾಗಿದೆ.

ಮುಲ್ಲೆ ಮಲ್ಲಿಗೆ ಮುಡಿಯಬಲ್ಲ ಮಾನವರಂತೆ
ಭಲ್ಲೂಕಗಳು ಅದರ ಬಗೆ ಬಲ್ಲುವೆ (೯೩೭)

ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುತ್ತಾರೆಯೇ ಹೊರತು ಬೇರೆ ಕ್ಷೇತ್ರಗಳಲ್ಲಿ ಕೆಲವೊಮ್ಮೆ ಮೂಢರಾಗಿರುತ್ತಾರೆ. ದುರುಳ ಮೂಢರಿಗೆ ಹರಿಕಥೆಯನ್ನು ಮಾಡಲಾಗದು. ಅದನ್ನು ಮಾಡಲು ಹರಿದಾಸರೇ ಬೇಕು. ಅಂತೆಯೇ ಸಮಾಜದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಆಯಾ ಕ್ಷೇತ್ರಗಳಲ್ಲೇ ಪರಿಣತರಾದವರು ಸೂಕ್ತ. ಕರಡಿಗೆ ಮಲ್ಲಿಗೆಯ ಪರಿಮಳದ ಅರಿವಾಗದೆಂಬ ಹೋಲಿಕೆಯನ್ನು ದಾಸರು ನೀಡಿರುವುದು ವಿಷಯ ತಜ್ಞತೆಯ ಮಹತ್ವವನ್ನು ತಿಳಿಸುವಲ್ಲಿ ಯಶಸ್ವಿಯಾಗಿದೆ.

ಇವಗೇಕೆ ಶೃಂಗಾರ ಇವಗೇಕೆ ಭಂಗಾರ
ಕಾಡ ಕರಡಿಯಂತೆ ಸೋಲುವ ದೇಹಕೆ (೧೧೮)

ಸಲಹುವ ದೇವರಿಗೆ ಬಹಿರಂಗದ ಆಭರಣ ಬೇಡ. ಕಾಡ ಕರಡಿಯನ್ನು ಹೋಲುವ ದೇಹಕ್ಕೆ ಶೃಂಗಾರ, ಬಂಗಾರದ ಅಗತ್ಯವಿಲ್ಲ. ಬಾಹ್ಯ ಆಡಂಬರ, ಆಚರಣೆಗಳ ಬಗೆಗಿನ ವಿರೋಧ ಇಲ್ಲಿ ವ್ಯಕ್ತವಾಗಿದೆ.ಕೇವಲ ಬಾಹ್ಯ ಸೌಂದರ್ಯವು ಮನುಷ್ಯನಿಗೆ ಶೋಭೆಯನ್ನು ತರಲಾರದು. ಆಂತರಿಕ ಸೌಂದರ್ಯದ ಮಹತ್ವವನ್ನು ಪುರಂದರದಾಸರ ಈ ಕೀರ್ತನೆಯಲ್ಲಿ ಕಾಣಬಹುದು.

ಕೋಣ: ಇದು ದಡ್ಡತನಕ್ಕೆ ಪ್ರತೀಕವಾಗಿದೆ.

ಮಾಣಿಕವು ಕೋಡಗನ ಕೈಯಲ್ಲಿ ಇದ್ದಂತೆ
ಕೋಣನಿದಿರಿಗೆ ಕಿನ್ನರಿ ಮೀಟಿದಂತೆ (೨೭೨)

ಮೂರ್ಖರಿಗೆ ಏನೂ ಉಪದೇಶ ಮಾಡಿದರೂ ವ್ಯರ್ಥ. ಹರಿಭಕ್ತಿಯಿಲ್ಲದವರಿಗೆ ದೇವರು ಸರ್ವಾಂತರ್ಯಾಮಿ ಎಂಬ ಅರಿವು ಆಗದು. ಅರಿವಿಲ್ಲದೆ ಮಾಡುವ ಭಕ್ತಿ ವ್ಯರ್ಥ. ಕೋಣನಿದಿರಿಗೆ ಕಿನ್ನರಿಯನ್ನು ಮೀಟಿದರೆ ಏನೂ ಪ್ರಯೋಜನವಿಲ್ಲವೆಂಬುದು ದಾಸರ ಅಭಿಮತ.

ಎಷ್ಟು ಯುಗಗಳು ತೀರಿಹೋಯಿತಣ್ಣ ದೇವರ ಮಾಡದೆ
ಕಷ್ಟದಿಂದ ನೊಂದೆಕಾಣಣ್ಣ
ಅಷ್ಟದಳದ ಕಂಭ ನಿಲ್ಲಿಸಿ ನಷ್ಟ ಬರುವ ಕಾಲದಲ್ಲಿ
ಕೆಟ್ಟ ದೈವಕ್ಕಾಗಿ ನೀನು ದುಷ್ಟ ಕೋಣನ ಶಿರವ ತರಿದು (೧೩೮)

ಮಾನವರು ಅನೇಕ ತಪ್ಪುಗಳನ್ನು ಮಾಡಿ ಕಷ್ಟ ಬಂದಾಗ ಅದರ ನಿವಾರಣೆಗೆ ಇನ್ನೊಬ್ಬರನ್ನು ಕಷ್ಟಕ್ಕೀಡು ಮಾಡುತ್ತಾರೆ. ಆದರೆ ವಾಸ್ತವದಲ್ಲಿ ತನ್ನೊಳಗಿನ ಕಷ್ಟಕ್ಕೆ ತಾನೇ ಹೊಣೆ ಎಂಬ ಸತ್ಯವನ್ನು ಆತ ಅರಿತಿರುವುದಿಲ್ಲ. ಜನರ ಈ ಮೌಢ್ಯಕ್ಕೆ ಪ್ರತಿರೂಪವಾಗಿ ಇಲ್ಲಿ ಕೋಣವನ್ನು ಬಲಿ ಕೊಡುವ ಚಿತ್ರಣವಿದೆ.

ಹಂದಿ : ಇದು ಮನುಷ್ಯನ ಅಂತರಂಗದ ಕಲ್ಮಶಕ್ಕೆ ಸಂಕೇತವಾಗಿದೆ.

ನಿಂದಕರಿರಬೇಕು
ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೊ ಹಾಂಗೆ
ಅಂದಂದು ಮಾಡಿದ ಪಾಪವೆಂಬ ಮಲ
ತಿಂದುಹೋಗುವರಯ್ಯ ನಿಂದಕರು
ವಂದಿಸಿ ಸ್ತುತಿಸುವ ಜನರೆಲ್ಲರು ನಮ್ಮ
ಪೊಂದಿಹ ಪುಣ್ಯವನೊಯ್ಯುವರಯ್ಯ (೫೨೭)

ಒಂದು ಸಮಾಜದಲ್ಲಿ ಅಭಿವೃದ್ಧಿ ಕಾಣಬೇಕಾದರೆ ಸ್ತುತಿ ನಿಂದೆಗಳು ಅಗತ್ಯ. ಕೇವಲ ಹೊಗಳಿಕೆ ವ್ಯಕ್ತಿಯನ್ನು ಯಶಸ್ಸಿನ ಹಾದಿಗೆ ಕೊಂಡೊಯ್ಯಲಾರದು ಮಾಡುವ ಕೆಲಸ ಕಾರ್ಯಗಳ ಲೋಪದೋಷಗಳನ್ನು ತೆಗಳುವವರು, ನಿಂದಿಸುವವರಿದ್ದಾಗ ವ್ಯಕ್ತಿಹೆಚ್ಚು ಜಾಗೃತನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಹಂದಿ ಸಮಾಜವನ್ನು ಶುಚಿಗೊಳಿಸಲು ಹೊಲಸನ್ನು ತಿನ್ನುವುದಲ್ಲ. ಅದು ಅದರ ಹೊಟ್ಟೆಪಾಡಿಗಾಗಿ ತಿಂದರೂ ಸಮಾಜಕ್ಕೆ ಅದರಿಂದ ಒಳಿತಾಗುತ್ತದೆ. ಹಾಗೆಯೇ ವ್ಯಕ್ತಿಯ ಕಾರ್ಯದಕ್ಷತೆಯನ್ನು ಹೆಚ್ಚಿಸುವಲ್ಲಿ ನಮ್ಮನ್ನು ನಿಂದಿಸುವವರ ಪಾತ್ರವೂ ಮಹತ್ತರವಾದುದು ಎಂಬುದನ್ನು ಗುರುತಿಸಿದ ದಾಸರು "ನಿಂದಕರಿರಬೇಕು ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೊ ಹಾಂಗೆ ಎಂದಿದ್ದಾರೆ. ನಿತ್ಯಬದುಕಿನ ಅವಲೋಕನದ ಸಂಕೀರ್ಣ ಚಿತ್ರಗಳನ್ನು ನಾವು ಇಲ್ಲಿ ಕಾಣಬಹುದು.

ಹಳ್ಳೂರು ಕೇರ್ಯಾಗೆ ಇರುವುದು ಹಂದಿ
ನಾನಾ ಜನ್ಮವ ತಿರುಗುತ ಬಂದಿ
ಇಷ್ಟು ಸಂಸಾರವ ಮರೆಮಾಡಿಕೊಂಡಿ
ಮುಪ್ಪಿನ ಕಾಲಕ್ಕೆ ಅವಿಚಾರಗೊಂಡಿ. (೩೪೧)

ಮಾನವನು ನಾನಾ ಪಾಪಕರ್ಮಗಳನ್ನು ಮಾಡಿ ಲೌಕಿಕ ಸುಖ ಭೋಗಗಳಲ್ಲಿ ಮುಳುಗಿ ಹೋಗಿರುವ ಚಿತ್ರಣ ಇಲ್ಲಿದೆ. ಮಾನವನು ವಿಚಾರಶೀಲನಾಗಬೇಕು ಇಲ್ಲದಿದ್ದಲ್ಲಿ ಹೊಲಸನ್ನು ತಿಂದು ಬದುಕುವ ಹಂದಿಗೂ ಮಾನವನಿಗೂ ಏನೂ ವ್ಯತ್ಯಾಸವಿಲ್ಲ. ಮಾನವನು ಭವಬಂಧನದಿಂದ ಮುಕ್ತನಾಗಲು ಉತ್ತಮ ಕಾರ್ಯಗಳನ್ನು ಮಾಡಬೇಕೆಂಬ ತಾತ್ಪರ್ಯ ಇಲ್ಲಿದೆ.

ಇದೇ ಭಾವ ಇನ್ನೊಂದು ಕೀರ್ತನೆಯಲ್ಲಿ ವ್ಯಕ್ತವಾಗಿದೆ.
ಸ್ನಾನ ಸಂಧ್ಯಾದಿಗಳ ಮಾಡದಲೆ ಮೆಯ್ಗೆಟ್ಟೆ
ಜ್ಞಾನ ಮಾರ್ಗವನಂತು ಮೊದಲೆ ಬಿಟ್ಟೆ.
ಏನ ಪೇಳಲಿ ಪರರ ಮಾನಿನಿಗೆ ಮನಸಿಟ್ಟೆ
ಶ್ವಾನ ಸೂಕರನಂತೆ ಹೊರೆದ ಹೊಟ್ಟೆ (೧೨೨)

ಸ್ನಾನ ಸಂಧ್ಯಾವಂದನೆಗಳನ್ನು ಮಾಡದೆ, ಜ್ಞಾನ ಮಾರ್ಗದಲ್ಲಿ ನಡೆಯದೆ, ಪರ ಸ್ತ್ರೀ ವ್ಯಾಮೋಹವೇ ಮೊದಲಾದ ನೀಚ ಕಾರ್ಯಗಳನ್ನು ಮಾಡಿ ನಾಯಿ, ಹಂದಿಗಳಂತೆ ಬದುಕನ್ನು ಸವೆಸಿ ಕೊನೆಗೆ ಪಶ್ಚಾತ್ತಾಪ ಪಡುವ ಮಾನವನ ಬದುಕಿನ ಚಿತ್ರಣ ಇಲ್ಲಿದೆ. ಇಂತಹ ನಾಯಿ, ಹಂದಿತನಕ್ಕೆ ತಮ್ಮನ್ನು ಹೋಲಿಸಿಕೊಂಡು ಅದರಿಂದ ಬಿಡುಗಡೆಗಾಗಿ ಮೊರೆಯಿಡುತ್ತಾ ಆತ್ಮ ವಿಮರ್ಶೆ ಮಾಡಿಕೊಳ್ಳುವ ವಿಧಾನವು ಪುರಂದರದಾಸರ ಈ ಕೀರ್ತನೆಯಲ್ಲಿ ಉದಾತ್ತವಾಗಿ ಮೂಡಿಬಂದಿದೆ.

ಗೋವು : ಇದು ಸಮೃದ್ಧಿಯ ಸಂಕೇತವಾಗಿದೆ.

ಹರಿಕಥೆ ಕೇಳುವ ಪರಿಜನರು ಈ
ಪರಿಯ ಪುರಾಣಕ್ಕೆ ಸರಿದು ಕುಳ್ಳಿರುವರು

ನೆಲ್ಲು ಒಣಗಲಿಲ್ಲ ಹಲ್ಲುನೋವು ಘನ್ನ
ಕಲ್ಲು ಹೋಗದು ಎನ್ನ ಕೈಯಲೆಂದು
ಪುಲ್ಲನಾಭನ ಕಥೆ ಪೂರೈಸಿ ಕೇಳದೆ
ಕಲ್ಲಗೋವಿನ ಹಾಲ ಕರುವು ಬಯಸುವಂತೆ (೯೩೯)

ಕಲ್ಲಗೋವಿನಿಂದ ಹಾಲನ್ನು ಪಡೆಯುವುದು ಅಸಾಧ್ಯವಾದ ಮಾತು. ಅಂತೆಯೇ ಪರರನ್ನು ನಿಂದಿಸುತ್ತಾ ನಾನಾ ಪಾಪ ಕರ್ಮಗಳನ್ನು ಮಾಡಿ ಪುರಾಣ ಕಥೆಗಳನ್ನು ಕೇಳದೆ ಪುಣ್ಯ ಸಂಪಾದಿಸುವುದು ಸಾಧ್ಯವಿಲ್ಲ. ಯಾರೇ ಆದರೂ ಒಳ್ಳೆಯ ಕೆಲಸಗಳನ್ನು ಮಾಡದೆ ಪ್ರತಿಫಲ ನಿರೀಕ್ಷಿಸಿದರೂ ಅದು ದೊರಕಲಾರದು ಎಂಬ ಸತ್ಯವನ್ನು ದಾಸರು ಈ ಕೀರ್ತನೆಯ ಮೂಲಕ ಸಾರಿದ್ದಾರೆ.

ಹರಿಚರಣವೆಂಬ ಸುರಧೇನುವನ್ನು
ಗುರುಬೋಧೆಯೆಂಬ ಕಣ್ಣಿಲಿ ಕಟ್ಟಿರಯ್ಯ

ಭಕ್ತಿಯೆಂಬ ಕರುವನು ಬಿಟ್ಟು ನಿರತ ವಿ
ರಕ್ತಿಯೆಂಬ ಗನದೆಳೆಯನು ಹಾಕಿ
ಯುಕ್ತವಾದ ಅನಿತ್ಯಕಾಯ ಚರಿಗೆಯೊಳಗೆ
ಮುಕ್ತವರ ರಾಮ ನಾಮವ ಕಳೆದುಕೊಳ್ಳಿರೊ (೯೪೩)

ಹರಿಚರಣವೆಂಬ ಕಾಮಧೇನುವನ್ನು ಗುರುಬೋಧನೆಯೆಂಬ ಹಗ್ಗದಲ್ಲಿ ಕಟ್ಟಿ ಅದಕ್ಕೆ ಭಕ್ತಿ ಎಂಬ ಕರುವನ್ನು ಬಿಟ್ಟು ವಿರಕ್ತಿಯೆಂಬ ಶ್ರೇಷ್ಠವಾದ ಹಗ್ಗದಿಂದ ಹಿಡಿತದಲ್ಲಿಟ್ಟರೆ ಮನುಷ್ಯನು ಸುಖವಾಗಿರಲು ಸಾಧ್ಯ. ನಾವು ಮಾಡುವ ಕೆಲಸದಲ್ಲಿ ಶ್ರದ್ದೆ, ಭಕ್ತಿ ಇದ್ದರೆ ಒಳಿತಾಗುವುದು ಸಾಧ್ಯ.

ಮೇಕೆ–ಕುರಿ : ಇದು ಮಾನವನ ಅಹಂ ಭಾವದ, ಅಸಹಾಯಕ ಸ್ಥಿತಿಗೆ ಸಂಕೇತವಾಗಿದೆ.

ನಾನೆ ಎಂಬೋ ಮೇಕೆ ಹೋತಣ್ಣ ಅದಕ್ಕೆ ತಕ್ಕ
ಜ್ಞಾನವೆಂಬ ಪೋತ ರಾಜಣ್ಣ
ತಾನೆ ಎಂಬೊ ಭಲ್ಲೆ ಹಿಡಿದು ಹೀನ ಹೋತಿನ ಸೀಳಿ ಬಿಸುಡು
ಜ್ಞಾನ ಗುಡಿಸಲು ಸೂರೆಗಂಡು ತಾನೆ ಬೆಳಗೊ ಜೋತಿ ನಿಲ್ಲಿಸಿ (೧೩೮)

ಮಾನವನು ತಾನು ಮಾಡಿದ ಕೆಲಸ ಕಾರ್ಯಗಳ ಬಗ್ಗೆ ಹೇಳಿಕೊಳ್ಳಬಾರದು. 'ತನ್ನ ಬಣ್ಣಿಸಬೆಡ'ಎಂದು ಅಂತರಂಗ ಶುದ್ಧಿಯ ಬಗ್ಗೆ ಬಸವಣ್ಣನವರು ಹೇಳಿದ ತತ್ವವೇ ದಾಸರ ಈ ಕೀರ್ತನೆಯಲ್ಲೂ ಪ್ರತಿಪಾದಿತವಾಗಿದೆ. ಭಲ್ಲೆಯಿಂದ ಹೋತವನ್ನು ಸೀಳಿ ಬಿಡುವಂತೆ ಮನುಷ್ಯನು ತನ್ನ ಅಹಂ ಭಾವವನ್ನು ಬಿಟ್ಟು ಜ್ಞಾನ ಶಿಖರದ ಎತ್ತರವನ್ನು ಏರಬೇಕು.

ಕರ್ತವೆಂಬೊ ಕ್ಲೇಶ ಕುರಿಯಣ್ಣ ಅದನ್ನು ತಂದು
ಕಟ್ಟಿ ತಲೆಯನೆ ಕುಟ್ಟಬೇಕಣ್ಣ
ಅಷ್ಟ ವಿಧದ ಕುರಿಗಳನ್ನು ಕಟ್ಟಿ ತಲೆಯನೆ ಚೆಂಡನಾಡಿ
ಹುಟ್ಟಿ ತಿರುಗೋ ಕೊಳಿಯನ್ನು ಕುಟ್ಟಿ ಚೂರಿ ಹಾಕುತಲಿ (೧೩೮)

ನಾನೇ ಎಂಬ ಅಹಂ ಭಾವವು ಕ್ಲೇಶಕ್ಕೆ ಕಾರಣವಾಗುತ್ತದೆ. ಅಷ್ಟವಿಧದ ಕುರಿಗಳು ಇಲ್ಲಿ ಮನೆ ಹಾಸಿಗೆ ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ ಮತ್ತು ತಾಂಬೂಲಗಳೆಂಬ ಅಷ್ಟಭೋಗಗಳನ್ನು ಸಂಕೇತಿಸುತ್ತದೆ. ಅಷ್ಟವಿಧದ ಭೋಗಗಳನ್ನು, ಮನಸ್ಸಿನಲ್ಲಿ ಹುಟ್ಟುವ ದುಷ್ಟ ಕಾಮನೆಗಳನ್ನು ತ್ಯಜಿಸಿ ಇಂದಿನ ಬಾಳನ್ನು ಸಾರ್ಥಕ್ಯಗೊಳಿಸಬೇಕೆಂಬುದು ಇಲ್ಲಿನ ಭಾವವಾಗಿದೆ.

ಹಾವು : ಇದು ಪ್ರಾಪಂಚಿಕ ವಿಷಯಗಳ ಹಿಡಿತದಿಂದ ತಪ್ಪಿಸಿಕೊಳ್ಳಲಾಗದ ಭಯ ವಿಪತ್ತುಗಳಿಗೆ ಪ್ರತಿರೂಪವಾಗಿದೆ.

ಸಾಗರದ ತೆರೆಯಂತೆ ಸಾವು ಹುಟ್ಟಿರಲಾಗಿ
ಭೋಗಭಾಗ್ಯಗಳೆಂದು ಬಳಲಬೇಕೊ
ನಾಗಪೆಡೆ ನೆರಳಲ್ಲಿ ನಡುಗೊ ಕಪ್ಪೆಯ ರೀತಿ
ಕೂಗಿ ಚೀರಿದರೆ ನಿನ್ನಾಗ ಕೇಳುವರೆ (೧೩೬)

ಕಪ್ಪೆಯು ಮಂದ ಬುದ್ಧಿಯ ಪ್ರಾಣಿ ಅದು ತಿಳಿಯದೆ ಹೋಗಿ ನಾಗರಹಾವಿನ ಹೆಡೆಯ ನೆರಳಲ್ಲಿ ಇದ್ದು ಕೂಗಿದರೆ ಅದನ್ನು ರಕ್ಷಿಸುವವರು ಯಾರೂ ಇರುವುದಿಲ್ಲ. ಅಂತೆಯೇ ಮಾನವನು ಭಕ್ತಿ ಮಾರ್ಗದಲ್ಲಿ ನಡೆಯದೆ, ಪ್ರಾಪಂಚಿಕ ವಿಷಯಗಳಲ್ಲಿ ಸಿಕ್ಕಿಕೊಂಡರೆ ಅದರಿಂದ ಬಿಡುಗಡೆ ಪಡೆಯಲು ಸಾಧವಿಲ್ಲ. ಇಂತಹ ಭಯದಿಂದ ಮುಕ್ತಿ ಪಡೆಯಲು ಪುರಂದರವಿಠಲನನ್ನು ನೆನೆದರೆ ಮಾತ್ರ ಸಾಧ್ಯವೆಂದು ದಾಸರು ನಂಬಿದ್ದಾರೆ.

ಪುತ್ರ ಹುಟ್ಟಿದ ದಿವಸ ಹಾಲಿನೂಟದ ಹಬ್ಬ
ಮತ್ತೊಬ್ಬ ಮಗನ ಉಪನಯನ ನಾಳೆ
ಅರ್ತಿಯಾಗಿದೆ ಬದುಕು ಸಾಯಲಾರೆನು ಎನಲು
ಮೃತ್ಯು ಹೆಡತಲೆಯಲ್ಲಿ ನಗುತಿರ್ಪಳಯ್ಯ (೨೩)

ಮಾನವನ ಕ್ಷಣಿಕ ಬದುಕಿನ ಚಿತ್ರಣ ಈ ಕೀರ್ತನೆಯಲ್ಲಿದೆ. ಮಾನವನು ಲೌಕಿಕ ಸುಖಭೋಗಗಳಲ್ಲಿ ಮುಳುಗಿದ್ದು ಸಾವನ್ನು ಬಯಸಲಾರನು. ಆದರೆ ಸಾವು ಎಂಬುದು ಯಾರನ್ನು ಕಾಯದು. ಅದು ಅನಿರೀಕ್ಷಿತವಾಗಿ ಬಂದೊದಗಬಹುದು. ಅದ್ದರಿಂದ ಮನುಷ್ಯನು ಇರುವಷ್ಟು ಕಾಲದಲ್ಲಿ ದೇವರನ್ನು ಭಜಿಸಬೇಕು. ಅದನ್ನು ಇನ್ನೊಮ್ಮೆ ಮಾಡುವೆನೆಂದರೆ ಕೆಲವೊಮ್ಮೆ ಸಾಧ್ಯವಾಗದೆಂಬ ವಿಚಾರವನ್ನು ಇಲ್ಲಿ ಹೇಳಲಾಗಿದೆ. ಆದ್ದರಿಂದ ಮಾನವರು ಕೇವಲ ಲೌಕಿಕ ಬದುಕಿನಲ್ಲೇ ಮುಳುಗದೆ ಆಧ್ಯಾತ್ಮಕ ವಿಚಾರಗಳ ಕುರಿತು ಒಲವನ್ನು ಹೊಂದಿ ಕೃತಾರ್ಥರಾಗಬೇಕೆಂಬುದು ಪುರಂದರದಾಸರ ಆಶಯವಾಗಿದೆ.

ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ ಬೇಟೆಗಾರಗೆ ದಯಪುಟ್ಟೀತೆ
ಕೆಟ್ಟ ಹಾವು ಕಚ್ಚಿದ ಗಾಯಕೆ ಹಳೆ ಬಟ್ಟೆಯೊಳೊರಸೆ ವಿಷ ಹೋದೀತೆ (೯೫೦)

ಜನರು ಧರ್ಮಮಾರ್ಗದಲ್ಲಿ ನಡೆಯಬೇಕು. ಇಲ್ಲದಿದ್ದಲ್ಲಿ ದೇವತಾನುಗ್ರಹ ಸಾಧ್ಯವಾಗದು. ಹಾವು ಕಚ್ಚಿದ ಗಾಯಕ್ಕೆ ಹಳೆ ಬಟ್ಟೆಯಿಂದ ಒರೆಸಿದರೆ ವಿಷ ಹೋಗಲು ಸಾಧ್ಯವಿಲ್ಲ. ಅಂತೆಯೇ ಪ್ರತಿದಿನ ದೇವರನ್ನು ನೆನೆಯದಿದ್ದರೆ ಭವ ಬಂಧನದಿಂದ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲ.

ಬೇವು ಬೆಲ್ಲದೊಳಿಡಲೇನು ಫಲ ಹಾವಿಗೆ ಹಾಲೆರೆದೇನು ಫಲ
ಕುಟಿಲವ ಬಿಡದಿಹ ಕುಜನರು ಮಂತ್ರವ ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಮನದಲಿ ವಿಠಲನ ನೆನೆದರೆಯೇನು ಫಲ (೬೬೩)

ಬೇವನ್ನು ಬೆಲ್ಲದೊಳಿಟ್ಟರೂ ಅದು ಕಹಿಯ ಗುಣವನ್ನು ಬಿಡದು. ಹಾವಿಗೆ ಹಾಲನ್ನು ಎರೆದರೂ ಅದು ಕಚ್ಚುವ ಗುಣವನ್ನು ಬಿಡದು. ಅದೇ ರೀತಿ ದುಷ್ಟ ಜನರು ತಮ್ಮ ಕೆಟ್ಟ ಗುಣಗಳನ್ನು ಬಿಡದೆ ಯಾವ ಜಪ, ತಪ ಮಂತ್ರ ಪಠಣ ಮಾಡಿದರೂ ನಿಷ್ಪ್ರಯೋಜಕ. ಇಲ್ಲಿ ಹಾವು ದುಷ್ಟ ಜನರ ಪ್ರತಿರೂಪವಾಗಿದೆ.

ಹುತ್ತದೊಳಗೆ ಒಂದು ಸರ್ಪ ಎಂಟು ಗಜಗಳ ಬಿಡದೆ ನುಂಗಿತು.
ಎಂಟು ನೆಂಟರ ನುಂಗಿತು ಮತ್ತೆ ರವಿ ಚಂದ್ರರ ನುಂಗಿತು
ಅಂಥಾ ಸರ್ಪನ ಕಪ್ಪೆಯು ನುಂಗಿತು
ಅಂಥಾದೊಂದು ಕಪ್ಪೆಯ ಮರಿಯಾಡುತ ಬಂದು
ನುಂಗಿ ನೋಡುವ ಸೊಗಸ (೫೮೦)

ಇಲ್ಲಿ ಸರ್ಪವು ಸಂಸಾರದ ಪ್ರತೀಕವಾಗಿದ್ದು ಅದು ಎಲ್ಲವನ್ನೂ ವ್ಯಾಪಿಸಿರುತ್ತದೆ. ಸಂಸಾರಿಯಾದವನು ಲೌಕಿಕ ವಿಚಾರಗಳಲ್ಲಿ ಮುಳುಗಿ ಹೋಗಿರುವುದರ ಪ್ರತಿರೂಪವಾಗಿ ಇಲ್ಲಿ ಎಂಟು ಗಜ, ಎಂಟು ನೆಂಟರು ಪದಗಳನ್ನು ದಾಸರು ಬಳಸಿದ್ದಾರೆ. ಸಂಸಾರವೆಂಬುದೇ

ಹಾಗೆ ಅದು ಎಲ್ಲವನ್ನೂ ಬಿಡದೆ ವ್ಯಾಪಿಸಿರುತ್ತದೆ.ಸಂಸಾರಿಯಾದವನು ಲೌಕಿಕ ಭೋಗದಲ್ಲಿ ಮುಳುಗಿದಾಗ ಸಣ್ಣ ಸಣ್ಣ ವಿಚಾರಗಳಲ್ಲೂ ಸೋತು ಹೋಗುತ್ತಾನೆ. ಈ ಸಂಸಾರವೆಂಬುದೊಂದು ಮಾಯೆ ಎಂಬುದನ್ನು ಪ್ರತಿಪಾದಿಸುವಲ್ಲಿ ಈ ಕೀರ್ತನೆ ಯಶಸ್ವಿಯಾಗಿದೆ. ದಾಸರು ಇಲ್ಲಿ ಪ್ರಾಪಂಚಿಕ ಬದುಕಿನ ಚಿತ್ರಣವನ್ನು ಸೊಗಸಾಗಿ ನಿರೂಪಿಸಿದ್ದಾರೆ.

ಕಾಗೆ : ಇದು ಅಂತರಂಗ ಶುದ್ಧಿಯಿಲ್ಲದ ಭಾವನೆಗಳಿಗೆ ಸಂಕೇತವಾಗಿದೆ.

ಕಾಗೆ ಕೂಗಿತಲ್ಲ ಈಗ ಒಂದು ಕಾಗೆ ಕೂಗಿತಲ್ಲ
ಎಲ್ಲರೇಳದ ಮುನ್ನ ಗುಲ್ಲು ಮಾಡುತಲೆದ್ದು
ಚೆಲ್ಲಿದ ಧನಧಾನ್ಯವ ಮೆಲ್ಲುತ (೨೯೩)

ಕಾಗೆ ಕೂಗುವುದು ಅಪಶಕುನದ ಸಂಕೇತವಾಗಿ ಬಳಕೆಯಾಗುತ್ತದೆ. ಕಾಗೆಯನ್ನು, ಅದರ ಕೂಗನ್ನು ಜನರು ಕೀಳಾಗಿ ಕಾಣುತ್ತಾರೆ. ಆದರೆ ಕಾಗೆಯೂ ಕೂಡ ಶ್ರೇಷ್ಠವಾದುದು.ಅದು ಚೆಲ್ಲಿದ ಧನ ಧಾನ್ಯಗಳನ್ನು ತಿಂದು ಬದುಕುತ್ತದೆ. ಕಾಗೆಯನ್ನು ಜನರು ಹೇಯವಾದುದೆಂದು ಹೀಗಳೆಯಬಾರದು. ಅದು ಪಿತೃಗಳಕಾರ್ಯಕ್ಕೆ ಅಗತ್ಯ. ಸತ್ತವರ ಸುದ್ದಿಯನ್ನು ಕೂಗಿ ತಿಳಿಸುತ್ತದೆಂಬ ನಂಬಿಕೆಯೂ ಇದೆ. ಇದು ಹಿತವಾದ ಸುದ್ದಿಯನ್ನು ನೀಡಬಹುದೆಂಬುದು ದಾಸರ ಅಭಿಮತ. ಕಾಗೆಯು ಕೇವಲ ಅಪಶಕುನದ ಸಂಕೇತವಲ್ಲ, ಅದು ಶುಭಶಕುನದ ಸಂಕೇತವೂ ಹೌದು. ಒಳ್ಳೆಯತನ, ಕೆಟ್ಟತನವು ಕೇವಲ ವಸ್ತುವಿನಲ್ಲಿ ಮಾತ್ರ ಇರುವುದಲ್ಲ, ಅದು ನಾವು ನೋಡುವ ದೃಷ್ಟಿಯಲ್ಲಿದೆ ಎಂಬ ವಿಚಾರವನ್ನು ಕಾಗೆಯ ಪ್ರತಿಮೆಯ ಮೂಲಕ ಸಾರುವುದರೊಂದಿಗೆ ಅದಕ್ಕೂ ಮಹತ್ತರವಾದ ಸ್ಥಾನವನ್ನು, ಅರ್ಥವನ್ನು ಕಲ್ಪಿಸಿದ್ದಾರೆ.

ಮನಶುದ್ಧಿಯಿಲ್ಲದವಗೆ ಮಂತ್ರದ ಫಲವೇನು
ತನುಶುದ್ಧಿಯಿಲ್ಲದವಗೆ ತೀರ್ಥದ ಫಲವೇನು

ಮಿಂದಲ್ಲಿ ಫಲವೇನು ಶ್ರೀಶೈಲದ ಕಾಗೆಯಂತೆ
ಹೊರಗೆ ಮಿಂದು ಒಳಗೆ ಮೀಯದವರ ಕಂಡು
ಬೆರಗಾಗಿ ನಗುತಿದ್ದ ಪುರಂದರವಿಠಲ (೧೯೩)

ಅಂತರಂಗ ಶುದ್ಧಿಯ ಮಹತ್ವವನ್ನು ಈ ಕೀರ್ತನೆಯಲ್ಲಿ ಕಾಣಬಹುದು. ಹೊರಗೆ ಮಿಂದು ಒಳಗೆ ಮೀಯದವರನ್ನು ಶ್ರೀಶೈಲದ ಕಾಗೆಗೆ ಹೋಲಿಸಿದ್ದಾರೆ. ಕಾಗೆ ಎಷ್ಟು ಮಿಂದರೂ ಅಶುದ್ಧವೆಂಬುದು ನಂಬಿಕೆ. ಇದು ಪುಣ್ಯಕ್ಷೇತ್ರವಾದ ಶ್ರೀಶೈಲದ ಕಾಗೆ. ಕಾಗೆ ಯಾವುದೇ ಪವಿತ್ರ ಕ್ಷೇತ್ರದಲ್ಲಿ ಮಿಂದರೂ ಶುದ್ಧವೆನಿಸದು. ಅಂತೆಯೇ ಅಂತರಂಗ ಶುದ್ಧಿಯಿಲ್ಲದವರು ಶ್ರೀಶೈಲದ ಕಾಗೆಯಂತೆ ಎಲ್ಲಿ ಎಷ್ಟು ಬಾರಿ ಮಿಂದರೂ ಪರಿಶುದ್ಧವನ್ನು ಹೊಂದಲಾರದು.

ಪಕ್ಷಿ : ಇದು ಆತ್ಮದ ಸಂಕೇತವಾಗಿ ಬಂದಿದೆ.

ಎರಡೂ ಒಂದಾಗದು ರಂಗ
ಎರಡು ಒಂದಾಗದು ಎಂದೆಂದಿಗು ರಂಗ

ಒಂದು ವೃಕ್ಷದಲ್ಲಿ ಎರಡು ಪಕ್ಷಿಗಳು ಒಂದೆ ಗೂಡಿನಲ್ಲಿ ಇರುತಿಹವು
ಒಂದು ಪಕ್ಷಿ ಫಲಗಳನುಂಬುದು ಮ
ತ್ತೊಂದು ಫಲಂಗಳನುಣ್ಣದು ರಂಗ

ಹಲವು ಕೊಂಬೆಗೆ ಹಾರಿತು ಒಂದು
ಹಲವು ಕೊಂಬೆಗೆ ಹಾರಲರಿಯದು
ಹಲವೆಲ್ಲ ಒಂದು ಬಲ್ಲುದು ಒಂದು
ಹಲವನೆಲ್ಲವ ಅರಿಯದು ರಂಗ

ನೂರೆಂಟು ಕೊಂಬೆಗೆ ಹಾರಿತು ಅದು ಹಾರಿ ಮೇಲಕ್ಕೇರಿ ಮೀರಿತು
ಮೀರಿ ಪುರಂದರವಿಠಲ ನಿಮ್ಮನು ಸೇರಿ ಸುಖಿಯಾಗಿ ನಿಂತಿತು ರಂಗ (೧೬೯)

ಇಲ್ಲಿ ಎರಡು ಹಕ್ಕಿಗಳು ಜೀವಾತ್ಮ ಮತ್ತು ಜಡದೇಹದ ಸಂಕೇತವಾಗಿ ಬಂದಿದೆ. ಈ ದೇಹದೊಳಗೆ ಆತ್ಮವಿದ್ದರೂ ಅದು ಕ್ಷಣಿಕ. ಯಾವತ್ತೂ ಅದು ಒಟ್ಟಿಗೆ ಇರವುದು ಸಾಧ್ಯವಿಲ್ಲ. ಒಂದು 'ವೃಕ್ಷವು' ಜೀವದ ಸಂಕೇತವಾಗಿದೆ. ಅಲ್ಲಿ ದೇಹ ಮತ್ತು ಜೀವಾತ್ಮ ಎರಡೂ ಇದೆ. ಇಲ್ಲಿ ಹಾರುವ ಪಕ್ಷಿ 'ಜೀವಾತ್ಮ'ದ ಪ್ರತಿನಿಧಿಯಾಗಿದೆ. ಮಾನವನು ನಾನಾ ಕರ್ಮಗಳನ್ನು, ಸುಖಭೋಗಗಳನ್ನು ಅನುಭವಿಸಿ, ಹುಟ್ಟು-ಸಾವಿನ ಕ್ರಿಯೆ ನಡೆಯುತ್ತಿರುತ್ತದೆ. ಹಾರಲರಿಯದ ಪಕ್ಷಿಯು ಜಡ ದೇಹದ ಸಂಕೇತವಾಗಿದೆ. ಹಾರುವ ಪಕ್ಷಿ ನೂರೆಂಟು ಕೊಂಬೆಗೆ ಹಾರಿ ಮೇಲಕ್ಕೇರಿ ಪುರಂದರವಿಠಲನ ಪಾದ ಸೇರಿ ಸುಖಿಯಾಗಿರುವುದು ಮೋಕ್ಷದ ಸಂಕೇತವಾಗಿದೆ. ಹೀಗೆ ದೇಹ-ಜೀವಾತ್ಮ-ಪರಮಾತ್ಮನ ಬಗೆಗೆ, ದ್ವೈತ ಸಿದ್ಧಾಂತದ ಬಗೆಗಿನ ಚಿಂತನೆಯನ್ನು ಈ ಕೀರ್ತನೆಯಲ್ಲಿ ಕಾಣಬಹುದು.

ನೋಡಿರಯ್ಯ ನೀವು ನೋಡಿರಯ್ಯ
ನೋಡಿರಯ್ಯ ಹರಿದಾಸರ ಮಾಯವ, 'ಜೋಡಾಗಿಪ್ಪ ಎರಡು ಪಕ್ಷಿ
ಗೂಡನಗಲಿ ಗೂಡ ತೊರೆದು
ಆಡುತ ಬಂದು ನುಂಗಿ ನೋಡುವ ಸೊಗಸು (೫೮೦)

ಇಲ್ಲಿ ವಿರೋಧಾಭಾಸಗಳನ್ನು ಚಿತ್ರಿಸುವುದರ ಮೂಲಕ ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಮಾಯಾಜಾಲದ ಬಗೆಗೆ ಹೇಳಲಾಗಿದೆ. ಸಾಧಾರಣ ಜನರು ನಾನಾ ಕರ್ಮಗಳನ್ನು ಮಾಡುತ್ತಾರೆ. ಆದರೆ ಹರಿದಾಸರು ಅವರಿಗೆ ಹರಿಭಕ್ತಿಸಾರವನ್ನು ತಿಳಿಸುವುದರ ಮೂಲಕ ಜ್ಞಾನದೆಡೆಗೆ ಕೊಂಡೊಯ್ಯುವ ಮಹಾಕಾರ್ಯವನ್ನು ಮಾಡುತ್ತಾರೆ. ಇಲ್ಲಿ ಗೂಡು ದೇಹದ ಸಂಕೇತವಾಗಿದ್ದು ಜೀವಾತ್ಮನನ್ನು ಪರಮಾತ್ಮನೆಡೆಗೆ ಕೊಂಡೊಯ್ಯಲು ಹರಿಭಕ್ತಿಯ,ಆಧ್ಯಾತ್ಮಿಕ ಚಿಂತನೆಯ ಅಗತ್ಯವನ್ನು ಮನಗಾಣಬಹುದು.

ಗಿಳಿ : ಇದು ಬಿಡುಗಡೆಯ ಸಂಕೇತವಾಗಿದೆ.

ಗಿಳಿಯು ಪಂಜರದೊಳಿಲ್ಲ
ಶ್ರೀರಾಮ ಶ್ರೀರಾಮ ಬರಿದೇ ಪಂಜರವಾಯ್ತಲ್ಲ

ಅಕ್ಕ ನಿನ್ನ ಮಾತ ಕೇಳಿ ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕ ನಾನಿಲ್ಲದ ವೇಳೆ ಬೆಕ್ಕು ಕೊಂಡು ಹೋಯಿತಯ್ಯೋ (೩೫೧)

'ಗಿಳಿಯು ಪಂಜರದೊಳಿಲ್ಲ ಕೀರ್ತನೆಯಲ್ಲಿ ಶ್ಲೇಷೆ, ಅಲಂಕಾರಿಕ ಶಬ್ದಗಳನ್ನು ಬಳಸದೇ ಎರಡು ಮೈಗಳನ್ನು ಒಡೆದುಕೊಳ್ಳುತ್ತ ಸಾಗಿದೆ. ದೇಹದಿಂದ ಬಿಡುಗಡೆ ಪಡೆಯುವ ಆತ್ಮದ ಬಗೆಗೆ ಪುರಂದರ ದಾಸರು ಚಿಂತಿಸಿದ್ದಾರೆ. ಇಲ್ಲಿ ನಡೆದ ಘಟನೆಯನ್ನೇ ಇನ್ನೊಬ್ಬರಿಗೆ ವಿವರಿಸುವಂತದ್ದು ಅದು ಈ ರೀತಿ ಇದೆ.

ಅಕ್ಕ ನಿನ್ನ ಮಾತು ಕೇಳಿ ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕ ನಾನಿಲ್ಲದ ವೇಳೆ ಬೆಕ್ಕು ಕೊಂಡು ಹೋಯಿತಯ್ಯೋ
ಅರ್ತಿಗೊಂದು ಗಿಳಿಯ ಸಾಕಿದೆ ಮುತ್ತಿನ ಹಾರವ ಹಾಕಿದೆ

"ಇಲ್ಲಿ ಬರುವ ಗಿಳಿಯ ಪ್ರತಿಮೆ ತನ್ನ ಚೌಕಟ್ಟಿನ ಪರಿಭಾಷೆಯನ್ನೇ ಭದ್ರವಾಗಿ ಆಶ್ರಯಿಸುತ್ತ ಅತ್ಯಂತ ಗಂಭೀರವಾಗಿ ವಿಷಯ ಚಿಂತನದ ಕಡೆಗೆ ನಮ್ಮನ್ನು ಎಳೆದೊಯ್ಯುತ್ತದೆ. ಭಾಷೆ ಬಲು ಸರಳವಾಗುತ್ತ ವರ್ಣಿತ ವಸ್ತುವನ್ನು ತುಂಬ ಜಟಿಲವಾಗಿಸುತ್ತ ಸಾಗಿಸುವುದು. ಈ ಕೀರ್ತನೆಯ ವೈಶಿಷ್ಯ. ಮಕ್ಕಳ ಹಾಡಿನ ಪುಸ್ತಕಗಳಲ್ಲೂ ಸೇರಿಸುವಷ್ಟು ಸರಳವಾಗಿವೆ ಈ ಕೀರ್ತನೆ"೨. ಇಲ್ಲಿ ಗಿಳಿ ಎತ್ತಲೋ ಓಡಿ ಹೋಗಿರುವುದು ದೇಹದಿಂದ ಆತ್ಮವು ಪಡೆಯುವ ಬಿಡುಗಡೆಯ ಸಂಕೇತವಾಗಿದೆ. ಕೊನೆಗೆ "ಅಂಬರಕೆ ಹಾರಿ ಹೋಯಿತು ಅಂಗಯ್ಯಲಾಡುವ ಗಿಳಿ. ಮುಂಗಯ್ಯ ಮೇಲಣ ಗಿಳಿ ರಂಗ ಪುರಂದರ ವಿಠಲನಂತೆ.ರಂಗದಿ ಭಜಿಸುವ ಗಿಳಿ" ಎಂಬಲ್ಲಿ ಭಕ್ತಿಮಾರ್ಗದ ಮೂಲಕ ಜೀವಾತ್ಮವು ಪರಮಾತ್ಮನೆಡೆಗೆ ಸಾಗಿ ಮೋಕ್ಷವನ್ನು

ಪಡೆಯುವುದನ್ನು ಸೊಗಸಾಗಿ ಚಿತ್ರಿಸಿದೆ. ದಾಸರ ಆಧ್ಯಾತ್ಮಿಕ ಚಿಂತನೆಯು ಇಲ್ಲಿ ಸರಳವಾಗಿ ಮನಮುಟ್ಟುವಂತೆ ಚಿತ್ರಿತವಾಗಿದೆ. ಆಧ್ಯಾತ್ಮಿಕ, ಅಮೂರ್ತ ವಿಚಾರಗಳನ್ನು ಮೂರ್ತರೂಪಕ್ಕಿಳಿಸುವಲ್ಲಿ ಗಿಳಿಯ ಪ್ರತಿಮೆಯು ಯಶಸ್ವಿಯಾಗಿದೆ.

ಹದ್ದು : ಇದು ಸಾವಿನ ಸಂಕೇತವಾಗಿದೆ.

ನಾಳೆ ನಾಡಿದು ಎಮದು ಹೀಗೆ ಬಾಳುವ ಕಾಲದಿ ಯಮನು
ಕೋಳಿ ಪಿಳ್ಳೆಯಾಡುವಾಗ ಹಾಳಿಹದ್ದಿನಂತೆ ಒಯ್ಯುವ (೧೩೮)

ಇಲ್ಲಿ ಹದ್ದು ಯಮನ ಪ್ರತಿನಿಧಿಯಾಗಿದ್ದು ಇದು ಮಾನವನ ಸಾವನ್ನು ಸೂಚಿಸುತ್ತದೆ. ಮಾನವನು ತನ್ನ ಕಾಯಕವನ್ನು ಇಂದೇ ಈಗಲೇ ಮಾಡಬೇಕು.'ನಾಳೆ ಎಂದವನ ಮನೆ ಹಾಳು' ಎಂಬ ಮಾತಿದೆ. ಯಾವುದೆ ಕಾರ್ಯವನ್ನು ನಾಳೆ ಮಾಡುವೆ ಎಂದರಾಗದು. ಅಷ್ಟರಲ್ಲಿ ಯಮನು ಕೋಳಿಮರಿಯನ್ನು ಹದ್ದು ಕೊಂಡೊಯ್ಯುವಂತೆ ಕೊಂಡೋಗಬಹುದು.

೫.೩ ಸಾಮಾಜಿಕ ಜಗತ್ತು

ಯಾವುದೇ ಸಾಹಿತ್ಯವು ಸಮಾಜದಿಂದ ಪೂರ್ತಿಯಾಗಿ ಹೊರತಾಗಿರಲು ಸಾಧ್ಯವಿಲ್ಲ. ಕವಿ ತನ್ನ ಕಾಲದ ಸಮಾಜದ ಚೌಕಟ್ಟಿನೊಳಗೇ ಚಿಂತನೆಯನ್ನು ನಡೆಸಿ ಎಲ್ಲಾ ಕಾಲಗಳಿಗೂ ನಿಲ್ಲಬಲ್ಲ ಮೌಲ್ಯಗಳನ್ನು ಪ್ರತಿಪದಿಸುತ್ತಾನೆ. ಸಮಾಜವು ಸತ್ಯದರ್ಶನದ ಕನ್ನಡಿಯಾಗಿದೆ. ಸಾರ್ವಕಾಲಿಕ ದೃಷ್ಟಿ, ಸಾಮಾಜಿಕ ಪ್ರಜ್ಞೆಗಳೆರಡೂ ಪೂರಕವಾಗಿದ್ದು ಇವುಗಳನ್ನು ನಾವು ದಾಸರ ಕೀರ್ತನೆಗಳಲ್ಲಿ ಕಾಣಬಹುದು.

ಸಂಸಾರ

ಸಾಂಸಾರಿಕ ಅಥವಾ ಕೌಟುಂಬಿಕ ಪ್ರತಿಮೆಗಳು ಪುರಂದರದಾಸರ ಕೀರ್ತನೆಗಳಲ್ಲಿ ಧಾರಾಳವಾಗಿ ಬಂದಿದೆ.

ಇಬ್ಬರ್ಹೆಂಡಿರ ಸುಖವು ಇಂದು ಕಂಡೆನಯ್ಯ
ಅಬ್ಬಬ್ಬ ಎಂದಿಗೂ ಸಾಕು ಸಾಕಯ್ಯ

ಒಬ್ಬಳಲಿ ಪೋಗಿ ಓಗರವ ಮಾಡೆನ್ನಲು
ಬೊಬ್ಬೆಯೇನಿದು ಕೊಬ್ಬೆ ನಡೆಯೆಂದಳು
ತಬ್ಬಬ್ಬುಗೊಂಡು ಇನ್ನೊಬ್ಬಳನು ಮಾಡೆನಲು
ಅಬ್ಬ ಬಿಸಿ ಮುಟ್ಟಲಾಪೆನೆ ಎಂದಳು

ಹಿರಿಯವಳ ಕೂಡಿಯು ಸರಸವಾಡುವೆನೆಂದು
ಇರುಳು ಉಪ್ಪರಿಗೆ ನಾನೇರುತಿರಲು
ಚರಣವೊಬ್ಬಳು ಪಿಡಿದು ಶಿರವನೊಬ್ಬಳು ಪಿಡಿದು
ಸರಸರನೆ ಕೆಳಗೆ ಮೇಲೆಳೆಯುತಿಹರಯ್ಯ (೧೧೦)

ಲೌಕಿಕ ಅಧ್ಯಾತ್ಮಗಳ ನಡುವಣ ದ್ವಂದ್ವವನ್ನು ಈ ಕೀರ್ತನೆಯಲ್ಲಿ ಕಾಣಬಹುದು. ಇಲ್ಲಿಯ ಗಂಡನಿಗೆ ಇಬ್ಬರು ಹೆಂಡಿರು. ಆತನು ಇಬ್ಬರನ್ನೂ ತೃಪ್ತಿಪಡಿಸಲು ಹೋಗಿ ಕಷ್ಟದಲ್ಲಿ ಸಿಲುಕುವ ಚಿತ್ರಣ ಇಲ್ಲಿದೆ. ಮಾನವನು ಲೌಕಿಕ ಆಧ್ಯಾತ್ಮಿಕ ದ್ವಂದ್ವಗಳ ನಡುವೆ ಸಿಲುಕಿ ಲೌಕಿಕ ಸುಖವನ್ನು, ಆಧ್ಯಾತ್ಮಿಕ ಸುಖವನ್ನು ಅನುಭವಿಸದೆ ಇರುತ್ತಾನೆ. ನಮ್ಮಲ್ಲಿ ದ್ವಂದ್ವ ಇರಬಾರದು. ಆಧ್ಯಾತ್ಮಿಕ ವಿಚಾರಗಳ ಬಗೆಗೆ ಸ್ಪಷ್ಟ ನಿಲುವು, ನಂಬಿಕೆ ನಮ್ಮಲ್ಲಿರಬೆಕು.

ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ
ಜೋಡು ಹೆಂಡಿರಂಜಿ ಓಡಿಹೋಗುವಾಗ
ಗೋಡೆ ಬಿದ್ದು ಬಯಲಾಯಿತಲ್ಲಾ
ಎಚ್ಚರಗೊಳಲಿಲ್ಲಾ ಮನವೇ ಹುಚ್ಚನದೇನಲ್ಲಾ

ಅಚ್ಚಿನೊಳಗೆ ಮೆಚ್ಚು ಮೆಚ್ಚಿನೊಳಗೆ ಅಚ್ಚು
ಕಿಚ್ಚಿದ್ದು ಹೋಯಿತಲ್ಲಾ (೭೨)

ಸಂಸಾರ ಸಾಗರದಲ್ಲಿ ಮುಳುಗಿ ಬಾಳ ಸಂಜೆಯಲ್ಲಿ ವ್ಯಥೆ ಪಡುವ ಮಾನವನ ಬದುಕಿನ ಚಿತ್ರಣ ಇಲ್ಲಿದೆ. ಈ ಮೇಲಿನ ಕೀರ್ತನೆಗಳಲ್ಲಿ ಗಂಡನ ಕಡೆಯಿಂದ ಸಂಸಾರದ ಚಿತ್ರಣವು ನಿರೂಪಿತವಾಗಿದೆ.

ಸಂಸಾರವನ್ನು ಹೆಂಡತಿಯ ಕಡೆಯಿಂದ ನೋಡುವ ಪ್ರತಿಮೆ ಈ ಕೆಳಗಿನ ಕೀರ್ತನೆಯಲ್ಲಿದೆ.

ಈಸಲಾರೆನು ಈ ಸಂಸಾರದಲಿ
ಲೇಸು ಕಾಣೆನೆ ಇದರಲ್ಲಿ ಹೇ ಸಖಿಯೇ ಕೇಳೆ
ಅತ್ತಿಗೆಯರು ಅತಿ ವ್ಯಭಿಚಾರಿಯರಮ್ಮ ಎಡೆಬಿಡದೆ ಎನ್ನ
ಸುತ್ತಮುತ್ತ ಕಾದಿಹರೆ ನೋಡಮ್ಮ ಅವರಂತೆ ಎನ್ನ
ಚಿತ್ತದಲೆ ತಿಳಿದಿಹರೆ ಕೇಳಮ್ಮ ಇವರೆಲ್ಲರ ಹಮ್ಮ
ಒತ್ತಿ ಆಳುವರಿಲ್ಲೇ ದುಷ್ಕರ್ಮ ಜೊತೆ ಹಾಕಿದ ಬ್ರಹ್ಮ (೧೩೨)

ಸಂಸಾರ ಸಾಗರದಲ್ಲಿ ಮುಳುಗಿ, ನೊಂದು ಹೋದ ಬದುಕಿನ ಚಿತ್ರಣ ಇಲ್ಲಿದೆ. ಸಂಸಾರ ಹದಗೆಟ್ಟಾಗ ಬದುಕು ಭಾರವಾಗುತ್ತದೆ. ಇಲ್ಲಿ 'ವ್ಯಭಿಚಾರಿ' ಸ್ವಾರ್ಥದ ಸಂಕೇತವಾಗಿದೆ. 'ದುರುಳರಾರ್ವರು ಭಾವ ಮೈದುನರೆ' ಎಂಬಲ್ಲಿ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ನಮ್ಮನ್ನು ಪಾಪಕಾರ್ಯದೆಡೆಗೆ ಕೊಂಡೊಯ್ಯುತ್ತದೆ ಎಂಬ ಭಾವವಿದೆ. ಒಟ್ಟಿನಲ್ಲಿ ಈ ಪ್ರತಿಮೆಯಲ್ಲಿ ಬದುಕಿನ ಜಂಜಾಟದ ಚಿತ್ರಣವಿದೆ.

ಪುರಂದರದಾಸರ ಕೀರ್ತನೆಗಳಲ್ಲಿ ಸಂಸಾರದ ಬಗೆಗೆ ನೊಂದ ಚಿತ್ರಣಗಳಿರುವಂತೆ ಸಂಸಾರದ ಕಷ್ಟಗಳನ್ನೆದುರಿಸಿಯೂ ನಾವು ಬಾಳಬೇಕೆಂಬ ಸಂದೇಶವೂ ಇದೆ. ಅದನ್ನು ಈ ಕೀರ್ತನೆಯಲ್ಲಿ ಗುರುತಿಸಬಹುದು.

ಈಸಬೇಕು ಇದ್ದು ಜಯಿಸಬೇಕು
ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಡದ್ಹಾಗೆ
ತಾಮರಸ ಜಲದಂತೆ ಪ್ರೇಮವಿಟ್ಟು ಭವದೊಳು
ಸ್ವಾಮಿರಾಮ ಎನುತ ಪಾಡಿ ಕಾಮಿತ ಕಯ್ಗೊಂಬರೆಲ್ಲ

ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ
ಮೀರಿಯಾಸೆ ಮಾಡದೆಲೆ ಧೀರ ಕೃಷ್ಣನ ಭಕುತರೆಲ್ಲ
ಮಾಂಸದಾಸೆಗೆ ಮತ್ಸ್ಯ ಸಿಲುಕಿ ಹಿಂಸೆ ಪಟ್ಟ ಪರಿಯಂತೆ
ಮೋಸ ಹೋಗದ್ಹಾಗೆ ಜಗ ದೀಶ ಪುರಂದರ ವಿಠಲನ ನೆನೆದು (೧೩೧)

ಸಂಸಾರದಲ್ಲಿ ಎಷ್ಟೇ ಕಷ್ಟ ನಷ್ಟಗಳು ಬಂದರೂ ನಾವು ಧೃತಿಗೆಡಬಾರದು;ಅವುಗಳನ್ನೆಲ್ಲ ಎದುರಿಸಿ ಬದುಕಬೇಕು. ಇಲ್ಲಿ 'ಗೇರು ಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ' ಎಂದು ನೀಡಿರುವ ಹೋಲಿಕೆ ಬಹಳಷ್ಟು ಅರ್ಥಪೂರ್ಣವಾಗಿದೆ. ಗೇರುಹಣ್ಣಿನಬೀಜ ಹೊರಗಿರುವಂತೆ ಸಂಸಾರದಲ್ಲಿದ್ದರೂ ಅದರಲ್ಲಿ ಮುಳುಗದೆ ತನ್ನತನವನ್ನು ಉಳಿಸಿಕೊಳ್ಳಬೇಕು. ಇದೇ ಭಾವವು 'ಇರಬೇಕು ಇಲ್ಲದಿರಬೇಕು ಹರಿದಾಸರು ಸಂಸಾರದೊಳಗೆ' ಕೀರ್ತನೆಗಳಲ್ಲಿ ವ್ಯಕ್ತಗೊಂಡಿದೆ.

ಬೆಂದ ಸಂಸಾರೆಂಬ ಬೇನೆ ಮಧ್ಯದಲಿ
ನೊಂದೆನೊ ನಾ ಬಹಳ ಕರೆ ಕರೆಯಲ್ಲಿ (೧೧೪)

ಸಂಸಾರದಲ್ಲಿ ಅನೇಕ ಬಗೆಯ ನೋವು, ದುಃಖಗಳು ಇರುವಂತಹದ್ದೇ. ಒಂದು ವಸ್ತು ಬೇಯಬೇಕಾದರೆ ಅದಕ್ಕೆ ಬೆಂಕಿಯ ಬಿಸಿ ಮುಟ್ಟಬೇಕು.ಸಂಸಾರದ ನೋವುಗಳು ಬೆಂಕಿಯ ಹಾಗೆ ಸಂಸಾರದ ಕಷ್ಟದಿಂದ ನೊಂದ ಜೀವದ ಬಗೆಗೆ ಪರಿಣಾಮಕಾರಿಯಾಗಿ ಹೇಳುವಲ್ಲಿ 'ಬೆಂದ ಸಂಸಾರ' ಪದದ ಬಳಕೆ ಯಶಸ್ವಿಯಾಗಿದೆ.

ಭಂಡನಾದೆನು ನಾನು ಸಂಸಾರದಿ
ಕಂಡು ಕಾಣದ ಹಾಗೆ ಇರಬಹುದೆ ಹರಿಯೆ

ಕಂಡ ಕಲ್ಲುಗಳಿಗೆ ಕೈಮುಗಿದು ಸಾಕಾದೆ
ದಿಂಡೆಗಾರರ ಮನೆಗೆ ಬಲು ತಿರುಗಿದೆ
ಶುಂಡಾಲನಂತೆನ್ನ ಮತಿ ಮಂದವಾಯಿತೈ
ಪುಂಡರೀಕಾಕ್ಷ ನೀ ಕರುಣಿಸೈ ಬೇಗ (೬೭೧)

ಸಂಸಾರದಲ್ಲಿ ನೊಂದು ಬೆಂದು ಹತಾಶೆಗೊಂಡ ವ್ಯಕ್ತಿಯ ನೋವನ್ನ ಇಲ್ಲಿ ಕಾಣಬಹುದು. 'ಕಂಡ ಕಲ್ಲುಗಳಿಗೆ ಕೈಮುಗಿದು ಸಾಕಾದೆ' ಎಲ್ಲ ದೇವರಿಗೂ ಕೈಮುಗಿದು ಕಷ್ಟ ಪರಿಹಾರವಾಗದಿದ್ದಾಗ ನಿಂದೆಯೊಂದಿಗೆ ದೇವರನ್ನು ಸ್ತುತಿಸುವುದನ್ನು ಕಾಣಬಹುದು.

ಕದವ ಮುಚ್ಚಿದಳಿದಕೋ ಗಯ್ಯಾಳಿ ಮೂಳಿ
ಕದವ ಮುಚ್ಚಿದಳಿದಕೋ ಚಿಲುಕ ಅಲ್ಲಾಡುತಿದೆ
ಒದಗಿದ್ದ ಪಾಪವು ಹೋದೀತು ಹೊರಗೆಂದು (೨೭೧)

"ದಾಸರು ಭಿಕ್ಷೆಗೆ ಹೋದಾಗ ಅವರನ್ನು ಇತರ ಭಿಕ್ಷುಕರಂತೆಯೇ ಕಂಡು ಬಾಗಿಲನ್ನು ಬಡಿದುಕೊಂಡ ಒಂದು ಹೆಣ್ಣಿನ ಮೇಲಿನ ಆಕ್ರೋಶ ಇಲ್ಲಿ ನಿರೂಪಿತವಾಗಿದೆ. ವಾಸ್ತವವಾಗಿ ಇದು ಅಂಥ ಹೆಣ್ಣುಗಳ ಮೇಲಿನ ಸಿಟ್ಟಿನ ಪ್ರತಿಕ್ರಿಯೆ ಮಾತ್ರವಲ್ಲ. ಹರಿದಾಸರಂಥ ಮುಕ್ತಜೀವಿಗಳು ಹಾಡು ಹೇಳಿಕೊಂಡು ಮನೆಮನೆಗೆ ಸಾಹಿತ್ಯ-ಧರ್ಮ ಪ್ರಸಾರ ಮಾಡುತ್ತಿರುವಾಗ ಜನ ಮನಸ್ಸಿನ ಬಾಗಿಲು ತೆರೆದು ಇಂಥ ತತ್ವದ ಪದಗಳಿಗೆ ಕಿವಿಕೊಡದೆ ಬದುಕಿನ ಬಾಗಿಲನ್ನೇ ಇಕ್ಕಿಕೊಳ್ಳುತ್ತಿದ್ದಾರಲ್ಲ ಎಂಬ ಸಂಕಟದ ಭಾವವೂ ಈ ಸಿಟ್ಟಿನ ಹಿಂದೆ ಕೆಲಸ ಮಾಡುತ್ತದೆ."೩ ದುಷ್ಟ ಸ್ವಭಾವದ ಹೆಂಗಸು ಮಾಡಿದ ಪಾಪವು ಹೊರಗೆ ಹೋದೀತೆಂದು ಬಾಗಿಲು ಹಾಕಿ ಚಿಲಕ ಹಾಕಿರುವ ಚಿತ್ರಣವು ಮಾನವನು ಪಾಪವನ್ನು ಮಾಡಿಯೂ ಅದರ ಬಗೆಗೆ ಅರಿಯದಿರುವುದರ ಸಂಕೇತವಾಗಿದೆ. ಪಾಪವು ಹೊರಗೆ ಹೋದೀತೆಂದು ಹೇಳುವಲ್ಲಿ ಮನುಷ್ಯನ ಅಜ್ಞಾನದ ಪರಮಾವಧಿಯನ್ನು ಕಾಣಬಹುದು.

ಗಂಡ ಬಂದ ಹೇಗೆ ಮಾಡಲೇ ಅಯ್ಯಯ್ಯೋ ಪಾಪಿ
ಪಂಚಮಹಾಪಾತಕಿ ಗಂಡ ಹೊಂಚಿಕ್ಕಿ ನೋಡಿಕೊಂಡು
ವಂಚನೆಯಿಂದಲಿ ಗುಡುಗು ಮಿಂಚಿನಂತೆ ಬಂದು ನಿಂತ
ಮಂಚದ ಕೆಳಗಾರು ಹೊಕ್ಕೊಳ್ಳೆ ನಿಧಿ ಹಿಡಿಸುವಂಥ
ಸಂಚಿಯೊಳಗಾದರು ಕೂಡಲೊ ಧಾನ್ಯದ ದೊಡ್ಡ
ಹಂಚಿನ್ಹರವಿಯಲ್ಲಿ ಅಡಗಲೊ (೩೪೪)

ಇಲ್ಲಿ ಸಂಸಾರದ ಇನ್ನೊಂದು ಮುಖವನ್ನು ಕಾಣಬಹುದು. "ಅದು ಇಷ್ಟಪಟ್ಟು 'ಇಟ್ಟುಕೊಂಡದ್ದು' ಪರಪುರುಷನೊಂದಿಗೆ ಸಂಪರ್ಕವಿರಿಸಿಕೊಂಡ ಗೃಹಿಣಿಯ ಚಿತ್ರಣ ಕೆಲವೆಡೆ ಬಂದಿದೆ. ಇಲ್ಲಿ ವ್ಯಭಿಚಾರವೆನ್ನುವುದು 'ಇಹ'ದ ಸಂಸಾರದ ದುಃಸ್ಥಿತಿಯಿಂದ ಪರದೆಡೆಗೆ ಪಾರಾಗಲು ಕಂಡುಕೊಂಡ ದಾರಿಯಾಗಿ ಕಾಣುತ್ತದೆ. ಈ ಅರ್ಥದಲ್ಲೂ ಪರಪುರುಷನು ನಿಜವಾಗುತ್ತಾನೆ. ಪರಪುರುಷನೊಂದಿಗಿದ್ದ ಗೃಹಿಣಿಯ ಸಂದಿಗ್ಧ ಸನ್ನಿವೇಶವೊಂದನ್ನು ಈ ಕೀರ್ತನೆ ಕಟ್ಟಿಕೊಡುತ್ತದೆ" ೪

ಸಾಕು ಸಂಸಾರ ಸಜ್ಜಾಗಿಲ್ಲ ಒಲ್ಲೆ ಒಗೆತನವ
ಆರು ಮಂದಿಯು ಗಂಡರಾಳುವರು ಎನ್ನ
ಆರು ಮಂದಿಗೆ ಮೂರು ಸುತರೆನಗೆ
ಆರು ಮೂರೇಳ್ವರು ಭಾವ ಮೈದುನರೆಲ್ಲ
ಆರೇನೆಂದರೆ ಬಿಡರು ಯಾರಿಗುಸಿರಲಮ್ಮ (೮೯೧)

....

ಶಿಥಿಲ ಸಂಸಾರದ ನೋವನ್ನು ಕಂಡ ಹೆಣ್ಣು ಸಂಸಾರದ ಬಗೆಗೆ ತೋರುವ ಅನಾದರವನ್ನು ಇಲ್ಲಿ ಕಾಣಬಹುದು. ಇಲ್ಲಿ ವ್ಯಕ್ತಿಯನ್ನು ಹೆಣ್ಣಾಗಿ ಕಾಣಲಾಗಿದ್ದು ಕೂಡಿ ಬಾಳಲಾರದ ಚಿತ್ರವನ್ನು ದಾಸರು ಕಟ್ಟಿದ್ದಾರೆ. ಈ ಹೆಣ್ಣಿಗೆ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ ಮೋಹ, ಮದ ಮತ್ಸರಗಳೆಂಬ ಆರು ಗಂಡಂದಿರು. ಕಾಯಿಕ,ವಾಚಿಕ, ಮತ್ತು ಮಾನಸಿಕ. ಪಾಪಗಳೆಂಬ ತ್ರಿದೋಷಗಳೇ ಮೂರು ಸುತರು. ಸ್ತ್ರೀ, ಅಕ್ಷ, ಮೃಗಯೆ, ಪಾನ, ವಾಕ್ಪಾರುಷ್ಯ, ದಂಡಪಾರುಷ್ಯ ಮತ್ತು ಅರ್ಥದೂಷಣೆಗಳೆಂಬ ಸಪ್ತ ವ್ಯಸನಗಳೇ ಭಾವಮೈದುನರು. ಇವರೆಲ್ಲ ಸಂಸಾರದ ಕಷ್ಟಕ್ಕೆ ಕಾರಣರಾಗಿದ್ದು ದಶಗುಣಗಳು, ಪಂಚೇದ್ರಿಯಗಳು ಇವೆಲ್ಲ ಸಂಸಾರದ 'ಕೂಡಿ ಬಾಳುವ' ಸುಖಕ್ಕೆ ಅಡ್ಡಿಯಾಗಿದ್ದಾರೆ ಎಂದು ಹಲುಬುವ ಹೆಣ್ಣಿನ ಮೂಲಕ ಸಂಸಾರದ ಬಗೆಗಿನ ದಾಸರ ವಿಮರ್ಶೆ ಅಪೂರ್ವವಾಗಿದೆ.

ಸುಣ್ಣವಿಲ್ಲ ಭಾಗವತರೆ
ನುಣ್ಣನೆ ಗೋಡೆಯ ನಿನ್ನೆ ತೊಡೆದು ಬಿಟ್ಟೆ

ವೀಳ್ಯ ಹಾಕುವನಲ್ಲ ವ್ಯಾಧಿಸ್ಥ ಗಂಡನು
ಬಾಳು ಸಟೆ ಎನ್ನ ಬಾಯಿ ನೋಡಿ
ಹಾಳು ಮನೆಯ ಹೊಕ್ಕು ಎನ್ನ ಒಡಲು ಉರಿಯುತಿದೆ
ಹೇಳಿ ಈ ಬದುಕನ್ನು ಪ್ರಯೋಜನವೇನು

ಮದ್ದು ತಿಂದು ತಿಂದು ಮನೆಯೆಲ್ಲ ಬರಿದಾಗಿ
ಹೊದ್ದಿತು ಮೂದೇವಿ ಮೈದುನಗೆ
ಮದ್ದಿಕ್ಕೊ ಸಂಚಿಯು ಭಂಗಿ ಮುಕ್ಕಿ ಭಾವ
ಬಿದ್ದುಕೊಳ್ಳುತ್ತಾನೆ ಒಳಗೆ ಕದವ ಮುಚ್ಚಿ

ತೊನ್ನು ಬಡಕ ಮಾವ ಅನ್ಯಕಾರಿ ಅತ್ತೆ
ಗನ್ನ ಘಾತಕಿ ರಂಡೆ ಅತ್ತಿಗೆಯು
ಎನ್ನ ಗೋಳು ತಾನೆ ನಾಶವೆಂದಿಗಹುದೊ
ಪನ್ನಗಶಯನ ಪುರಂದರವಿಠಲ (೯೦೫)

ವೀಳ್ಯವನ್ನು ಶುಭಕಾರ್ಯಗಳ ಸಂದರ್ಭದಲ್ಲಿ ವಿಶೇಷವಾಗಿ ಬಳಸುತ್ತಾರೆ. ವೀಳ್ಯ ಹಾಕಲು ಸುಣ್ಣ ಬೇಕು. ಆದರೆ ಇಲ್ಲಿ ಹೆಣ್ಣು 'ಸುಣ್ಣವಿಲ್ಲ ಭಾಗವತರೆ' ಎಂದು ಹೇಳಿರುವುದು ಶುಭದ ಸಂಕೇತವಲ್ಲ. ಈ ಹೆಣ್ಣಿನ ಸಂಸಾರದಲ್ಲಿ ಸುಖವಿಲ್ಲ. "ಕೀರ್ತನೆಯ ಪಲ್ಲವಿ ಮೇಲ್ನೋಟಕ್ಕೆ 'ಸುಣ್ಣವಿಲ್ಲ'ದಿರುವುದನ್ನು ಹೇಳಲು ಉದ್ದೇಶಿಸಿರುವಂತೆ ತೋರಿದರೂ ಮುಂದೆ ನುಡಿಯಲ್ಲಿ ಬರುವ ವಿವರಗಳು ಪಲ್ಲವಿಯನ್ನು ಕೇವಲ ನೆಪವಾಗಿಸಿಕೊಂಡು, ಆ ಉದ್ದೇಶವನ್ನು ಮೀರಿ ಸಂಸಾರದ ಶಿಥಿಲತೆಯ ಚಿತ್ರಣವನ್ನು ಬಿಚ್ಚುತ್ತ ಹೋಗುತ್ತವೆ". ೫

ಮುಪ್ಪಿನ ಗಂಡನ ಒಲ್ಲೆನು ನಾನು
ತಪ್ಪದೆ ಪಡಿಪಾಟ ಪಡಲಾರೆನಕ್ಕ

ಉದಯದಲ್ಲೇಳಬೇಕು ಉದಕಕಾಸಲು ಬೇಕು
ಬದಿಯಲ್ಲಿ ನಾನಿದ್ದು ಬಚೆ ಅರೆಯಬೇಕು
ಹದನಾಗಿ ಎಲೆ ಸುಣ್ಣ ಅಡಿಕೆ ಕುಟ್ಟಲು ಬೇಕು
ಬಿದಿರು ಕೋಲನು ಮುಂದೆ ಇಡಬೇಕಕ್ಕ (೭೪೫)

....

ವಯಸ್ಸಾದ ಗಂಡನ ಜೊತೆ ಉತ್ತಮ ಸಂಸಾರ ನಡೆಸುವುದು ಕಷ್ಟ. "ಇದರಲ್ಲಿ 'ಗಂಡ' ಮಾತ್ರ ಇದ್ದಾನೆ. ಅವನು ಮುಪ್ಪಿಗೆ ಬಂದಿರುವುದರಿಂದ ತಾನು ಪಡುತ್ತಿರುವ 'ಪಡಿಪಾಟ'ವನ್ನು ಕಣ್ಣಿಗೆ ಕಟ್ಟುವ ದೈನಂದಿನ ವಿವರಗಳೊಂದಿಗೆ ಹೆಂಡತಿ ಮುಂದಿಡುತ್ತಿದ್ದಾಳೆ. ಹೀಗಾಗಿ ಇಲ್ಲಿ ಸ್ಥಿರಿಸಲಾಗದ ಸಂಸಾರದ ಪ್ರತಿಮೆ ಮತ್ತಷ್ಟು ಮೂರ್ತವಾಗುತ್ತದೆ". ೬

ವಿಷ ಕುಡಿಯುತೇನೆ ನೋಡು ಗಂಡ ವಿಷ ಕುಡಿಯುತೇನೆ
ವಿಷ ಕುಡಿಯುತೇನೆ ಹಸನಾಗಿರುತಿರು
ಹಂಸದಂತೆ ದೇಹವ ಹತವ ಮಾಡುತೇನೆ (೮೩೨)

....

ಸಾಂಸಾರಿಕ ಬದುಕಿನಲ್ಲಿ ನೊಂದು ವಿಷ ಕುಡಿಯುವ ಚಿತ್ರಣ ಇಲ್ಲಿದೆ. "ಹಂಸದಂತೆ ದೇಹವ ಹತವ ಮಾಡುತ್ತೇನೆ" ಎಂಬಲ್ಲಿ ಹಂಸವು ಆತ್ಮದ ಸಂಕೇತವಾಗಿದ್ದು ಇಲ್ಲಿ ಲೌಕಿಕ ಬದುಕಿನ ಬಿಡುಗಡೆಯ ಭಾವವಿದೆ. "ಇದು ಇಹದ ಪಾಲಿಗೆ ಸಾಯಿಸುವ ವಿಷವಾಗಿ ಪರದ ಪಾಲಿಗೆ ಹುಟ್ಟಿಸುವ ಅಮೃತವಾತರುವುದರಿಂದ ಈ ಹಬ್ಬದ ಸಂಭ್ರಮ. 'ಪುರಂದರವಿಠಲನ ಚರಣವ ನೆನೆಯುತ ಎಂದೆಂದಿಗು ಜೀವ ಸತ್ತು ಪುಟ್ಟದಂತೆ (ವಿಷವ ಕುಡಿಯುತೇನೆ) ಎಂಬಲ್ಲಿ ಇದನ್ನು ಗಮನಿಸಬಹುದು"೭.

ಲೊಟಪಾಟ ಸಂಸಾರ ಏನಣ್ಣ
ಲೊಟಪಾಟ ಸಂಸಾರದೊಳಗೆ ಸಿಲುಕಿ ನಾ
ವಿಠಲ ನಿನ್ನ ಧ್ಯಾನವ ಮರೆತೆನಯ್ಯ

ಹುಟ್ಟಿದ್ದ ಮುಂಚೆ ಹಸಿವೆಯನರಿಯೆ
ಕೊಟ್ಟಿಗೆಯೊಳಗೆ ಎಂಟು ಆನೆಯ ಕಂಡೆ
ಮನೆಯ ಒಳಗೆ ಏಳು ಕುದುರೆಯ ಕಂಡೆ
ಕಿಲ್ಲೆಯೊಳಗೆ ಏಳು ಚರಣವ ಕಂಡೆ (೮೮೯)

ಈ ಸಂಸಾರವೆಂಬುದು ಮಿಥ್ಯೆ ಇಲ್ಲಿ ಬರುವ 'ಎಂಟು ಆನೆ'ಗಳು ಅಷ್ಟಭೋಗಗಳಾದ ಮನೆ, ಹಾಸುಗೆ, ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ ತಾಂಬೂಲ, ಎಂಬ ಅಷ್ಟಭೋಗಗಳ ಸಂಕೇತವಾಗಿದೆ. ಸಪ್ತ ವ್ಯಸನಗಳೇ ಮನೆಯೊಳಗಿನ ಏಳು ಕುದುರೆಗಳು. ಕೋಟೆಯೊಳಗಿನ ಏಳು ಚರಣಗಳಂದರೆ ಸಪ್ತ ವ್ಯಸನಿಗಳಿಂದಾದ ನಡೆಗಳು. ಅವುಗಳು ನಮ್ಮ ಬಂಧನದ ಸಂಕೇತವಾಗಿದೆ. ಹುಟ್ಟುವ ಮೊದಲು ಹಸಿವು ನೀರಡಿಕೆಗಳಿಲ್ಲ. ನಂತರ ಎಲ್ಲವಿದ್ದರೂ ದೇವರನ್ನು ಮರೆತು ಸುಖವಿಲ್ಲ. ಇದೇ ಕೀರ್ತನೆಯಲ್ಲಿ ಬರುವ 'ರೆಕ್ಕೆಯಿಲ್ಲದೆ ಹಾರ್ವ ಪಕ್ಷಿ' ಮತ್ತೆ ಭವಬಂಧನದ ಬಿಡುಗಡೆಯ ಸಂಕೇತವಾಗಿದೆ.

ಲೊಡಕ ಲೊಡಕ ಚಿಹ್ಮರ ಕೆಟ್ಟ ಸಂಸಾರವು ನೋಡಮ್ಮಮ್ಮ
ಲೊಡಕ ಸಂಸಾರವು ನಮ್ಮೆಲ್ಲರ ಗತಿರಹಿತ
ಮಾಡುವ ಲೊಡಲೊಟ್ಟೆಮ್ಮ (೮೨೦)

....

ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ
ಆನೆ ಕುದುರೆ ಒಂಟೆ ಲೊಳಲೊಟ್ಟೆ ಬಲು
ಸೇನೆ ಭಂಡಾರವು ಲೊಳಲೊಟ್ಟೆ (೮೨೧)

ಈ ಮೇಲಿನ ಕೀರ್ತನೆಗಳಲ್ಲಿ ಸಂಸಾರವೆಂಬುದು ಬರೀ ಮಿಥ್ಯೆ ಎಂಬ ಭಾವ ವ್ಯಕ್ತವಾಗಿದೆ. ಸಂಸಾರದಲ್ಲಿ ಹೇಗಿರಬೇಕು ಎಂಬುದರ ಬಗ್ಗೆ ದಾಸರು ಈ ಕೀರ್ತನೆಯಲ್ಲಿ ಹೀಗೆ ಹೇಳಿದ್ದಾರೆ.

ಹೇಗಿರಬೇಕು ಸಂಸಾರದಲ್ಲಿ ಹೀಗೆ ಬರೆದಿರಲು ಪ್ರಾಚೀನದಲ್ಲಿ
ಆಡುವ ಮಕ್ಕಳು ಮನೆಯ ಕಟ್ಟಿದರು
ಆಡಿ ಸಾಕೆಂದು ಮುರಿದು ಓಡಿದರು (೯೯೩)

ಮಕ್ಕಳು ಆಟವಾಡಲು ಕಟ್ಟಿದ ಮನೆಯೇ ಸಂಸಾರ. ಆ ಮನೆಯನ್ನು ಮುರಿದು ಓಡುವುದೇ ಸಾವು. ಹೀಗೆ ಮಕ್ಕಳ ಮನೆಕಟ್ಟುವ ಆಟದಲ್ಲಿ ಸಂತೋಷವೂ ಇದೆ. ಅಂತೆಯೇ

ನಾವು ಸಂಸಾರವನ್ನು ಒಂದು ಆಟದಂತೆ ಸ್ವೀಕರಿಸಬೇಕೆಂಬಲ್ಲಿ ಸಂಸಾರದ ಬಗೆಗಿನ ದಾಸರ ದೃಷ್ಟಿಕೋನವು ನಮಗೆ ವಿನೂತನವಾಗಿ ಕಾಣುತ್ತದೆ.

ಹರಿಸ್ಮರಣೆಯಿಲ್ಲದೆ ಬಾಳಿಬದುಕಿದರೇನು
ನರಜನ್ಮದಲಿ ಜನಿಸಿ ಫಲವೇನು ಹರಿಯೆ

ನೊರಸಿಲ್ಲದಾ ಊಟ ನೂರು ಬಗೆಯಿದ್ದರೇನು
ನಾರಿಯಿಲ್ಲದ ಸಂಸಾರವೇನು
ಹೋರಿ ಹೆಣಗುವ ಮಕ್ಕಳು ನೂರಾರು ಇದ್ದರೇನು
ಪಾರಮಾರ್ಥ ತಿಳಿಯದಿಹ ಪುರುಷರೇನು (೯೭೦)

ಹೆಣ್ಣು ಸಂಸಾರದ ಕಣ್ಣು. ಹೆಣ್ಣಿಲ್ಲದೆ ಸಂಸಾರವೆನಿಸದು. ಅಂತೆಯೇ ಪಾರಮಾರ್ಥ ತಿಳಿಯದೆ, ಹರಿಸ್ಮರಣೆ ಮಾಡದೆ ಬಾಳಿ ಬದುಕಿ ಫಲವಿಲ್ಲ.

ಸಾವು

ಮಡದಿ ಮಕ್ಕಳು ಎಂದು ಒಡವೆ ವಸ್ತುಗಳೆಂದು
ಸಡಗರದಿ ತಾ ಕೊಂಡು ಭ್ರಮಿಸಲೇಕೆ
ಬಿಡದೆ ಯಮನಾಳುಗಳು ಬಾರೆಂದು ಎಳೆವಾಗ
ಮಡದಿ ಮಕ್ಕಳು ಕಡೆಗೆ ತೊಲಗುವರೂ ಮರುಳೆ (೧೩೩)

ಹುಟ್ಟಿದ ಪ್ರತಿಯೊಬ್ಬರೂ ಸಾಯಲೇಬೇಕು. ಸಾವು ಯಾವಾಗ ಯಾರಿಗೆ ಯಾವ ರೀತಿ ಬಂದೆರಗುತ್ತದೆಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಸಾವು ಬರುವಾಗ ನಮ್ಮೊಂದಿಗೆ ಮಡದಿ, ಮಕ್ಕಳು, ಸಂಸಾರ, ಸಂಪತ್ತು, ವೈಭವ ಯಾವುದೂ ಬರದು. ಈ ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ ಎಂಬ ತತ್ವ ಇಲ್ಲಿ ಅಡಗಿದೆ. ಇದೇ ಭಾವ "ಅರ್ತಿಯಾಗಿದೆ ಬದುಕು ಸಾಯಲಾರೆನು ಎನಲು ಮೃತ್ಯು ಹೆಡತಲೆಯಲ್ಲಿ ನಗುತಿರ್ಪಳಯ್ಯ" ಕೀರ್ತನೆಯಲ್ಲಿದೆ.

ಮನಸ್ಸು

ಮಲವ ತೊಳೆಯಬಲ್ಲರಲ್ಲದೆ ಮನವ ತೊಳೆಯಬಲ್ಲರೆ
ಹಲವು ತೀರ್ಥಂಗಳಲಿ ಮುಲುಗಿ ಹಲುಬಿದರೆ ಫಲವೇನು (೭೧೮)

ಅಂತರಂಗ ಶುದ್ಧಿಯಿಲ್ಲದೆ ಏನು ಮಾಡಿದರೂ ವ್ಯರ್ಥ ಎಂಬುದನ್ನು ಈ ಕೀರ್ತನೆ ಪ್ರತಿಪಾದಿಸುತ್ತದೆ. ಆದ್ದರಿಂದ ಅಂತರಂಗದ ಕೊಳೆಯನ್ನು ತೊಳೆಯಬೇಕು. ಅದನ್ನೇ ದಾಸರು ಇನ್ನೊಂದು ಕೀರ್ತನೆಯಲ್ಲಿ ಈ ರೀತಿ ಹಾಡಿದ್ದಾರೆ.

ಮುಸುರೆ ತೊಳೆಯಬೇಕು ಈ ಮನಸಿನ
ಮುಸುರೆ ತೊಳೆಯಬೇಕು
ಮುಸುರೆ ತೊಳೆಯಬೇಕು ಗುಸು ಗುಸು ಬಿಡಬೇಕು
ಈಶ ಪ್ರೇರಣೆಯೆಂಬೊ ಹಸಿಯ ಹುಲ್ಲನು ಹಾಕಿ
ಅಷ್ಟಮದದಿಂದ ಸುಟ್ಟ ಈ ಪಾತ್ರೆಯ
ವಿಷ್ಣುನಾಮವೆಂಬೊ ಕೃಷ್ಣಾ ನದಿಯಲ್ಲಿ (೭೪೯)

....

ಹುಲ್ಲನ್ನು ಹಾಕಿ ಸುಟ್ಟ ಪಾತ್ರೆಯನ್ನು ತೊಳೆಯುವಂತೆ ಮನಸಿನ ಕೊಳೆಯನ್ನು ವಿಷ್ಣುನಾಮವೆಂಬ ಕೃಷ್ಣಾನದಿಯಲ್ಲಿ ತೊಳೆಯಬೇಕು. ಭಗವಂತನ ನಾಮಸ್ಮರಣೆಯಿಂದ ಮನಶುದ್ಧಿ ಸಾಧ್ಯ ಎಂಬುದು ದಾಸರ ಅಭಿಮತ.

ಗೃಹಕೃತ್ಯ

ಅನುಭವದಡುಗೆಯ ಮಾಡಿ ಅದ

ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ

ತನುವೆಂಬ ಭಾಂಡವ ತೊಳೆದು ಕಟ್ಟ
.ಮನದ ಚಂಚಲವೆಂಬ ಮುಸುರೆಯ ಕಳೆದು
ಘನವಾಗಿ ಮನೆಯನ್ನು ಬಳಿದು ಅಲ್ಲಿ
ಮಿನುಗುವ ತ್ರಿಗುಣದ ಒಲೆಗುಂಡ ನಡೆದು (೪೦)

ಅಡುಗೆ ಮಾಡಲು ಮುಸುರೆ ಪಾತ್ರೆಯನ್ನು ತೊಳೆದು, ಪರಿಶುದ್ಧವಾಗಿ ಮಿಂದು ಮಡಿಯುಟ್ಟು, ನೀರಿಡುವುದು, ಸೌದೆಗೆ ಬೆಂಕಿ ಹಾಕುವುದು ಇತ್ಯಾದಿ ಅನೇಕ ಕಾರ್ಯಗಳಿವೆ. ಇಲ್ಲಿ ಅಡುಗೆ ಮಾಡುವುದರ ವಿವರಗಳನ್ನು ನೀಡುವುದರೊಂದಿಗೆ ಮನಶುದ್ಧಿಯ 'ಅಡುಗೆ' ಮಾಡಬೇಕಾದ ವಿವರಗಳಿವೆ. ಆದ್ದರಿಂದ ಇದು ಅನುಭವದಡುಗೆಯೂ ಹೌದು; ಅನುಭಾವದಡುಗೆಯೂ ಹೌದು.

ಆಚಾರ ವಿಚಾರ

ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ
ವಿಚಾರವಿಲ್ಲದೆ ಪರರ ದೂಷಿಪುದಕ್ಕೆ ಚಾಚಿಕೊಂಡಿರುವಂಥ ನಾಲಗೆ (೫೮)

ಇಲ್ಲಿ ಇನ್ನೊಬ್ಬರ ಬಗೆಗೆ ದೂಷಿಸುವ ಮಾನವನ ನೀಚತನದ ಬಗ್ಗೆ ಹೇಳಲಾಗಿದೆ.

ಡಂಗುರವ ಸಾರಿ ಹರಿಯ ಡಿಂಗರಿಗರೆಲ್ಲರು ಭೂ
ಮಂಡಲಕ್ಕೆ ಪಾಂಡುರಂಗ ವಿಠಲನೆ ಪರ ದೈವವೆಂದು

ಒಡಲ ಜಾಗಟೆಯ ಮಾಡಿ ನುಡಿವ ನಾಲಿಗೆಯ ಪಿಡಿದು
ಬಿಡದೆ ಢಣಢಣರೆಂದು ಬಡಿದು ಚಪ್ಪಳಿಕ್ಕುತ್ತ (೪೦೮)

ಈ ದೇಹವನ್ನು ಜಾಗಟೆ ಮಾಡಿ ಡಂಗುರವನ್ನು ಸಾರಬೇಕು. ಅಂದರೆ ಹರಿಭಕ್ತರ ದೇಹವು ಡಂಗುರದ ಜಾಗಟೆಯಂತೆ ಹರಿಭಕ್ತಿಸಾರವನ್ನು ಪ್ರಸಾರಮಾಡಬೇಕು.

ಸಾಮಾಜಿಕ ವಿಡಂಬನೆ

ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರಿ
ಕಣಕ ಕುಟ್ಟೋ ಅಲ್ಲಿಗೆ ಹೋಗಿ ಹಣಕಿ ಇಣಿಕಿ ನೋಡುವಿರಿ
ಕಣಕ ಕುಟ್ಟೋ ಒನಕೆಲಿ ಬಡಿದರೆ
ಕೈಂ ಕುಯಿ ರಾಗವ ಮಾಡುವಿರಿ (೪೧೦)

ಜನರಿಗೆ ಪೊಳ್ಳು ಭರವಸೆಗಳನ್ನು ನೀಡುವ ರಾಜಕಾರಣಿಗಳ ಬಗ್ಗೆ ವಿಡಂಬನಾತ್ಮಕವಾಗಿ ದಾಸರು 'ಡೊಂಕು' ಬಾಲದ ನಾಯಕರೆ' ಎಂದು ಛೇಡಿಸಿದ್ದಾರೆ. ನಾಯಿ ಬಾಲ ಯಾವತ್ತೂ ಡೊಂಕು.ಅಂತೆಯೇ ನಾಯಕರ ಬುದ್ಧಿಯೂ ಡೊಂಕು ಎಂಬುದನ್ನು ಸೊಗಸಾಗಿ ಹಾಸ್ಯದೊಂದಿಗೆ ಹೇಳಿದ್ದಾರೆ. ದಾಸರ ಸಾಮಾಜಿಕ ವಿಮರ್ಶೆಯನ್ನು ಇಲ್ಲಿ ಕಾಣಬಹುದು.

"ಇದರಲ್ಲಿ ಬರುವ ಶಬ್ದಚಿತ್ರ ಹಾಗೂ ಪ್ರಾಸಬದ್ಧವಾದ ಮಾತುಗಳು ಹಾಸ್ಯಕ್ಕೆ ಕಾರಣವಾಗಿವೆ. ಇದೊಂದು ಪುಟ್ಟ ಕಥೆಯಾದರೂ ಇದರಲ್ಲಿ ವಿಡಂಬನೆ ಇಲ್ಲದೆ ಇಲ್ಲ. ಆ ನಾಯಿಯಂತೆಯೇ ಪ್ರಪಂಚದ ಜನರು ತಮಗೆ ನಿಲುಕದ ವಸ್ತುಗಳನ್ನು ಗಳಿಸಲು ಅತಿಕ್ರಮ ಪ್ರವೇಶ ಮಾಡಿ ಕ್ಲೇಶಕ್ಕೆ ಗುರಿಯಾಗುವರೆಂಬ ಧ್ವನಿ ಇದರಲ್ಲಿ ನಾವು ಗುರುತಿಸಬಹುದು". ೮

೫.೪ ಧಾರ್ಮಿಕ ಜಗತ್ತು

'ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ' ಎಂದು ಸಾರಿದ ಪುರಂದರದಾಸರ ಧಾರ್ಮಿಕ ಚಿಂತನೆಗಳು ವಿನೂತನವಾದುದು. ಪುರಂದರದಾಸರ ಸಮಗ್ರ ದಾಸ ಸಾಹಿತ್ಯ ಧಾರ್ಮಿಕತೆಯೆಡೆಗೇ ಕೇಂದ್ರಿತವಾಗಿದೆ. ಅವರ ಕೀರ್ತನೆಗಳಲ್ಲಿ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತಾತ್ವಿಕ ಚಿಂತನೆಗಳು ಅಡಗಿವೆ. ಆತ್ಮನಿವೇದನೆ, ಆಚರಣೆಗಳು, ಲೋಕ ವಿಡಂಬನೆ ಮೊದಲಾದ ರೀತಿಯಲ್ಲಿ ಅಮೂಲ್ಯವಾದ ಧಾರ್ಮಿಕ ಚಿಂತನೆಗಳು ಪ್ರತಿಮೆಗಳಾಗಿ ನಮ್ಮ ಮುಂದೆ ತೆರೆದು ನಿಲ್ಲುತ್ತವೆ.

ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ
ಪೆರ್ಮೆಯಿಂ ದೇಹವ ನಂಬಬೇಡಿ ಕಾಣಿರೊ
ಅಟ್ಟ ಅಡುಗೆ ಕೊಡಲು ಬಿಡನು ಕೊಟ್ಟ ಸಾಲ ಕೇಳಬಿಡನು
ಪೆಟ್ಟಿಗೆಯೊಳಗಿದ್ದ ಚಿನ್ನವ ತೊಟ್ಟೇನೆಂದರೆ ಯಮನು ಬಿಡನು (೪೭೨)

....

ಈ ಬದುಕಿನಲ್ಲಿ ಸಾವು ಅನಿಶ್ಚಿತ. ಆದ್ದರಿಂದ ಇರುವಷ್ಟು ಕಾಲದಲ್ಲಿ ನಾವು ಒಳ್ಳೆಯ ಮಾರ್ಗದಲ್ಲಿ ನಡೆದು ಪುಣ್ಯ ಸಂಪಾದಿಸಿದರೆ ಅದೇ ನಮ್ಮ ಸಂಬಳ. ಅಂತಹ ಸಂಬಳವನ್ನು ಗಳಿಸಿ ಎಂಬುದು ದಾಸರ ಅಭಿಮತ.

ತಾರಕ್ಕ ಬಿಂದಿಗೆ ನಾ ನೀರಿಗ್ಹೋಗುವೆ ತಾರೇ ಬಿಂದಿಗೆಯ
ಬಂದಿಗೆ ಒಡೆದರೆ ಒಂದೇ ಕಾಸು ತಾರೇ ಬಂದಿಗೆಯ

ರಾಮನಾಮವೆಂಬೋ ರಸವುಳ್ಳ ನೀರಿಗೆ ತಾರೇ ಬಿಂದಿಗೆಯ
ಕಾಮಿನಿಯರ ಕೂಡೆ ಏಕಾಂತವಾಡೇನು ತಾರೇ ಬಿಂದಿಗೆಯ (೪೨೩)

ನೀರು ತರಲು ಹೊರಟ ಹೆಣ್ಣು ತನ್ನ ಅಕ್ಕನಲ್ಲಿ ಬಿಂದಿಗೆಯನ್ನು ಕೇಳುತ್ತಾಳೆ. ಅವಳು ತರಲು ಹೊರಟ ನೀರು ಸಾಮಾನ್ಯವಾದುದಲ್ಲ. ಅದು ರಾಮ ನಾಮ ಎಂಬ ರಸ ಇರುವ, ಗೋವಿಂದ ಎಂಬ ಗುಣವಿರುವ ನೀರು. ಆದ್ದರಿಂದ ಆಕೆ ಆಧ್ಯಾತ್ಮಿಕ ನೀರನ್ನೇ ತರ ಹೊರಟಿದ್ದಾಳೆ.
ನೀರು ಪರಿಶುದ್ಧಿಯ ಸಂಕೇತ. ಆಧ್ಯಾತ್ಮವೆಂದರೂ ಹಾಗೆಯೇ ಎಂಬುದು ದಾಸರ ಭಾವ.

ಮುತ್ತು ಕೊಳ್ಳಿರೋ ಜನರು ಮುತ್ತು ಕೊಳ್ಳಿರೋ
ಮುತ್ತು ಬಂದಿದೆ ಕೊಳ್ಳಿ ಸಚ್ಚಿದಾನಂದ ದಿವ್ಯ

ಜ್ಞಾನವೆಂಬೊ ಪೋಣಿಸಿದ ದಿವ್ಯಮುತ್ತು
ಧ್ಯಾನದಿಂದ ಕೊಂಬುದಿದನು ದೀನರಾದ ಭಕ್ತ ಜನರು. (೭೪೧)

....

ಹಿಂದೆ ವ್ಯಾಪಾರಿಗಳಾಗಿದ್ದ ದಾಸರು ಇಲ್ಲಿ ಅಧ್ಯಾತ್ಮದ ಮುತ್ತನ್ನು ಮಾರಲು ಹೊರಟಿದ್ದಾರೆ. ಇದಕ್ಕೆ ಕೊಡಬೇಕಾದ ಹಣವೆಂದರೆ 'ಧ್ಯಾನ' ಎಂಬಲ್ಲಿ ಭಗವಂತನ ಧ್ಯಾನದ ಮಹತ್ವವನ್ನು ತಿಳಿಯಬಹುದು. "ಈ ಮುತ್ತು ಸತ್-ಚಿತ್ ಆನಂದ ಎಂಬ ಮುತ್ತು. ಹಣ್ಣಿನ ವ್ಯಾಪಾರ ಬೀದಿ ಬೀದಿಯಲ್ಲಿ ನಡೆದರೆ, ಮುತ್ತಿನ ವ್ಯಾಪಾರ ಅಂಗಡಿಯಲ್ಲಿ ನಡೆಯುವಂಥದು. ಶ್ರೀಮಂತರು ಮಾತ್ರ ಮುತ್ತು ಕೊಳ್ಳಲು ಸಾಧ್ಯ. ಉತ್ತಮಾಧಿಕಾರಿಗಳು ಮಾತ್ರ ಜ್ಞಾನ ಹೊಂದಲು ಸಾಧ್ಯ-ಅರ್ಹರು" ೯

ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರು ಕಲ್ಲು ಸಕ್ಕರೆ ಕೊಳ್ಳಿರೋ
ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು
ಫುಲ್ಲಲೋಚನ ಶ್ರೀ ಕೃಷ್ಣನಾಮವೆಂಬ

ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ
ಒತ್ತೊತ್ತಿ ಗೋಣಿಯೊಳ್ತುಂಬುವುದಲ್ಲ
ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ

ಉತ್ತಮ ಸರಕಿದು ಅತಿ ಲಾಭ ಬರುವಂಥ (೨೮೯)

ಸಕ್ಕರೆಯು ಸಿಹಿಯಾಗಿದ್ದರೆ, ಕಲ್ಲುಸಕ್ಕರೆ ಇನ್ನೂ ಸಿಹಿಯಾಗಿರುತ್ತದೆ. ಇಲ್ಲಿ ಶ್ರೀ ಕೃಷ್ಣನಾಮವೆಂಬ ಕಲ್ಲುಸಕ್ಕರೆ ಎಂಬಲ್ಲಿ ದಾಸರ ಭಾವತೀವ್ರತೆ ವ್ಯಕ್ತವಾಗುತ್ತದೆ. ಇದನ್ನೇ ಅತಿ ಲಾಭ ಬರುವಂಥ ಸರಕೆಂದು ದಾಸರು ಆಧ್ಯಾತ್ಮಿಕ ಮೌಲ್ಯವನ್ನು ಎತ್ತಿಹಿಡಿದಿದ್ದಾರೆ.

"ಈ ಸಕ್ಕರೆಯಸವಿ ಬಲ್ಲವರೇ ಬಲ್ಲರು ಎಂದರೆ ಕಲ್ಲುಸಕ್ಕರೆ ಜಗಿದು ತಿನ್ನುವಂಥದಲ್ಲ. ಅದನ್ನು ಮೆಲ್ಲನೆ ಸವಿಯಬೇಕು. ಅವಸರದಲ್ಲಿ ನುಂಗಿದರೆ ಗಂಟಲಕ್ಕೆ ಸಿಕ್ಕಿ ಬೀಳುತ್ತದೆ. ಹಾಗೇ ಬ್ರಹ್ಮ ವಸ್ತುವಿನ ಮಹಿಮೆ ಸವಿಯಬೇಕು. ಮೆಲ್ಲಮೆಲ್ಲನೆ ಅರಗಿಸಿಕೊಳ್ಳಬೇಕು". ೧೦

ವ್ಯಾಪಾರ ನಮಗಾಯಿತು
ಶ್ರೀಪತಿ ಪಾದಾರವಿಂದ ಸೇವೆಯೆಂಬೊ

ಹರಿಕರುಣವೆ ಅಂಗಿ ಗುರುಕರುಣ ಮುಂಡಾಸು
ಹರಿದಾಸರ ದಯವೆಂಬೊ ವಲ್ಲಿ
ಪರಮಪಾಪಿ ಕಲಿ ಎಂಬೊ ಪಾಪಾಸು ಮೆಟ್ಟಿ
ದುರಾತ್ಮರಾದವರ ಎದೆ ಮೇಲೆ ನಡೆವಂಥ (೮೪೮)

....

ಶ್ರೀಪತಿಯ ಪಾದಾರವಿಂದ ಸೇವೆಯ ವ್ಯಾಪಾರವು ಆಧ್ಯಾತ್ಮಿಕದ ವ್ಯಾಪಾರ. ಇಲ್ಲಿರುವ ಸರಕುಗಳೆಂದರೆ, ಹರಿಕರುಣ ಎಂಬ ಅಂಗಿ, ದಯೆ ಎಂಬ ಬಳ್ಳಿ ಇತ್ಯಾದಿ. ಮಾನವನು ಕರುಣೆ, ದಯೆ, ಉತ್ತಮವಾದ ನಡೆ, ನುಡಿ ಶೀಲಗಳನ್ನು ಒಳಗೊಂಡಿರಬೇಕು ಎಂಬುದೇ ಇಲ್ಲಿನ ತಾತ್ಪರ್ಯ.

ನೈವೇದ್ಯವ ಕೊಳ್ಳೋ ನಾರಾಯಣ ಸ್ವಾಮಿ
ದಿವ್ಯ ಷಡುರಸಾನ್ನವನಿಟ್ಟೆನೋ (೫೭೫)

ದಾಸರು ಶ್ರೀಮನ್ನಾರಾಯಣನಿಗೆ ತನ್ನ ಎಲ್ಲಾ ಗುಣಗಳನ್ನು ಸಮರ್ಪಿಸುತ್ತಿದ್ದಾರೆ. ಇಲ್ಲಿನ ನೈವೇದ್ಯವು ಸಮರ್ಪಣಾ ಭಾವದ ಸಂಕೇತವಾಗಿದೆ. ನಾವು ಎಲ್ಲವೂ ಭಗವಂತನಿಗೆ ಅರ್ಪಿಸಿದಾಗ ಒಳಿತಾಗುತ್ತದೆಂಬುದು ದಾಸರ ನಂಬಿಕೆ.

ಬುತ್ತಿಯ ಕಟ್ಟೋ ಮನುಜ ಬುತ್ತಿಯ ಕಟ್ಟೋ
ಬುತ್ತಿಯನ್ನು ಕಟ್ಟಿದರೆ ಎತ್ತಲಾದರು ಉಣಬಹುದು
ಧರ್ಮವೆಂಬ ಮಡಕೆಯಲ್ಲಿ ನಿರ್ಮಲಮನ ಗಂಗೆ ತುಂಬಿ
ಸುಮ್ಮಾನದುರಿಯ ಹಚ್ಚಿ ಒಮ್ಮಾನಕ್ಕನ್ನ ಬಾಗಿ (೬೫೩)

....

ನಾವು ಈ ಜನ್ಮದಲ್ಲಿ ಸತ್ಕರ್ಮಗಳನ್ನು ಮಾಡಿದರೆ ಅದರಿಂದ ಪುಣ್ಯ ಸಂಪಾದನೆಯಾಗುತ್ತದೆ. ಬುತ್ತಿಯ ಆಹಾರವನ್ನು ನಾವು ಕೊಂಡೋಗಿ ತಿನ್ನುವಂತೆ ಇಲ್ಲಿ ಸತ್ಕರ್ಮಗಳನ್ನು ಮಾಡಿದರೆ ಆ ಪುಣ್ಯದ ಫಲವನ್ನು ಜನ್ಮಾಂತರಗಳಲ್ಲಿ ಅನುಭವಿಸಬಹುದು. "ಇಂತಹ ಉಪದೇಶಗಳಲ್ಲಿರುವ ತಿಳುವಳಿಕೆ ಬದುಕನ್ನು ಹಸನಾಗಿ ಮಾಡಬಲ್ಲದು. ಪುರಂದರದಾಸರು ಇಲ್ಲಿ ಮೆರೆದಿರುವ ಸಂಸ್ಕೃತಿ ಶ್ರೇಷ್ಠವಾಗಿರುವಂತೆ ಕರ್ಮಬುತ್ತಿಯನ್ನು ಮಾಡಿಕೊಂಡಿರುವ ಅವರ ದೇಶೀಯ ಸೊಬಗೂ ಮನೋಹರವಾಗಿದೆ." ೧೧

ಇದಕೊಳ್ಳಿ ಭವರೋಗಕೌಷಧವನು
ಇಂದ್ರಿಯವ ಜಯಿಸುವುದೆ ಇದಕೆ ಇಚ್ಛಾಪಥ್ಯ
ವಾಸುದೇವನ ನಾಮ ವಾತವಿಧ್ವಂಸಿನೀ
ಜನಾರ್ದನನ ನಾಮ ಜ್ವರಾಂಕುಶ
ಮಾಧವನ ನಾಮವೇ ಮನಗಂಡ ಮಂಡೂರ
ಮಂಗಳಾತ್ಮನೆ ನಾಮ ಮಾಲ್ಯವಸಂತ (೯೮)

....

ಹುಟ್ಟು ಎಂಬ ರೋಗಕ್ಕೆ ಔಷಧವನ್ನು ತೆಗೆದುಕೊಳ್ಳಬೇಕು. ಇಂದ್ರಿಯ ನಿಗ್ರಹವೇ ಇದಕ್ಕೆ ಪಥ್ಯ. ಪಥ್ಯ ಮಾಡದವನಿಗೆ 'ಔಷಧವೇತಕೆ' ಎಂಬ ಮಾತಿದೆ. ಯಾವುದೇ ಔಷಧ ತೆಗೆದುಕೊಳ್ಳುವಾಗ ಅದು ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ಪಥ್ಯ ಮುಖ್ಯ. ಇಲ್ಲಿ

ಭವರೋಗಕ್ಕೆ ವಿಷ್ಣುವಿನ ನಾನಾ ನಾಮಗಳೇ ಔಷಧಿ. ಇಲ್ಲಿ ಬಳಸಿರುವ ಔಷಧಿಗಳ ಹೆಸರುಗಳೆಲ್ಲವೂ ರಸೌಷಧಿಗಳು. ೧೨ ಭವರೋಗಕ್ಕೆ ಔಷಧಿಯನ್ನು ಕೊಡುವ ವೈದ್ಯನನ್ನಾಗಿ ನಾವು ದಾಸರನ್ನು ಗುರುತಿಸಬಹುದು.

ಯಾರಿಗೆ ಯಾರುಂಟು ಎರವಿನ ಸಂಸಾರ
ನೀರ ಮೇಲಣ ಗುಳ್ಳೆ ನಿಜಬಲ್ಲ ಹರಿಯೆ
ಬಾಯಾರಿತು ಎಂದು ಬಾವಿನೀರಿಗೆ ಪೋದೆ
ಬಾವಿಲಿ ಜಲಬತ್ತಿ ಬರಿದಾಯ್ತು ಹರಿಯೆ (೭೭೯)

....

ಸಾಂಸಾರಿಕ ಬದುಕು ನಶ್ವರ ಎಂಬುದನ್ನು ಈ ಕೀರ್ತನೆ ಸಾರುತ್ತಿದೆ. ನೀರ ಮೇಲಿನ ಗುಳ್ಳೆ ಒಂದು ಮಾಯೆಯಿದ್ದಂತೆ. ಇಲ್ಲಿ ಬಾವಿಯಲ್ಲಿ ಜಲ ಬತ್ತಿರುವುದು, ಮರ ಬಗ್ಗಿ ಶಿರದ ಮೇಲ್ಬೊರಗುವುದು ನಮಗೆ ಕಷ್ಟ ಬಂದಾಗಿನ ಅಸಹಾಯಕ ಸ್ಥಿತಿಯನ್ನು ಬಿಂಬಿಸುತ್ತದೆ. ಒಟ್ಟಿನಲ್ಲಿ ಕಷ್ಟ ಕಾಲದಲ್ಲಿ ದೇವನೊಬ್ಬನೇ ನಮ್ಮನ್ನು ರಕ್ಷಿಸಬಲ್ಲ ಎಂಬ ಭಾವ ಇಲ್ಲಿಯದು.

ಅಂಬಿಗ ನಾ ನಿನ್ನ ನಂಬಿದೆ ಜಗ
ದಂಬಾರಮಣ ನಂಬಿದೆ.

ತುಂಬಿದ ಹರಿಗೋಲಂಬಿಗ ಅದ
ಕೊಂಭತ್ತು ಛಿದ್ರವು ಅಂಬಿಗ
ಸಂಭ್ರಮದಿಂ ನೋಡಂಬಿಗ ಅದ
ರಿಂಬು ನೋಡಿ ನಡೆಸಂಬಿಗ (೨೯)

....

ಜೀವನವೆಂಬ ದೋಣಿಯ ಪ್ರಯಾಣಕ್ಕೆ ಆ ಪರಮಾತ್ಮನೇ ಅಂಬಿಗ ಎಂದು ನಂಬಿದ ದಾಸರು ತಮ್ಮನ್ನು ಮುನ್ನಡೆಸಲು ದೇವರಲ್ಲಿ ಬೇಡಿಕೊಳ್ಳುತ್ತಾರೆ. ಈ ದೇಹವು ದೋಣಿಯನ್ನು ನಡೆಸುವ ಹುಟ್ಟು ಇದ್ದಂತೆ. ಆದರೆ ಆ ಹುಟ್ಟು ಒಂಭತ್ತು ರಂಧ್ರಗಳಿಂದ ಅಂದರೆ ನವದ್ವಾರಗಳಿಂದ ಕೂಡಿದೆ. ತೂತಿರುವ ಹುಟ್ಟನ್ನು ಹಾಯಿಸಿದರೆ ದೋಣಿ ಮುಂದೆ ಸಾಗದು. ಹೊಳೆಯಲ್ಲಿನ ನೀರಿನ ಸೆಳೆತದಿಂದ ದೋಣಿ ಮುಳುಗಬಹುದು. ಇಲ್ಲಿ ಜೀವನವು ಸರಿಯಾಗಿ ಸಾಗಲು ಅಂಬಿಗನೇ (ಪರಮಾತ್ಮ)ನೇ ಬೇಕು. ಪದ್ಯದ ಕೊನೆಯಲ್ಲಿ ಬರುವ 'ಸುಳಿಯೊಳು ಮುಳುಗಿದೆ ಅಂಬಿಗ ಎನ್ನ ಸೆಳೆದುಕೊಂಡೊಯ್ಯೊ ನೀ ನಂಬಿಗ' ಎಂಬುದು ಮೋಕ್ಷದ ಸಂಕೇತವಾಗಿದೆ.

ರಾಮ ನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ
ವಿಠಲ ನಾಮ ತುಪ್ಪವ ಕಲಸಿ ಬಾಯ ಚಪ್ಪರಿಸಿರೊ
ಒಮ್ಮಾನ ಗೋಧಿಯ ತಂದು ವೈರಾಗ್ಯ ಕಲ್ಲಲಿ ಬೀಸಿ
ಸುಮ್ಮಾನೆ ಸಜ್ಜಿಗೆಯ ತೆಗೆದು ಸಣ್ಣ ಶಾವಿಗೆಯ ಹೊಸೆದು (೮೦೫)

....

ಪಾಯಸವು ಎಲ್ಲರಿಗೂ ಸಿಹಿಯನ್ನು ನೀಡುತ್ತದೆ. ಪಾಯಸದ ಉದಾಹರಣೆಯೊಂದಿಗೆ ನಾವು ಹೇಗೆ ಜೀವಿಸಬೇಕೆಂಬುದನ್ನು ಈ ಕೀರ್ತನೆ ಹೇಳುತ್ತದೆ. ನಾವು ಒಮ್ಮನಸ್ಸಿನಿಂದ, ಹೃದಯವಂತರಾಗಿ, ವಿವೇಚನಾಶೀಲರಾಗಿ, ನಿರ್ಲಿಪ್ತರಾಗಿ ದೇವರನ್ನು ಭಜಿಸಿದರೆ ಮನಃಶಾಂತಿ, ಆನಂದ ದೊರಕುತ್ತದೆ. ಅದು ಪಾಯಸದಂತೆ ಸಿಹಿಯಾಗಿರುತ್ತದೆ.

ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ
ಎರಡು ಬರಿದು ಒಂದು ತುಂಬಲಿಲ್ಲ
ತುಂಬಲಿಲ್ಲದ ಕೆರೆಗೆ ಬಂದರು ಮೂವರೊಡ್ಡರು
ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ (೭೫೦)

....

ಈ ಕೀರ್ತನೆಯು ಪುರಂದರದಾಸರ ಗಂಭೀರವಾದ ಆಧ್ಯಾತ್ಮಿಕ ಚಿಂತನೆಗೆ ಸಾಕ್ಷಿ. ಇಲ್ಲಿ ಮಾನವನ ಕಾಯಿಕ, ವಾಚಿಕ, ಮಾನಸಿಕ ಗುಣಗಳ ಸಂಕೇತವಾಗಿ ಮೂರು ಕೆರೆ; ಜಡದೇಹ, ಜೀವಾತ್ಮ, ಪರಮಾತ್ಮನ ಸಂಕೇತವಾಗಿ ಮೂವರು ಒಡ್ಡರು ಪದ ಬಳಕೆಯಾಗಿರಬೇಕು. ಇದೇ ರೀತಿ ಸಾಗುವ ಕೀರ್ತನೆ "ಇನ್ನು ಈ ಅರ್ಥಗಳೆಲ್ಲ ಪುರಂದರವಿಠಲ ಬಲ್ಲ ಅನ್ಯರಾರೂ ತಿಳಿದವರಿಲ್ಲ" ಎಂಬಲ್ಲಿ ಈ ಭಗವಂತನ ದೃಷ್ಟಿಯನ್ನು ದೇವನೊಬ್ಬನೇ ಬಲ್ಲ ಎಂದು ಅರ್ಥೈಸಬಹುದು.

ನಂಬು ಕಂಡ್ಯ ಮನವೆ ನಂಬು ಶ್ರೀಕೃಷ್ಣನ ಚರಣಕಮಲವ
ಒಂಭತ್ತು ಬಾಗಿಲ ಪಟ್ಟಣದೊಳಗೆ ಸಂಭ್ರಮದಿಂದ ಬೈಲಾಗದ ಮುನ್ನ ನೀ

ಆರು ಮಂದಿ ಕಳ್ಳರು ಊರೊಳಗೆ
ಸೂರೆ ಮಾಡಿ ಗಾಸಿ ಮಾಡದ ಮುನ್ನ ನೀ

ಏಳು ಸುತ್ತಿನ ಕೋಟೆ ಘನದುರ್ಗವನ್ನು
ಕಾಲನವರು ಬಂದು ಕರೆಯದ ಮುನ್ನ ನೀ

ದೇಹನಾಯಕ ದೇವರು ತಾವು
ದೇಹದ ಬಿಡಕೆ ಬಿಡಪಾದ ಮುನ್ನ ನೀ

ಪುರವಿದು ಸ್ಥಿರವಲ್ಲ ಮೆಚ್ಚಿ ಕೆಡಲು ಬೇಡ
ಪುರಂದರವಿಠಲನ್ನ ಆ ಪಾದ ಪದುಮವ (೪೭೬)

ಇಲ್ಲಿ ಬರುವ 'ಒಂಭತ್ತು ಬಾಗಿಲ ಪಟ್ಟಣ'ವೆಂದರೆ ನವದ್ವಾರಗಳಿಂದೊಡಗೂಡಿದ ಈ ದೇಹ. ಆರು ಮಂದಿ ಕಳ್ಳರು ಅರಿಷಡ್ವರ್ಗಗಳು. ಅರಿಷಡ್ವರ್ಗಗಳು ನಮ್ಮನ್ನು ನಾಶಪಡಿಸುತ್ತವೆ ಎಂಬ ತತ್ವ ಇಲ್ಲಿದೆ. 'ಪುರವಿದು ಸ್ಥಿರವಲ್ಲ' ಈ ದೇಹ ಶಾಶ್ವತವಲ್ಲ. ಆದ್ದರಿಂದ ಈ ದೇಹದಿಂದ ಆತ್ಮದ ಬಿಡುಗಡೆ ಆಗುವ ಮುನ್ನ ದೇವರನ್ನು ಧ್ಯಾನಿಸಬೇಕು.

ಪುರಂದರದಾಸರ ಕೀರ್ತನೆಗಳಲ್ಲಿನ ಪ್ರತಿಮಾ ಜಗತ್ತನ್ನು ಸ್ಥೂಲವಾಗಿ ಅವಲೋಕಿಸಿದಾಗ ಪ್ರಧಾನವಾಗಿ ಸಸ್ಯಜಗತ್ತು, ಪ್ರಾಣಿಜಗತ್ತು, ಸಾಮಾಜಿಕ ಜಗತ್ತು,ಮತ್ತು ಧಾರ್ಮಿಕ ಜಗತ್ತು ಎಂಬ ನಾಲ್ಕು ವಿಷಯಗಳ ಬಗೆಗೆ ದಸರ ಚಿಂತನಾ ಲಹರಿ ಹರಿದಿರುವುದು ಕಂಡುಬರುತ್ತದೆ. ಸೂಕ್ಷ್ಮವಾಗಿ ನೋಡಿದಾಗ ಧರ್ಮಶಾಸ್ತ್ರ, ನೀತಿಶಾಸ್ತ್ರ, ತತ್ವಶಾಸ್ತ್ರ, ವೈದ್ಯಕೀಯಶಾಸ್ತ್ರ ಮುಂತಾದ ಅದೆಷ್ಟೋ ಶಾಸ್ತ್ರ ವಿಷಯಗಳ ಬಗೆಗೆ ಅವರ ಪರಿಕಲ್ಪನೆಗಳು ಅವರದೇ ಆದ ಶೈಲಿಯಲ್ಲಿ ಬಿಂಬಿತವಾಗಿವೆ. ಮೋಕ್ಷ ಸಂಗ್ರಾಮದಲ್ಲಿ ಭಕ್ತಿಮಾರ್ಗವೇ ಪ್ರಧಾನವಾಗಿ ಕಂಡುಬಂದರೂ ಜ್ಞಾನಮಾರ್ಗ, ಕರ್ಮಮಾರ್ಗಗಳನ್ನು ಜನರಿಗೆ ತಿಳಿಯಪಡಿಸಿ ಪುರಂದರವಿಠಲನ ಪಾದವನ್ನು ಸೇರುವಂತಹ ಹಲವು ಮಾರ್ಗಗಳನ್ನು ತೋರಿಸಿಕೊಟ್ಟಿದ್ದಾರೆ.

ಟಿಪ್ಪಣಿಗಳು

೧. ಡಾ. ಎಚ್ ಎನ್ ಮುರಳೀಧರ; ತಂಬೂರಿ ಮೀಟಿದವ, ಪುಟ ೧೬೬

೨. ಅ.ರಾ. ಮಿತ್ರ; ಪುರಂದರದಾಸ ಕೀರ್ತನ, ಮಧುಕರ ಯಕ್ಕುಂಡಿ.(ಸಂ),ಪುಟ,೮೪

೩. ಅ. ರಾ. ಮಿತ್ರರ ಲೇಖನ "ಪುರಂದರದಾಸರ ಪದಗಳಲ್ಲಿ ಸಾಹಿತ್ಯ ವಿಮರ್ಶೆ" ಮಧುಕರ ಯಕ್ಕುಂಡಿ: ಪುರಂದರದಾಸ – ಕೀರ್ತನ, ಪುಟ ೬೯

೪. ಡಾ.ಹೆಚ್.ಎನ್ ಮುರಳೀಧರ: ತಂಬೂರಿ ಮೀಟಿದವ, ಪುಟ ೧೬೫.

೫. ಡಾ. ಎಚ್. ಎನ್. ಮುರಳೀಧರ : ತಂಬೂರಿ ಮೀಟಿದವ, ಪುಟ,೧೬೬

೬. ಡಾ. ಎಚ್. ಎನ್. ಮುರಳೀಧರ : ತಂಬೂರಿ ಮೀಟಿದವ, ಪುಟ,೧೬೪.

೭. ಡಾ. ಎಚ್. ಎನ್. ಮುರಳೀಧರ : ತಂಬೂರಿ ಮೀಟಿದವ, ಪುಟ,೧೬೪.

೮. ಕೆ.ಸಂಪದ್ಗಿರಿರಾಯರು: ಪುರಂದರದಾಸರಹಾಸ್ಯ ಮನೋವೃತ್ತಿ ಲೇಖನ;ಮಧುಕರ ಯಕ್ಕುಂಡಿ(ಸಂ):ಪುರಂದರದಾಸ–ಕೀರ್ತನ, ಪುಟ, ೧೨೫).

೯. ಭದ್ರಗಿರಿ ಅಚ್ಯುತದಾಸರು: ಪುರಂದರದಾಸರ ಕೆಲವು ರೂಪಕಗಳು. ಲೇಖನ ಮಧುಕರ ಯಕ್ಕುಂಡಿ(ಸಂ): ಪುರಂದರದಾಸ–ಕೀರ್ತನ ಪುಟ, ೫೯

೧೦. ಭದ್ರಗಿರಿ ಅಚ್ಯುತದಾಸರು: ಪುರಂದರದಾಸರ ಕೆಲವು ರೂಪಕಗಳು. ಲೇಖನ ಮಧುಕರ ಯಕ್ಕುಂಡಿ(ಸಂ): ಪುರಂದರದಾಸ–ಕೀರ್ತನ ಪುಟ, ೬೦.

೧೧. ತ. ಸು. ಶಾಮರಾವ್ :'ಪುರಂದರದಾಸರ ಸಾಹಿತ್ಯದಲ್ಲಿ ದೇಸಿ' ಲೇಖನ : ಮಧುಕರ ಯಕ್ಕುಂಡಿ (ಸಂ): ಪುರಂದರದಾಸ–ಕೀರ್ತನ ಪುಟ, ೫೪.

೧೨. ಭಾರತೀಯ ವೈದ್ಯಪದ್ಧತಿಯಾದ ಆಯುರ್ವೇದದ ಒಂದು ವಿಭಾಗ ರಸಶಾಸ್ತ್ರ. ಇದು ಸುಮಾರು ೧೨ನೇ ಶತಮಾನದಲ್ಲಿ ವಿಕಾಸಗೊಂಡಿತು. ವಿವಿಧ ರಾಸಾಯನಿಕ ಅಥವಾ ಲೋಹದ ವಸ್ತುಗಳನ್ನು ಆಯುರ್ವೇದೋಕ್ತ ರೀತಿಯಲ್ಲಿ ಶುದ್ಧೀಕರಿಸಿ ಉಪಯೋಗಿಸಿದರೆ ಯಶಸ್ಸು ಗಳಿಸುತ್ತದೆ. ತುರ್ತುಚಿಕಿತ್ಸೆಗೂ ಇದನ್ನು ಬಳಸುತ್ತಾರೆ.

ಅಧ್ಯಾಯ ೬

ಉಪಸಂಹಾರ

ಅಧ್ಯಾಯ-೬

ಉಪಸಂಹಾರ

ಒಬ್ಬ ಕವಿ, ಕಲಾವಿದ, ದಾಸನಾಗಲಿ ತನ್ನ ಕಾಲದ ಸಮಾಜದ ಚೌಕಟ್ಟಿನೊಳಗೇ ಸಾಗುತ್ತಾನೆ. ಕವಿ ಪ್ರತಿಪಾದಿಸಿದ ಮೌಲ್ಯಗಳು ಸಾರ್ವಕಾಲಿಕ ಸತ್ಯವಾಗಿದ್ದರೂ ವಿಷಯ ಪ್ರತಿಪಾದನೆಯು ಆಯಾ ಕಾಲದ ಯುಗಧರ್ಮವನ್ನವಲಂಬಿಸಿರುತ್ತದೆ. ಸತ್ಯದರ್ಶನಕ್ಕೆ ಸಮಾಜವು ಕನ್ನಡಿಯಿದ್ದಂತೆ. ಕವಿಗೆ ಸತ್ಯದರ್ಶನಕ್ಕೆ ಕಾವ್ಯವು ಒಂದು ಮಾಧ್ಯಮ.

ಸಾಮಾನ್ಯ ಜನರಿಗೆ ಕಾಣದ ಅನೇಕ ಸತ್ಯಗಳನ್ನು ಪುರಂದರದಾಸರು ಕಂಡವರು. ಕಣ್ಣಾರೆ ಕಂಡ ದಿವ್ಯ ಸತ್ಯವನ್ನು ಮನಸಾರೆ ಮೆಚ್ಚಿ ಬಾಳನ್ನು ಕಳೆದವರು. ಅವರು ಕಂಡ ಸತ್ಯ ಹೃದಯ ತುಂಬಿ ಕೀರ್ತನೆಗಳಲ್ಲಿ ಬಂದಿದ್ದು ಅವು ಪೋಣಿಸಿದ ಮುತ್ತಿನಂತಿವೆ.

ಪುರಂದರದಾಸರ ಕೀರ್ತನೆಗಳಲ್ಲಿನ ಪ್ರತಿಮಾ ಜಗತ್ತನ್ನು ಅಭ್ಯಾಸ ಮಾಡಿದಾಗ ಅವರ ಪ್ರಮುಖ , ವಿಶಿಷ್ಟ ಚಿಂತನೆಗಳು ಮತ್ತು ಅವು ಪ್ರತಿಮಾರೂಪದಲ್ಲಿ ಜನರಿಗೆ ಸತ್ಯದ ಸಂವಹನಕ್ಕೆ ನೆರವಾಗಿರುವುದು ಕಂಡು ಬಂದಿದೆ. ಸಾಮಾನ್ಯ ಜನರಿಗೆ ಕಾಣದ ಅದೆಷ್ಟೋ ಸತ್ಯಗಳು ದಾಸರ ಕೀರ್ತನೆಗಳ ಮೂಲಕ ಕಂಡಿವೆ. ಇಲ್ಲೆಲ್ಲ ದಾಸರ ಪ್ರತಿಮಾ ನಿರ್ಮಿತಿ ಕನ್ನಡಿಯಂತೆ ಕೆಲಸ ಮಾಡಿದ್ದು ದಾಸ ಸಾಹಿತ್ಯದ ವ್ಯಾಪಕತೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ಶಾಸ್ತ್ರದ ದೃಷ್ಟಿಯಿಂದ ದಾಸರ ಕೀರ್ತನೆಗಳನ್ನು ಗಮನಿಸಿದರೆ ಇಲ್ಲಿ ಮಾಧ್ವತತ್ವದ ಪ್ರತಿಪಾದನೆಯ ಸಮಗ್ರ ಭಂಡಾರವೇ ಇದೆ.

ಪುರಂದರದಾಸರ ಕೀರ್ತನೆಗಳಲ್ಲಿ ಮುಖ್ಯವಾಗಿ ಭಕ್ತಿಯ ತೀವ್ರತೆ, ಸಾಮಾಜಿಕ ಕಳಕಳಿ, ಪೌರಾಣಿಕ ಚಿತ್ರಗಳು, ಏಕದೇವೋಪಾಸನೆ ಇವೆಲ್ಲವೂ ವ್ಯಕ್ತವಾಗಿದೆ. 'ಎನ್ನ ಕಾಯೋ ಪುರಂದರವಿಠಲ' ಎಂದು ಮುಕ್ತ ಮನಸ್ಸಿನ ಶರಣಾಗತ ಭಾವವಿದೆ. ಮೇಲ್ನೋಟಕ್ಕೆ ಸಾಮಾಜಿಕ ವಿಚಾರ, ವಿಡಂಬನೆಗಳು ಕೆಲವು ಕೀರ್ತನೆಗಳಲ್ಲಿ ಕಂಡುಬಂದರೂ ಇಲ್ಲೆಲ್ಲ ಆಧ್ಯಾತ್ಮಿಕತೆಯಿದೆ. ಜೀವನದ ಎಲ್ಲಾ ಸಮಸ್ಯೆಗಳಿಗೆ ಆಧ್ಯಾತ್ಮಿಕ ಒನ್ನೆಲೆಯಲ್ಲಿ ಉತ್ತರವನ್ನು ಕಂಡುಕೊಳ್ಳುವ ಗುಣವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಅವರ ಕೀರ್ತನೆಗಳಲ್ಲಿ ಆತ್ಮವಿಮರ್ಶೆಯೂ ಹೃದ್ಯವಾಗಿ ವ್ಯಕ್ತಗೊಂಡಿದೆ.

ನಿತ್ಯಬದುಕಿನ ಜಂಜಾಟಗಳು, ಸಂಕೀರ್ಣತೆಗಳನ್ನು, ವಾಸ್ತವತೆಯನ್ನು ಕೀರ್ತನೆಗಳಲ್ಲಿ ಬಿಚ್ಚಿಟ್ಟಿರುವುದು ಪುರಂದರದಾಸರ ಕೀರ್ತನೆಗಳ ಜೀವಂತಿಕೆಗೆ ಸಾಕ್ಷಿಯಾಗಿವೆ. ಎಲ್ಲಿಯೂ ತತ್ವಶಾಸ್ತ್ರವನ್ನು, ನೀತಿಬೋಧೆಯನ್ನು ನೇರವಾಗಿ ಮಾಡದೆ ವೈಚಾರಿಕತೆಯೊಂದಿಗೆ, ಭಾವಮಯವಾಗಿ ಸರಳವಾಗಿ ನಿರೂಪಿಸಿದ್ದಾರೆ. ಧರ್ಮದ ವಿಚಾರದಲ್ಲಿ ದಾಸರ ವಿಚಾರಧಾರೆಗಳು 'ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ' 'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ' ಮೊದಲಾದ ಕೀರ್ತನೆಗಳಲ್ಲಿ ಸ್ಪಷ್ಟವಾಗಿವೆ.

ಮನಶ್ಶುದ್ಧಿಯ ಬಗೆಗೆ ದಾಸರು 'ಮನಶುದ್ಧಿಯಿಲ್ಲದವಗೆ ಮಂತ್ರದ ಫಲವೇನು' ಎಂದು ಪ್ರಶ್ನಿಸಿರುವುದು ಅವರ ಆಧುನಿಕ ದೃಷ್ಟಿಕೋನಕ್ಕೆ ಸಾಕ್ಷಿಯಾಗಿದೆ. 'ತಂದೆ ತಾಯಿಗಳ ಸೇವೆಯೊಂದು ಸ್ನಾನ' ಎನ್ನುವಲ್ಲಿ ಕರ್ಮದ ವಿಚಾರವೂ ಇದೆ.

ಪುರಂದರದಾಸರು ತಮ್ಮೊಳಗಿನ ಕುಂದು ಕೊರತೆಗಳನ್ನು ಗುರುತಿಸಿಕೊಂಡಿದ್ದು ಅವುಗಳನ್ನು ಅಂತರಾತ್ಮನಿಗೆ ನಿವೇದಿಸಿ ಆತ್ಮವನ್ನು ಶುದ್ಧೀಕರಿಸುವ ಗುಣವನ್ನು ಗುರುತಿಸಬಹುದು. 'ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿಯ ಬಿಡು ನಾಲಿಗೆ' ಎಂದು ತಮ್ಮ ಗುಣವನ್ನು ವಿಮರ್ಶಿಸುತ್ತಾರೆ. 'ಇನ್ನು ಪುಟ್ಟಿಸದಿರಯ್ಯ ಪುಟ್ಟಿಸಿದುದಕ್ಕೆ ಪಾಲಿಸಯ್ಯ' ಎಂದು ದೇವರಲ್ಲಿ ಬೇಡಿಕೊಳ್ಳುತ್ತಾರೆ. ಆತ್ಮದ ಬಗೆಗೆ 'ಗೂಡನಗಲಿ ಗೂಡ ತೊರೆದು ಹೋಗುವ ಹಕ್ಕಿಯಂತೆ' ಎಂಬ ದಾಸರ ತಾತ್ವಿಕ ದೃಷ್ಟಿ ವಿನೂತನವಾಗಿದೆ.

ಕೀರ್ತನೆಗಳಲ್ಲಿ ಪ್ರತಿಮಾನಿರ್ಮಿತಿಯ ಮೂಲಕ ಪುರಂದರದಾಸರ ವ್ಯಕ್ತಿತ್ವದ ವಿವಧ ಘಟ್ಟಗಳನ್ನು ಗುರುತಿಸಬಹುದು. ಮೊದಲನೆಯದಾಗಿ ಸಮರ್ಪಣಾಭಾವದ, ಎಲ್ಲವೂ ಕೃಷ್ಣಾರ್ಪಿತ ಎಂಬ ಭಾವವು ಕೀರ್ತನೆಗಳಲ್ಲಿ ಮೂರ್ತರೂಪದಲ್ಲಿ ವ್ಯಕ್ತಗೊಂಡಿದೆ. ಇಲ್ಲಿ ಅಪಾರ ಶ್ರದ್ಧೆ, ನಂಬಿಕೆಗಳನ್ನು ಕಾಣಬಹುದು. ಇನ್ನೊಂದೆಡೆ ದೈವಿಕ ಅನುಭವಗಳಿಗಾಗಿ ಹಂಬಲ, ಉದ್ವೇಗ, ಹತಾಶೆಯೊಂದಿಗೆ ನಿಂದಾಸ್ತುತಿಗಳೂ ಕಂಡುಬರುತ್ತಿದ್ದು ಇಲ್ಲಿ ಪುರಂದರದಾಸರ ಸಾಧನೆಯ ನೆಲೆಯೊಂದನ್ನು ಗುರುತಿಸಬಹುದು. ಇಲ್ಲಿ ಆಧ್ಯಾತ್ಮಿಕ ಚಿಂತನೆ, ಆತ್ಮವಿಮರ್ಶೆಯನ್ನು ಕಾಣಬಹುದು.

ಮೂರನೆಯದಾಗಿ ಸಾಮಾಜಿಕ ಮುಖವನ್ನು ಕಾಣಬಹುದು. ಸಮಾಜದ ಓರೆಕೋರೆಗಳನ್ನು ವಿಡಂಬನೆಯೊಂದಿಗೆ ಎತ್ತಿ ತೋರಿಸುವ ಗುಣ ಇಲ್ಲಿದೆ. ಸಾಂಸಾರಿಕ ಬದುಕಿನ ಜಂಜಾಟಗಳು ಇಲ್ಲಿ ಬಿಂಬಿತವಾಗಿವೆ ಹಾಗೂ ಇದರಿಂದ ಮುಕ್ತಿ ಪಡೆಯುವ ಮಾರ್ಗವನ್ನು ತೋರಿದ್ದಾರೆ.

ಪುರಂದರದಾಸರ ಕೀರ್ತನೆಗಳು ಕೇವಲ ಭಕ್ತಿ ಅಥವಾ ಮುಕ್ತಿಗೆ ಸೀಮಿತವಾಗದೆ ಬದುಕಿನ ವಿವಿಧ ಸ್ತರಗಳನ್ನು ಪ್ರತಿಬಿಂಬಿಸುವಲ್ಲಿ ಸಾಕಾರ ನಿಷ್ಠೆ ಅವರ ಇಡೀ ಅಭಿವ್ಯಕ್ತಿಯಲ್ಲಿ ಹಾಸುಹೊಕ್ಕಗಿರುವುದು ಕಂಡುಬರುತ್ತದೆ. ಪ್ರಚಲಿತ ವಿಷಯಗಳನ್ನೇ ವಸ್ತುವಾಗಿಟ್ಟುಕೊಂಡು ಸುಲಭ ಸರಳ ಭಾಷೆಯಲ್ಲಿ ವಿಷಯಗಳನ್ನು ಪ್ರತಿಪಾದನೆ ಮಾಡಿರುವುದು

ದಾಸರ ಕವಿತಾ ಪ್ರೌಢಿಮೆಗೆ ಸಾಕ್ಷಿ. ಈ ದೃಷ್ಟಿಯಿಂದ ಅವರ ನಿಲುವುಗಳು ಒಂದು ಇನ್ನೊಂದರಿಂದ ಬಿಡಿಬಿಡಿಯಾಗದೆ ಸಮಗ್ರವಾದ ಜೀವನ ದೃಷ್ಟಿಯೊಂದರ ವಿಭಿನ್ನ ಮುಖಗಳೇ ಆಗಿರುವುದು ಸತ್ಯ.

ಒಟ್ಟಂದದಲ್ಲಿ ಹೇಳುವುದಾದರೆ ಪ್ರಸ್ತುತ ಅಧ್ಯಯನವು ಪುರಂದರದಾಸರ ಪ್ರತಿಮಾಜಗತ್ತು ಎಂಬ ವಿಷಯಕ್ಕೆ ಸೀಮಿತವಾಗಿದ್ದು ಅವರ ಕೀರ್ತನೆಗಳಲ್ಲಿ ಸಸ್ಯಜಗತ್ತು, ಪ್ರಾಣಿಜಗತ್ತು, ಸಾಮಾಜಿಕ ಜಗತ್ತು, ಧಾರ್ಮಿಕ ಜಗತ್ತು ಇತ್ಯಾದಿಯಾಗಿ ವಿವಿಧ ಮಜಲುಗಳಲ್ಲಿ ಪ್ರತಿಮಾ ಜಗತ್ತನ್ನು ಕಾಣಲಾಗಿದೆ. ಪುರಂದರದಾಸರ ಸಾಹಿತ್ಯದಲ್ಲಿ ಸಾಕಷ್ಟು ಅಧ್ಯಯನ, ಸಂಶೋಧನೆಗಳು ನಡೆದಿದ್ದರೂ ಅದರ ಆಳಕ್ಕಿಳಿದಾಗ ಇನ್ನಷ್ಟು ವಿಚಾರಗಳು ಸಂಶೋಧನೆಗೆ ವಿಫುಲ ಅವಕಾಶಗಳನ್ನು ತೆರೆದಿಡುತ್ತದೆ.

ಪರಾಮರ್ಶನ ಗ್ರಂಥಸೂಚಿ

೧. ಅ.ರಾ.ಸೇ.(ಸಂ) : ಪರಮಾರ್ಥ ಪದಕೋಶ, ಕಾಮಧೇನು, ಬೆಂಗಳೂರು. ೨೦೦೦

೨. ಇನಾಂದಾರ ವಿ.ಯಂ: ಪಾಶ್ಚಾತ್ಯ ಕಾವ್ಯಮೀಮಾಂಸೆ, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೯.

೩. ಉಷಾಕಿರಣ್: ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಆನಂದ ಪ್ರಕಾಶನ , ಬೆಂಗಳೂರು.

೪. ಕುಲಕರ್ಣಿ ಜೀವಿ, ಗೋಕಾಕ ಎ.ವಿ : ಕಾವ್ಯದಲ್ಲಿ ಪ್ರತಿಮಾ ಸಂವಿಧಾನ, ಹರ್ಷವರ್ಧನ ಪ್ರಕಾಶನ ಮುಂಬಯಿ, ೧೯೯೯.

೫. ನಾವಡ .ಎ .ವಿ; ಗಾಯತ್ರಿ ನಾವಡ (ಸಂ) : ಸಾವಿರಾರು ಕೀರ್ತನೆಗಳು, ಅಂಕಿತ ಪ್ರಕಾಶನ,ಬಸವನಗುಡಿ, ಬೆಂಗಳೂರು, ೨೦೦೮

೬. ಪಾವಂಜೆ ಗುರುರಾಯ (ಸಂ), ವಿಷ್ಣು ಭಟ್ಟ ಪಾದೇಕಲ್ಲು (ಪರಿಶೋಧಕರು) : ಪುರಂದರದಾಸರ ಕೀರ್ತನೆಗಳು, ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ ಉಡುಪಿ, ೨೦೦೧

೭. ಬಸವರಾಜು. ಎಲ್. (ಸಂ) : ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು,೨೦೦೦

೮. ಬಸವಾರಾಧ್ಯ. ಎನ್ : ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧.

೯. ಮಧುಕರ ಯಕ್ಕುಂಡಿ (ಸಂ) : ಪುರಂದರದಾಸ – ಕೀರ್ತನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೧೦. ಮುಗಳಿ. ರಂ. ಶ್ರೀ: ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ೧೯೭೧

೧೧. ಮುರಳೀಧರ ಎಚ್.ಎನ್.: ತಂಬೂರಿ ಮೀಟಿದವ, ಅಂಕಿತ ಪ್ರಕಾಶನ, ಬಸವನಗುಡಿ ಬೆಂಗಳೂರು, ೨೦೦೫

೧೨. ರಾಗೌ : ನಮ್ಮ ಒಗಟುಗಳು, ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೨೦೦೧

೧೩. ಲಕ್ಷ್ಮೀನಾರಾಯಣ ಭಟ್ಟ. ಎನ್.ಎಸ್ (ಸಂ) : ಅನನ್ಯ, ಗೋಪಾಲಕೃಷ್ಣ ಅಡಿಗರ ಸಮಗ್ರ ಕಾವ್ಯದ ಪರಿಶೀಲನೆ, ಕ್ಷಮಾ ಪ್ರಕಾಶನ ಬೆಂಗಳೂರು, ೧೯೯೭

೧೪. ಶಿವರುದ್ರಪ್ಪ. ಜಿ. ಎಸ್ : ಕಾವ್ಯಾರ್ಥ ಚಿಂತನ, ಶಾರದಾ ಪ್ರಕಾಶನ, ಗಾಂಧಿನಗರ ಬೆಂಗಳೂರು, ೧೯೮೮.

೧೫. ಶಿವರುದ್ರಪ್ಪ ಜಿ.ಎಸ್: ಬೆಡಗು, ಸುವಿದ್ಯಾ ಪ್ರಕಾಶನ ಬಸವನಗುಡಿ, ಬೆಂಗಳೂರು, ೧೯೮೯.

೧೬. ಸುಜನಾ : ಹೃದಯ ಸಂವಾದ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

೧೭. ಸವಣೂರ್.ಜಿ.ಬಿ(ಅನು) , ಹಾ. ಮಾ. ನಾ(ಸಂ) : ಸುಶ್ರುತ ಸಂಹಿತಾ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದಾನಿಲಯ, ೧೯೭೬

೧೮. ಸಿದ್ಧಿನಂದನಮಿಶ್ರ : ಆಯುರ್ವೇದೀಯ ರಸಶಾಸ್ತ್ರ